

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 6 ಬುಧವಾರ 2023

ಸಂಪುಟ: 44 | ಸಂಚಿಕೆ: 229 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..



ತೆಲಂಗಾಣ ನೂತನ ಮುಖ್ಯಮಂತ್ರಿಯಾಗಿ ರೇವಂತ್ ರೆಡ್ಡಿ ಆಯ್ಕೆ

ನಾಳೆ ಪ್ರಮಾಣ ವಚನ




ನವದೆಹಲಿ: ತೆಲಂಗಾಣದ ಮುಂದಿನ ಮುಖ್ಯಮಂತ್ರಿಯಾಗಿ ರೇವಂತ್ ರೆಡ್ಡಿ ಅವರನ್ನು ಕಾಂಗ್ರೆಸ್ ಮಂಗಳವಾರ ಅಧಿಕೃತವಾಗಿ ಆಯ್ಕೆ ಮಾಡಿದ್ದು, ಗುರುವಾರ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ತೆಲಂಗಾಣ ಮುಖ್ಯಮಂತ್ರಿ ಆಯ್ಕೆ ಸಂಬಂಧ ಇಂದು ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ನಡೆದ ಸಭೆಯ ನಂತರ ಕಾಂಗ್ರೆಸ್ ಹಿರಿಯ ಮುಖಂಡ ಕೆ.ಸಿ.ವೇಣುಗೋಪಾಲ್, ರೇವಂತ್ ರೆಡ್ಡಿ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದರು. ರೇವಂತ್ ರೆಡ್ಡಿ ಅವರನ್ನು ತೆಲಂಗಾಣ ಶಾಸಕಾಂಗ ಪಕ್ಷದ ಮುಖ್ಯಸ್ಥರನ್ನಾಗಿ ಇಂದು ಸಂಜೆ ಔಪಚಾರಿಕವಾಗಿ ಆಯ್ಕೆ ಮಾಡಲಾಯಿತು. ಡಿ.7ರಂದು ಪ್ರಮಾಣ ವಚನ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.



ಅಪಾರ ಅಭಿಮಾನಿಗಳ ಅಶ್ರುತರ್ಪಣ: ಸರ್ಕಾರಿ ಗೌರವದೊಂದಿಗೆ

ಅರ್ಜುನನ ಅಂತ್ಯಕ್ರಿಯೆ

- 15 ಅಡಿ ಆಳದಲ್ಲಿ ಮಣ್ಣಲ್ಲಿ ಮಲಗಿದ ಭುಜಬಲ ಪರಾಕ್ರಮಿ
- ಮಮ್ಮಲ ಮರುಗಿದ ಅಡವಿ ಬಂಧುಗಳು; ಅಧಿಕಾರಿಗಳ ಕಣ್ಣಲ್ಲೂ ನೀರು
- ಮೊಳಗಿತು ಅರ್ಜುನ ನೀನು ಅಮರ... ಅಮರ... ಅಮರ...



ಮೈಸೂರು,ಡಿ.5(ಎಂಟಿವೈ)– ಕಾಡಾನೆಯೊಂದಿಗಿನ ಕಾಳಗದಲ್ಲಿ ವೀರಮರಣವನ್ನಪ್ಪಿದ ಅರ್ಜುನನ ಅಂತ್ಯಸಂಸ್ಕಾರ ಸರ್ಕಾರಿ ಗೌರವ ಹಾಗೂ ಅಪಾರ ಅಭಿಮಾನಿಗಳ ಅಶ್ರುತರ್ಪಣದೊಂದಿಗೆ ಮಂಗಳವಾರ ನೆರವೇರಿತು.

ಹಾಸನ ಜಿಲ್ಲೆ ಸಕಲೇಶಪುರ ತಾಲೂಕು ಯಸಳೂರು ವಲಯದ ದಬ್ಬಳ್ಳಿಕಟ್ಟೆ ಅರಣ್ಯ ಪ್ರದೇಶದಲ್ಲಿ ಪುಂಡಾನೆಗಳ ಸೆರೆ ಹಿಡಿಯುವ ಕಾರ್ಯಾಚರಣೆ ವೇಳೆ ಮದವೇರಿದ ಒಂಟಿಸಲಗದ ದಾಳಿಗೆ ತತ್ತರಿಸಿ ಸೋಮವಾರ ಉಸಿರು ಚೆಲ್ಲಿದ ಅರ್ಜುನನಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ, ಅದೇ ಸ್ಥಳದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು. ಇದರೊಂದಿಗೆ ಮೈಸೂರು ದಸರೆಯಲ್ಲಿ ಯಶಸ್ವಿಯಾಗಿ 8 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ, 22 ಬಾರಿ ದಸರಾ ಉತ್ಸವದಲ್ಲಿ ಭಾಗಿಯಾಗಿದ್ದ, ಕಾಡುಪ್ರಾಣಿಗಳ ಸೆರೆ ಕಾರ್ಯಾಚರಣೆಯಲ್ಲೂ ಅದ್ವಿತೀಯನಾಗಿದ್ದ ಕೋಟ್ಯಾಂತರ ಜನರ ನೆಚ್ಚಿನ ಗಜರಾಜ ಭೂಮಡಿಲು ಸೇರಿದ.

ಮುಗಿಲು ಮುಟ್ಟಿದ್ದ ಆನೆ ಪಾಲಕರ ಆಕ್ರಂದನ

ಮೈಸೂರು,ಡಿ.5– ಅರ್ಜುನನ ಮಾವುತ ವಿನು ಸೇರಿದಂತೆ ಇತರೆ ಆನೆಗಳ ಮಾವುತರು ಹಾಗೂ ಕಾವಾಡಿಗಳ ಆಕ್ರಂದನ ಮುಗಿಲು ಮುಟ್ಟಿತ್ತು.

ಎಲ್ಲರೂ ಅರ್ಜುನನ್ನು ತಬ್ಬಿ, ಬಿಕ್ಕಿ ಬಿಕ್ಕಿ ಅತ್ತರು. ಅರಣ್ಯಾಧಿಕಾರಿಗಳು ಅವರನ್ನು ಸಂತೈಸಲು ಯತ್ನಿಸಿದರಾದರೂ ಅರ್ಜುನನನ್ನೇ ನೋಡುತ್ತಾ ತಬ್ಬಿ ಕಣ್ಣೀರಾದರು. ಮಾವುತ ವಿನು ತನ್ನ ಜೊತೆಗಾರ ಅರ್ಜುನನ ಬಳಿಯೇ ಓಡಾಡುತ್ತಾ, ತಲೆ ಚಚ್ಚಿಕೊಳ್ಳುತ್ತಾ, 'ಅರ್ಜುನ ಏಳೋ, ಸ್ವಾಮಿ ಎದ್ದೇಳೋ' ಎಂದು ಗೋಳಿಡುತ್ತಿದ್ದರು. 'ನನ್ನನ್ನೂ ಅರ್ಜುನನೊಂದಿಗೆ ಮಣ್ಣಿನಲ್ಲಿ ಹಾಕಿ ಬಿಡಿ' ಎಂದು ಗೋಳಿಡುತ್ತಿದ್ದರು. ಇತರೆ ಮಾವುತರು, ಕಾವಾಡಿಗಳೂ ಅರ್ಜುನ ಇನ್ನು ಮೇಲೇಳುವುದಿಲ್ಲ ಎಂಬುದನ್ನು ನೆನೆದು ಕಣ್ಣೀರಿಡುತ್ತಿದ್ದರು. ಈ ವೇಳೆ ಅರಣ್ಯಾಧಿಕಾರಿಗಳ ಕಣ್ಣಾಲಿಗಳೂ ಒದ್ದೆಯಾಗಿದ್ದವು.

ಇದಕ್ಕೂ ಮುನ್ನ ದಸರಾ ಆನೆಗಳಿಗೆ ಪೂಜೆ ಮಾಡುವ ಮೈಸೂರಿನ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ▶ 9ನೇ ಪುಟಕ್ಕೆ



ಲಘು ಲಾಠಿ ಪ್ರಹಾರ

ದಸರಾ ಆನೆ ಅರ್ಜುನನ ಮೃತದೇಹ ನೋಡಲು ಸ್ಥಳೀಯರು ಮಾತ್ರವಲ್ಲದೆ, ವಿವಿಧ ಜಿಲ್ಲೆಗಳಿಂದ ಅಪಾರ ಅಭಿಮಾನಿಗಳು ಆಗಮಿಸಿದ್ದರು. ವಾಹನವನ್ನು ಸುಮಾರು 2 ಕಿ.ಮೀ ದೂರದಲ್ಲೇ ನಿಲ್ಲಿಸಿ ಅರ್ಜುನನ ಅಂತಿಮ ದರ್ಶನಕ್ಕೆ ಬಂದಿದ್ದರು. ಗಾಂಭೀರ್ಯದ ಪ್ರಭಾರಿಯಾಗಿದ್ದ ಅರ್ಜುನ, ಉಸಿರುಚೆಲ್ಲಿ ನೆಲದಲ್ಲಿ ಮಲಗಿದ್ದನ್ನು ಕಂಡು ಮರುಗಿದರು. ಹತ್ತಿರದ ಬಂಧುವನ್ನು ಕಳೆದುಕೊಂಡ ದುಃಖದಲ್ಲಿ ಕಣ್ಣೀರಾದರು. ಜನರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಅರ್ಜುನನ ಮೃತದೇಹವನ್ನು ಬಳ್ಳೆ ಶಿಬಿರಕ್ಕೆ ಕೊಂಡೊಯ್ಯಬೇಕೆಂಬ ಒತ್ತಾಯ ಹೆಚ್ಚಿತು. ಈ ಪರಿಸ್ಥಿತಿಯಲ್ಲಿ ಇದು ಸಾಧ್ಯವಾಗುವುದಿಲ್ಲ ಎಂಬ ಅರಣ್ಯಾಧಿಕಾರಿಗಳ ಮಾತು ಒಪ್ಪದೆ, ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪರಿಸ್ಥಿತಿ ವಿಕೋಪಕ್ಕೆ ತಿರುಗಿದರೆ ಅಂತ್ಯಸಂಸ್ಕಾರಕ್ಕೆ ಅಡ್ಡಿಯಾಗಬಹುದು ಎಂದು ಪೊಲೀಸರು ಅನಿವಾರ್ಯವಾಗಿ ಲಘು ಲಾಠಿ ಪ್ರಹಾರ ನಡೆಸಿ, ಗುಂಪು ಚದುರಿಸಿದರು. ಪರಿಸ್ಥಿತಿ ತಿಳಿಗೊಂಡ ನಂತರ ಅಂತ್ಯಕ್ರಿಯೆಯ ಪೂಜಾ ವಿಧಾನ ನಡೆಸಲಾಯಿತು.



ನೇಕಾರರು, ಟೈಲರಿಂಗ್ ಸೇರಿ ಅಸಂಘಟಿತ ವಲಯದ ಕಾರ್ಮಿಕರಿಗೆ

ಸಾಮಾಜಿಕ ಭದ್ರತೆ

ಬೆಂಗಳೂರು, ಡಿ.5(ಕೆಎಂಶಿ)–ರಾಜ್ಯದಲ್ಲಿನ ನೇಕಾರರು ಹಾಗೂ ಟೈಲರಿಂಗ್ ಸೇರಿದಂತೆ ಅಸಂಘಟಿತ ವಲಯದ ಹಲವು ಕಾರ್ಮಿಕರಿಗೆ ವಿಶೇಷ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿ ಮಾಡುವುದಾಗಿ ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ವಿಧಾನ ಸಭೆಯಲ್ಲಿ ಭರವಸೆ ನೀಡಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸಿದ್ದು ಸವದಿ ಹಾಗೂ ಕಾಪು ಗುರ್ಮೆ ಸುರೇಶ್ ಶೆಟ್ಟಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಪ್ರತಿ ನಿರ್ಮಾಣ ಕಾಮಗಾರಿಗೆ ಶೇ.1 ರಷ್ಟು ಸೆಸ್ ವಿಧಿಸಲಾಗುತ್ತಿದೆ. ಇದರಡಿ ಸಂಗ್ರಹವಾದ ಹಣದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು, ಹಲವು ಸಾಮಾಜಿಕ ಭದ್ರತಾ ಯೋಜನೆಗಳನ್ನು ಕಟ್ಟಡ ಕಾರ್ಮಿಕರಿಗೆ ಜಾರಿ ಮಾಡಿದೆ ಎಂದರು. ಈ ಯೋಜನೆಗಳನ್ನು ನೇಕಾರರು ಹಾಗೂ ಟೈಲರಿಂಗ್ ಸೇರಿದಂತೆ ಇತರೆ ಯಾವುದೇ ಅಸಂಘಟಿತ ಕಾರ್ಮಿಕರಿಗೆ ವಿಸ್ತರಿಸಲು ಬರುವುದಿಲ್ಲ. ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇದ್ದು, ಮಂಡಳಿಯು ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ



ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕರು ಸೇರಿದಂತೆ 11 ಅಸಂಘಟಿತ ಕಾರ್ಮಿಕರಿಗೆ ಉಚಿತವಾಗಿ ನೋಂದಣಿ ಮಾಡಿಕೊಂಡು, ಗುರುತಿನ ಚೀಟಿ ನೀಡುತ್ತಿದೆ.

ಇ–ಶ್ರಮ್ ಪೋರ್ಟಲ್‌ನಲ್ಲಿಯೂ 379 ವಿಧದ ಅಸಂಘಟಿತ ಕಾರ್ಮಿಕರನ್ನು ಉಚಿತವಾಗಿ ನೋಂದಣಿ ಮಾಡಲಾಗುತ್ತಿದೆ. ರಾಜ್ಯದ ಗಾರ್ಮೆಂಟ್ ಸಂಸ್ಥೆಗಳಲ್ಲಿ ಟೈಲರಿಂಗ್ ವೃತ್ತಿ ಮಾಡುತ್ತಿರುವವರಿಗೆ ಉದ್ಯೋಗಿಯ ಸಂಬಳದ ನಿರ್ದಿಷ್ಟ ಶೇಕಡವಾರು ಮೊತ್ತ ಹಾಗೂ ಸಂಸ್ಥೆಯ ಅಷ್ಟೇ ಮೊತ್ತವನ್ನು ಒಟ್ಟು ಮಾಡಿ ಭವಿಷ್ಯ ನಿಧಿಗೆ ಕೊಡುಗೆ ನೀಡುತ್ತಿದ್ದಾರೆ. ಈ ಭವಿಷ್ಯ ನಿಧಿಯನ್ನು ಉದ್ಯೋಗಿಯ ರಾಜೀನಾಮೆ, ನಿವೃತ್ತಿ, ಅನಾರೋಗ್ಯ, ಮದುವೆ, ಶಿಕ್ಷಣ, ನಿವೇಶನ ಖರೀದಿ ಮತ್ತು ಮನೆ ನಿರ್ಮಾಣ ಮುಂತಾದ ಉದ್ದೇಶಗಳಿಗೆ ಹಿಂಪಡೆಯಲು ಅವಕಾಶ ನೀಡಲಾಗಿದೆ ಎಂದರು. ಆದರೆ ಮನೆಯಲ್ಲಿ ಅಥವಾ ಸಣ್ಣ–ಪುಟ್ಟ ಅಂಗಡಿಗಳಲ್ಲಿ ಟೈಲರಿಂಗ್ ವೃತ್ತಿ ಮಾಡುತ್ತಿರುವವರಿಗೆ ಭವಿಷ್ಯ ನಿಧಿಯ ಸೌಲಭ್ಯ ಇಲ್ಲ. ರಾಜ್ಯಾದ್ಯಂತ ಅಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ 7,280,44 ಟೈಲರಿಂಗ್ ವೃತ್ತಿ ನಿರತ ಕಾರ್ಮಿಕರು ಇದ್ದಾರೆ. ಇವರಿಗೆ ಪ್ರಧಾನಮಂತ್ರಿ ಸುರಕ್ಷಾ ಬಿಮಾ ▶ 6ನೇ ಪುಟಕ್ಕೆ

ಅರ್ಜುನನ ದುರಂತ ಸಾವಿನ ಹಿನ್ನೆಲೆಯಲ್ಲಿ ಸಚಿವರ ಸಭೆ

ಅರಣ್ಯದಲ್ಲೇ ನೀರು, ಆಹಾರ ಸಿಗುವ ವ್ಯವಸ್ಥೆ ಮಾಡಿ; ನಾಡಿಗೆ ವಲಸೆ ಬರುವುದ ತಡೆಯಿರಿ

- ಆನೆ ಹಾವಳಿ ಇರುವ ಜಿಲ್ಲೆಗಳ ಸಚಿವರು, ಶಾಸಕರ ಸಲಹೆ
- ಶೀಘ್ರವೇ ಮುಖ್ಯಮಂತ್ರಿ ಬಳಿ ನಿಯೋಗ ತೆರಳಿ ನೆರವಿಗೆ ಮನವಿ ನಿರ್ಧಾರ

ಬೆಂಗಳೂರು, ಡಿ.5(ಕೆಎಂಶಿ)–ನೀರು, ಮೇವನ್ನು ಅರಣ್ಯದಲ್ಲೇ ಸಮರ್ಪಕವಾಗಿ ಒದಗಿಸುವ ಮೂಲಕ ಆನೆಗಳು ನಾಡಿಗೆ ವಲಸೆ ಬರುವುದನ್ನು ತಡೆಯುವಂತೆ ಸಹೋದ್ಯೋಗಿಗಳೇ ಅರಣ್ಯ ಸಚಿವ ಈಶ್ವರ ಖಂಡ್ರೆಗೆ ಕಿವಿಮಾತು ಹೇಳಿದ್ದಾರೆ.



ದಸರಾ ಅಂಬಾರಿ ಹೊತ್ತಿದ್ದು, ಈಗಲೂ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದ ಅರ್ಜುನ, ಕಾಡಾನೆಗಳೊಂದಿಗಿನ ಕಾಳಗದಲ್ಲಿ ದುರಂತ ಸಾವಿಗೀಡಾದ ಹಿನ್ನೆಲೆಯಲ್ಲಿ ಸಚಿವರು ಕರೆದಿದ್ದ, ಕೊಡಗು, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯ ಜನಪ್ರತಿನಿಧಿಗಳ ಸಭೆಯಲ್ಲಿ ಇಂತಹ ಸಲಹೆ–ಸೂಚನೆಗಳು ವ್ಯಕ್ತವಾಗಿವೆ. ಅರಣ್ಯದಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಇದ್ದರೂ, ಅದು ಸಾಲದಾಗಿದೆ, ಮತ್ತಷ್ಟು ಮೇವು ಹಾಗೂ ನೀರು ಲಭ್ಯವಾಗುವಂತೆ ವ್ಯವಸ್ಥೆ ಮಾಡಿ. ಜೊತೆಗೆ ಅರಣ್ಯದಂಚಿನಲ್ಲಿ ▶ 9ನೇ ಪುಟಕ್ಕೆ



ಪ್ರಯಾಣದಲ್ಲಿ ಮಹಿಳೆಯರು ಮತ್ತಷ್ಟು 'ಸುರಕ್ಷಾ'

- ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗೆ ಸರ್ಕಾರದ ಹೊಸ ಮಾರ್ಗ
- ಟ್ಯಾಕ್ಸಿ, ಕ್ಯಾಬ್‌ಗಳಿಗೆ ಪ್ಯಾನಿಕ್ ಬಟನ್ ಅಳವಡಿಕೆ ಕಡ್ಡಾಯ; ಡಿ.1ರಿಂದಲೇ ಜಾರಿ
- ಪ್ಯಾನಿಕ್ ಬಟನ್‌ಗೆ 7,599 ದರ ನಿಗದಿ; ನವೆಂಬರ್ 30, 2024ಕ್ಕೆ ಡೆಡ್‌ಲೈನ್

ಪ್ಯಾನಿಕ್ ಬಟನ್ ಇಲ್ಲವೆಂದರೆ ಎಫ್‌ಸಿ ಕೊಡಲ್ಲ

"ಪ್ಯಾನಿಕ್ ಬಟನ್ ಅಳವಡಿಸಲು ಒಂದು ವರ್ಷ ಅವಕಾಶವಿದೆ. ಆದರೆ ಈಗ ಯಾವುದೇ ಸಾರ್ವಜನಿಕ ಸೇವಾ ವಾಹನ ಎಫ್‌ಸಿ ಪಡೆಯುವ ವೇಳೆ ಕಡ್ಡಾಯವಾಗಿ ಪ್ಯಾನಿಕ್ ಬಟನ್ ಅಳಡಿಸಿಕೊಂಡಿರಬೇಕು. ಇಲ್ಲದಿದ್ದರೆ ಎಫ್‌ಸಿ ನೀಡುವುದಿಲ್ಲ. ಪ್ಯಾನಿಕ್ ಬಟನ್ ಸಾಧನ ಕುರಿತು ಈಗಾಗಲೇ ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಾರ್ಯಾಗಾರ ನಡೆಸಿ ಮಾಹಿತಿ ನೀಡಲಾಗಿದೆ. ಗಡುವಿನೊಳಗೆ ಎಲ್ಲಾ ಸಾರ್ವಜನಿಕ ಸೇವಾ ವಾಹನಗಳು ಪ್ಯಾನಿಕ್ ಬಟನ್ ಅಳವಡಿಸಿಕೊಂಡಿರಬೇಕು. ಇಲ್ಲದಿದ್ದರೆ ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆಯವರು ಸರ್ಕಾರ ನಿಗದಿ ಮಾಡಿದಷ್ಟು ದಂಡ ವಸೂಲಿ ಮಾಡಲಿದ್ದಾರೆ.

–ದೇವಿಕಾ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮೈಸೂರು.



■ ಬಾಪುಲಿಂಗರಾಜ್ ಅರಸ್

ಮೈಸೂರು, ಡಿ.5– ಟ್ಯಾಕ್ಸಿ ಸೇರಿದಂತೆ ದಿನದ ಯಾವುದೇ ಸಮಯದಲ್ಲಿ ಸಾರ್ವಜನಿಕ ಸೇವಾ ವಾಹನಗಳಲ್ಲಿ ಸಂಚರಿಸುವ ಮಹಿಳೆಯರ ಮೇಲೆ ನಡೆಯುತ್ತಿದ್ದ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಸೇರಿದಂತೆ ಕರ್ನಾಟಕದ ಎಲ್ಲಾ ಸಾರ್ವಜನಿಕ ಪ್ರಯಾಣ ಹಾಗೂ ಇನ್ನಿತರೆ ಸೇವಾ ವಾಹನಗಳಿಗೆ ಭಯದ ಸೂಚಕ ಹಾಗೂ ವಾಹನ ದಿಕ್ಕುಪತ್ತೆ ಉಪಕರಣ (ಪ್ಯಾನಿಕ್ ಬಟನ್– ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್) ಅಳವಡಿಕೆಯನ್ನು ರಾಜ್ಯ ಸರ್ಕಾರ ಕಡ್ಡಾಯಗೊಳಿಸಿದೆ.

ಟ್ಯಾಕ್ಸಿ, ಕ್ಯಾಬ್ ಸೇರಿದಂತೆ ಇತರೆ ಸಾರ್ವಜನಿಕ ಸೇವಾ ವಾಹನಗಳಲ್ಲಿ ಸಂಚರಿಸುವ ವೇಳೆ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಹಾಗೂ ಇನ್ನಿತರೆ ದೌರ್ಜನ್ಯಗಳು ನಡೆಯುತ್ತಿವೆ. ಕೆಲವೊಮ್ಮೆ ಪ್ರಾಣಕ್ಕೂ ಸಂಚಕಾರವಾಗುವ ▶ 9ನೇ ಪುಟಕ್ಕೆ

ಬಟನ್ ಕಾರ್ಯನಿರ್ವಹಣೆ ಖಚಿತಪಡಿಸಿಕೊಳ್ಳಿ...!

ಸಾರ್ವಜನಿಕ ಸೇವಾ ವಾಹನಗಳಿಗೆ ಅಳವಡಿಸುವ ಪ್ಯಾನಿಕ್ ಬಟನ್ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಂಡು ಪ್ರಯಾಣಿಕರು ಸಂಚಾರ ಮಾಡಬೇಕು.

ಬಟನ್ ಚಾಲನೆಯಲ್ಲಿದ್ದರೆ ರೆಡ್ ಲೈಟ್ ಬ್ಲಿಂಕ್ ಆಗುತ್ತಿರುತ್ತದೆ. ಇದರಿಂದ ಪ್ಯಾನಿಕ್ ಬಟನ್ ಕಾರ್ಯನಿರ್ವಹಿಸುತ್ತಿದೆ ಎಂಬುದು ಖಚಿತವಾಗುತ್ತದೆ. ಪ್ಯಾನಿಕ್ ಬಟನ್ ಅಳವಡಿಸಿದ್ದರೂ ಚಾಲಕ ಅದರ ಸಂಪರ್ಕ ಕಡಿತಗೊಳಿಸಿರಬಹುದು. ಇಲ್ಲವೇ ಅದಾಗಿಯೇ ಹಾಳಾಗಿರಬಹುದು. ಆದ ಕಾರಣ ರೆಡ್ ಲೈಟ್ ಗಮನಿಸಿ ಪ್ಯಾನಿಕ್ ಬಟನ್ ಕಾರ್ಯ ನಿರ್ವಹಿಸುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ವಾಹನವನ್ನೇರಬೇಕು. ಇಲ್ಲದಿದ್ದರೆ ತಾವಾಗಿಯೇ ಅಪಾಯ ತಂದುಕೊಂಡಂತಾಗುತ್ತದೆ. ಈ ಕಾರಣದಿಂದ ಸಾರ್ವಜನಿಕರು ಪ್ಯಾನಿಕ್ ಬಟನ್ ಬಗ್ಗೆ ಸಂಪೂರ್ಣ ಎಚ್ಚರವಹಿಸುವುದು ಅತ್ಯವಶ್ಯಕ.


ಬಟನ್ ಒತ್ತಿದರೆ ಕಮಾಂಡ್ ಸೆಂಟರ್‌ಗೆ ಮಾಹಿತಿ ರವಾನೆ

ಸಾರ್ವಜನಿಕ ಸೇವಾ ವಾಹನಗಳಲ್ಲಿ ಸಂಚಾರ ಮಾಡುವ ವೇಳೆ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರೆ ಇಲ್ಲ ಅಪಹರಣ ಯತ್ನ ನಡೆದರೆ ಕೂಡಲೇ ಎದುರುಗಿರುವ ಪ್ಯಾನಿಕ್ ಬಟನ್ ಒತ್ತಬಹುದು.

ಆ ಬಟನ್ ಒತ್ತಿದ ಕೂಡಲೇ ತಾವು ಸಂಚರಿಸುತ್ತಿರುವ ವಾಹನದ ಮಾಹಿತಿ ಹಾಗೂ ಎಚ್ಚರಿಕೆಯ ಸಂದೇಶ ಸಾರಿಗೆ ಇಲಾಖೆಯ ಅಧಿಕೃತ ಕಮಾಂಡ್ ಸೆಂಟರ್‌ಗೆ ರವಾನೆಯಾಗುತ್ತದೆ. ತರುವಾಯ ಕಮಾಂಡ್ ಸೆಂಟರ್, ವಾಹನದ ಲೊಕೇಷನ್ ಸಮೇತವಾಗಿ ವಾಹನ ಚಾಲಕನ ಮಾಹಿತಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ನೀಡಲಿದೆ. ವಾಹನ ಎಲ್ಲಿದೆ, ▶ 6ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 6 ಡಿಸೆಂಬರ್ 2023

ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಡಿ.11ರಂದು ಸಾಮೂಹಿಕ ದೀಪೋತ್ಸವ





ಮೈಸೂರು,ಡಿ.5–ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ಮೈಸೂರು ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘ ಮತ್ತು ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಡಿ.11ರ ಸೋಮವಾರ ಸಂಜೆ 5 ಗಂಟೆಗೆ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಾಮೂಹಿಕ ದೀಪೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತ ಭಕ್ತಾದಿಗಳು ತಮ್ಮ ಸ್ವಂತ ದೀಪ, ಎಣ್ಣೆ ಇತ್ಯಾದಿಗಳನ್ನು ತಂದು ಆವರಣದಲ್ಲಿ ದೀಪವನ್ನು ನಿಗದಿಪಡಿಸಿರುವ ಸ್ಥಳದಲ್ಲಿ ಹಚ್ಚಬಹುದು ಅಥವಾ ಆಯೋಜಕರು ವ್ಯವಸ್ಥೆ ಮಾಡಿರುವ ದೀಪ,ಎಣ್ಣೆ ಇತ್ಯಾದಿಗಳನ್ನು ಬಳಸಿಕೊಂಡು ದೀಪ ಹಚ್ಚಬಹುದು ಇಲ್ಲವೇ ಆಯೋಜಕರು ವ್ಯವಸ್ಥೆ ಮಾಡಿರುವ ದೀಪಗಳನ್ನು ತಮ್ಮ ಹೆಸರಿನಲ್ಲಿ ಮತ್ತು ಪರವಾಗಿ ಬೇರೆಯವರ ಮೂಲಕವೂ ಹಚ್ಚಬಹುದು. ಅಂದು ಸಾಮೂಹಿಕ ಭಜನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಆಸಕ್ತರು ಇದರ ಸದುಪಯೋಗವನ್ನು ಪಡೆದುಕೊಂಡು ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಹಾಗೂ ಸೆಲ್ಫಿ ಪಾಯಿಂಟ್ ವ್ಯವಸ್ಥೆಯನ್ನು ಮಾಡಲಾಗಿದೆ. ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಕೆ.ಜಿ.ಕೊಪ್ಪಲು, ಮೈಸೂರು ಅಥವಾ ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ. ಕೊಪ್ಪಲು, ಸರಸ್ವತಿಪುರಂ ಮೊ. 94483 92488, 9113201893, 7204518109, 9900629393, 9448428899, 7892 172182 ಮೂಲಕ ಸಂಪರ್ಕಿಸಬಹುದು.

ಆದಿವಾಸಿ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು, ಡಿ.5(ಜಿಎ)– ಹೈಕೋರ್ಟ್ ಆದೇಶದನ್ವಯ 3418 ಆದಿವಾಸಿ ಕುಟುಂಬಗಳಿಗೆ ಪುನರ್ವಸತಿ ನೀಡಬೇಕೆಂದು ಒತ್ತಾಯಿಸಿ ಬುಡಕಟ್ಟು ಕೃಷಿಕರ ಸಂಘ, ಆದಿವಾಸಿ ಗಿರಿಜನ ಮಹಿಳಾ ಸಂಘ, ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ, ಆದಿಜಾಂಬವ ಸಂಘ ಹಾಗೂ ಡೀಡ್ ಸಂಸ್ಥೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದ ಆದಿವಾಸಿಗಳನ್ನು ವನ್ಯಜೀವಿ ಕಾಯ್ದೆ ಹೆಸರಿನಲ್ಲಿ ಹೊರಹಾಕಿ ನಿಯಮಾನುಸಾರ ಪುನರ್ವಸತಿ ನೀಡದೆ ಸಂಕಷ್ಟಕ್ಕೆ ತಳ್ಳಿ 50 ವರ್ಷಗಳೇ ಕಳೆದಿವೆ. ಈ ಸಂಬಂಧ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಆದೇಶ ಬಂದು ದಶಕಗಳಾಗಿದೆ. ಅಸ್ಸಾದಿ ವರದಿ ಸಲ್ಲಿಕೆಯಾಗಿ 7 ವರ್ಷಗಳಾದರೂ ಸರ್ಕಾರ ಪುನರ್ವಸತಿ ನೀಡದೆ ಹೈಕೋರ್ಟ್ ಆದೇಶ ಕಡೆಗಣಿಸಿ ಕಾಲಹರಣ ಮಾಡುತ್ತಿದ್ದು, ಇದರಿಂದ ಆದಿವಾಸಿಗಳಿಗೆ ನ್ಯಾಯ ಸಿಗುತ್ತಿಲ್ಲ. ಸಿಎಂ ಸಿದ್ದರಾಮಯ್ಯ ಮೈಸೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮನವಿ ಸಲ್ಲಿಸಿ, ಸಂಬಂಧಪಟ್ಟ ಸಚಿವರು, ಇಲಾಖೆಗೆ ಹಲವು ಬಾರಿ ಪತ್ರ ಬರೆದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ಕಿಡಿಕಾರಿದರು. ಹೈಕೋರ್ಟ್ ಆದೇಶ ಹಾಗೂ ವರದಿಯ 34 ಶಿಫಾರಸ್ಸುಗಳನ್ನು ಕೂಡಲೇ ಜಾರಿಗೊಳಿಸಿ 3418 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಬೇಕು. ಆದಿವಾಸಿಗಳ ಅರಣ್ಯ ಕಾಯ್ದೆಯನ್ವಯ ವೈಯಕ್ತಿಕ ಭೂಮಿ ಹಕ್ಕು, ಸಾಮೂಹಿಕ ಅರಣ್ಯ ಭೂಮಿ ಹಕ್ಕು ಹಾಗೂ ನೆಲಸುಗಳ ಮೇಲಿನ ಹಕ್ಕುಗಳನ್ನು ನೀಡಿ ಅವರ ಪರಂಪರೆಯ ಅರಣ್ಯಗಳ ಮೇಲಿನ ಹಕ್ಕನ್ನು ಗೌರವಿಸಬೇಕು. ಆದಿವಾಸಿ ಹಾಡಿಗಳ ಮಕ್ಕಳಿಗೆ ಆಶ್ರಮ ಶಾಲೆಗಳು, ಸರ್ಕಾರಿ ಶಾಲೆಗಳಿಂದ ಗುಣಮಟ್ಟದ ಶಿಕ್ಷಣ ಲಭ್ಯವಾಗಬೇಕು. ಆದಿವಾಸಿ ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಬೇಕು. ನಾಗರಿಕ ಸೌಕರ್ಯಗಳಾದ ವಾಸದ ಮನೆ, ಶುದ್ಧ ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇರಿದಂತೆ ಅಗತ್ಯ ಸೌಲಭ್ಯ ನೀಡಬೇಕು. ಬಿರ್ಸಾ ಮುಂಡಾ ಹೆಸರಿನಲ್ಲಿ ತಾಲೂಕು ಕೇಂದ್ರಗಳಲ್ಲಿ ನೂರು ಕುಟುಂಬಗಳಿಗೆ ಹಾಡಿ ನಿರ್ಮಾಣ ಮತ್ತು ಆದಿವಾಸಿ ಸಾಧಕರಿಗೆ ಪ್ರಶಸ್ತಿ ನೀಡಬೇಕು. ಆದಿವಾಸಿಗಳ ನಿಗಮ, ಮಂಡಳಿ ಸ್ಥಾಪಿಸಿ ಸಮಗ್ರ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಲ್ಲಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲಿ ಹರಿಹರ ಆನಂದಸ್ವಾಮಿ, ಡಾ.ಶ್ರೀಕಾಂತ್, ಗಿರೀಶ್, ಗಿರಿಜಾ, ರಾಮು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಪಾಲಿಕೆಯಿಂದ ಮೈಸೂರು ನಗರದಲ್ಲಿ ಕೆಎಂಎಫ್ ವ್ಯಾಲಿಡೇಷನ್ ಪ್ರಕ್ರಿಯೆ ಚುರುಕು







ಮೈಸೂರು, ಡಿ.5(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆ ಆರಂಭಿಸಿರುವ ಆಸ್ತಿ ದಾಖಲೆಗಳನ್ನು ಕೆಎಂಎಫ್–24 ಆಸ್ತಿ ಕಣಜದಲ್ಲಿ ಗಣಕೀಕರಣ ಮಾಡುವ ಕಾರ್ಯ ಚುರುಕುಗೊಂಡಿದ್ದು, ಮನೆ–ಮನೆಗೆ ತೆರಳಿ ದಾಖಲೆ ಪತ್ರ ಸಂಗ್ರಹಿಸಲಾಗುತ್ತಿದೆ.

ಸರ್ಕಾರದ ಆದೇಶದನ್ವಯ ನವೆಂಬರ್ 11ರಿಂದ ಡಿಸೆಂಬರ್ 31ರವರೆಗೆ ಕೆಎಂಎಫ್ ವ್ಯಾಲಿಡೇಷನ್ ಪ್ರಕ್ರಿಯೆ ನಡೆಯಲಿದ್ದು, ಪಾಲಿಕೆ ವ್ಯಾಪ್ತಿಯ ಎಲ್ಲಾ 9 ವಲಯ ಕಚೇರಿಗಳ ವಾರ್ಡ್‌ಗಳಲ್ಲಿ ಕಂದಾಯ ಪರಿಶೀಲಕರು ಮನೆ–ಮನೆಗೆ ತೆರಳಿ ಆಸ್ತಿಗಳ ದಾಖಲೆ ಪತ್ರಗಳನ್ನು ಕೆಎಂಎಫ್–24 ಆಸ್ತಿ ಕಣಜದಲ್ಲಿ ಗಣಕೀಕರಣ ಕೆಲಸದಲ್ಲಿ ನಿರತರಾಗಿದ್ದಾರೆ. ಮೈಸೂರು ನಗರದಾದ್ಯಂತ ಸುಮಾರು ಒಂದೂವರೆ ಕೋಟಿಗೂ ಹೆಚ್ಚು ಆಸ್ತಿಗಳಿದ್ದು, ವಲಯ ಕಚೇರಿ–3ರ ವ್ಯಾಪ್ತಿಯಲ್ಲಿ 24,765 ಆಸ್ತಿಗಳಿದ್ದು, ನವೆಂಬರ್ 30ರವರೆಗೆ 5,299 ಮನೆಗಳಿಗೆ ಭೇಟಿ ನೀಡಿರುವ ಅಧಿಕಾರಿಗಳು, 725 ಆಸ್ತಿಗಳ ಡಾಕ್ಯುಮೆಂಟ್ಸ್‌ಗಳನ್ನು ಪಡೆದಿದ್ದಾರೆ.

ಮನೆಗಳಿಗೆ ಭೇಟಿ ನೀಡಿದಾಗ ಮಾಲೀಕರು, ಆಸ್ತಿಯ ಕ್ರಯ ಪತ್ರ, ದಾನ ಪತ್ರ, ಹಕ್ಕು ಖುಲಾಸೆ ಪತ್ರ, ವಿಲ್ ಅಥವಾ ಮರಣ ಶಾಸನ ಪತ್ರ, ವಿಭಾಗ ಪತ್ರ, ಖಾತಾ ಪತ್ರ, ಕಂದಾಯ ರಶೀದಿ, ಫೋಟೋ, ಸ್ವತ್ತಿನ ಫೋಟೋ, ಪ್ಯಾನ್ ಕಾರ್ಡ್, ವಿದ್ಯುತ್ ಬಿಲ್, ನೀರಿನ ಬಿಲ್‌ಗಳ ಜೆರಾಕ್ಸ್ ಪ್ರತಿಯನ್ನು ಕೊಟ್ಟು ತಮ್ಮ ಆಸ್ತಿ ದಾಖಲೆಗಳನ್ನು ಸಂರಕ್ಷಿಸಲು ಸಹಕರಿಸಬೇಕೆಂದು ವಲಯ ಕಚೇರಿ–3ರ ವಲಯ ಆಯುಕ್ತ ಸತ್ಯಮೂರ್ತಿ ಕೋರಿದ್ದಾರೆ.

ರೈತ ಕುಟುಂಬದ ಯುವಕರಿಗೆ ಹೆಣ್ಣು ಸಿಗದಿರುವ ಬಗ್ಗೆ ಶೀಘ್ರ ಬೃಹತ್ ಸಮಾವೇಶ

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಘೋಷಣೆ



ಮೈಸೂರು,ಡಿ.5(ಜಿಎ)–ರೈತ ಕುಟುಂಬದ ಯುವಕರ ಮದುವೆಗೆ ಹೆಣ್ಣು ಸಿಗದಿರುವ ಸಮಸ್ಯೆ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಶೀಘ್ರದಲ್ಲಿ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ನಗರದಲ್ಲಿ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ತಿ, ಮನೆ, ಉತ್ತಮ ಆದಾಯ ಹೊಂದಿರುವ ರೈತ ಯುವಕರಿಗೆ ಮದುವೆಯಾಗಲು ಹೆಣ್ಣು ದೊರೆಯುತ್ತಿಲ್ಲ. ಅತಿವೃಷ್ಟಿ–ಅನಾವೃಷ್ಟಿ, ಬೆಲೆ ಕುಸಿತ ಸಾಲಗಳಿಂದ ಕಂಗೆಟ್ಟಿರುವ ರೈತ ಸಮುದಾಯ ಈ ಸಾಮಾಜಿಕ ಸಮಸ್ಯೆಯಿಂದ ಇನ್ನಷ್ಟು ಸಂಕಷ್ಟಕ್ಕೀಡಾಗಿದೆ. ಡಿ.19ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ರೈತಸಂಘದ ಸಭೆಯಿದ್ದು, ಈ ವಿಚಾರವನ್ನೂ ಪ್ರಸ್ತಾಪಿಸಲಿದ್ದೇವೆ ಎಂದರು.

ಸರ್ಕಾರವು ರೈತ ಕುಟುಂಬದ ವರನನ್ನು ಮದುವೆಯಾಗುವ ವಧುವಿಗೆ 5 ಲಕ್ಷ ಪ್ರೋತ್ಸಾಹ ಧನ ನೀಡಬೇಕು. ಸಾಮೂಹಿಕ ವಿವಾಹಗಳಿಗೆ ಉತ್ತೇಜಿಸಬೇಕು. ಕೃಷಿಯಲ್ಲಿ ಸಾಧನೆ ಮಾಡಿದ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹಧನ ನೀಡಿ, ಇತರರಿಗೂ ಕೃಷಿ, ಕೃಷಿ ಜೀವನದತ್ತ ಒಲವು ಮೂಡಿಸಬೇಕು. ಸರ್ಕಾರಿ ಮತ್ತು ಸರ್ಕಾರೇತರ ಕಚೇರಿಗಳಲ್ಲಿ ಉದ್ಯೋಗ ಮೀಸಲಾತಿ, ಉದ್ಯಮ ಆರಂಭಿಸಲು ಸಾಲ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದರು. ಸಮಸ್ಯೆಯಲ್ಲಿರುವ ಯುವಕರು, ಸಮಾವೇಶದಲ್ಲಿ ಭಾಗವಹಿಸಲು ಇಚ್ಛಿಸುವವರು ಮೊ.ಸಂ 99801 83669, 97421 13881 ಸಂಪರ್ಕಿಸಿ ನೋಂದಣಿ ಮಾಡಿಕೊಳ್ಳಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ತಾಲೂಕು ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್, ಯುವ ಘಟಕದ ಅಧ್ಯಕ್ಷ ಪ್ರೇಮರಾಜು, ಮುಖಂಡ ಪಿ. ಮರಂಕಯ್ಯ ಉಪಸ್ಥಿತರಿದ್ದರು.

ನಾಳೆಯಿಂದ ಅಂತರ ಕಾಲೇಜು ಅಥ್ಲೆಟಿಕ್ಸ್ ಕ್ರೀಡಾಕೂಟ



ಮೈಸೂರು,ಡಿ.5–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ 2023–24ನೇ ಸಾಲಿನ ಅಂತರ ಕಾಲೇಜುಗಳ 94ನೇ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು ಡಿ.7ರಿಂದ 9ರವರೆಗೆ ಓವಲ್ ಮೈದಾನದಲ್ಲಿ ಆಯೋಜಿಸಲಾಗಿದೆ. ಕ್ರೀಡಾಕೂಟದಲ್ಲಿ ಭಾಗವಹಿಸಲು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳ 800ಕ್ಕೂ ಹೆಚ್ಚು ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಅಥ್ಲೆಟಿಕ್ಸ್ ಕ್ರೀಡಾಕೂಟದ ಉದ್ಘಾಟನೆಯನ್ನು ಡಿ.7ರಂದು ಬೆಳಗ್ಗೆ 9 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ನೆರವೇರಿಸಲಿದ್ದಾರೆ. ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ ಹಾಗೂ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಥ್ಲೆಟಿಕ್ಸ್ ಕ್ರೀಡಾಕೂಟದ ಬಹುಮಾನ ವಿತರಣಾ ಸಮಾರಂಭವನ್ನು ಡಿ.9ರಂದು ಮಧ್ಯಾಹ್ನ 12 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ವಿಶ್ವವಿದ್ಯಾನಿಲಯ ಕ್ರೀಡಾ ಮಂಡಳಿ ಸದಸ್ಯರಾದ ಪ್ರೊ.ಬಿ.ಎಸ್.ವಿಶ್ವನಾಥ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.



ಮೈಸೂರಿನ ರಾಮಾನುಜ ರಸ್ತೆಯ 16ನೇ ಕ್ರಾಸ್‌ನಲ್ಲಿರುವ ಶ್ರೀ ಮಲೈ ಮಹದೇಶ್ವರಸ್ವಾಮಿಯ 25ನೇ ವಾರ್ಷಿಕೋತ್ಸವ ಮತ್ತು ಮೂರನೇ ಕಾರ್ತಿಕೋತ್ಸವ ಸೋಮವಾರ ಅದ್ದೂರಿಯಾಗಿ ಜರುಗಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅನ್ನಸಂತರ್ಪಣೆಗೆ ಚಾಲನೆ ನೀಡಿದರು. ಬಾಲ ಕೃಷ್ಣ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕೆ.ಆರ್. ಬ್ಯಾಂಕ್ ನಿರ್ದೇಶಕ ಭಾಸ್ಕರ್, ಮುಖಂಡರಾದ ರಮೇಶ್, ಡೈರಿ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಡಿ.5– ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ–1ರ ಅರೆ ಅಲೆಮಾರಿ, ಅಲೆಮಾರಿ ವಿದ್ಯಾರ್ಥಿಗಳಿಂದ 2023–24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ 'ವಿದ್ಯಾರ್ಥಿವೇತನ', 'ಶುಲ್ಕ ವಿನಾಯಿತಿ' 'ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ' ಸೌಲಭ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು https://ssp.postmatric. karnataka.gov.in ಮೂಲಕ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು 2024ರ ಜನವರಿ 10 ಕೊನೆ ದಿನ. ಹೆಚ್ಚಿನ ಮಾಹಿತಿಗಾಗಿ bcwdhelpline@gmail.com ಮತ್ತು ಸಹಾಯವಾಣಿ ಸಂಖ್ಯೆ 8050770005 ಸಂಪರ್ಕಿಸಬಹುದು.

ಅರ್ಜುನನ ಹೆಸರಿನಲ್ಲಿ ಮಾವುತರಿಗೆ ಪ್ರಶಸ್ತಿ: ಎಂಎಲ್ಸಿ ದಿನೇಶ್ ಗೂಳಿಗೌಡ ಆಗ್ರಹ



ಮೈಸೂರು,ಡಿ.5(ಬಿಎಲ್‌ಯು)– ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ದುರಂತ ಸಾವಿಗೀಡಾಗಿರುವ ಅರ್ಜುನನ ಹೆಸರಿನಲ್ಲಿ ದಸರಾದಲ್ಲಿ ಭಾಗವಹಿಸುವ ಮಾವುತರಿಗೆ ಪ್ರಶಸ್ತಿ ನೀಡಬೇಕೆಂದು ಶಾಸಕ ದಿನೇಶ್ ಗೂಳಿಗೌಡ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಜೊತೆ ಈ ಸಂಬಂಧ ಚರ್ಚಿಸಿದ್ದಾರೆ. ಅರ್ಜುನನಿಗೂ ಮೈಸೂರಿಗೂ ಅವಿನಾಭಾವ ಸಂಬಂಧವಿತ್ತು. ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ 8 ಬಾರಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ಚಿನ್ನದ ಅಂಬಾರಿ ಹೊತ್ತು, ಅರ್ಜುನ ಸೈ ಎನಿಸಿಕೊಂಡಿದ್ದನು. ದಸರಾ ಮಾತ್ರವಲ್ಲದೆ ನೂರಾರು ಕಾಡಾನೆ, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಕೂಡ ಭಾಗಿಯಾಗಿದ್ದನು. ಈ ವೇಳೆ ಆನೆಗಳ ಮಾವುತರು, ಕಾವಾಡಿಗಳು ಹಾಗೂ ಅರಣ್ಯ ಅಧಿಕಾರಿಗಳು ಅಪಾಯಕ್ಕೆ ಸಿಲುಕಿದ ವೇಳೆ ಅರ್ಜುನ ಅವರನ್ನು ಕಾಪಾಡಿದ್ದಾನೆ ಎಂದು ದಿನೇಶ್ ಗೂಳಿಗೌಡ ಸ್ಮರಿಸಿದ್ದಾರೆ.

ಇದರಿಂದ ಅರ್ಜುನನ ನೆನಪು ಶಾಶ್ವತವಾಗಿ ಉಳಿಯಬೇಕು. ಈ ಹಿನ್ನೆಲೆಯಲ್ಲಿ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗಿಯಾಗುವ ಮಾವುತರಿಗೆ ಅರ್ಜುನನ ಹೆಸರಿನಲ್ಲಿ ಪ್ರಶಸ್ತಿ ನೀಡಬೇಕು ಎಂದು ಗೂಳಿಗೌಡರು ಸರ್ಕಾರವನ್ನು ಒತ್ತಾಯಿಸಿದ್ದಾರೆ

ನಿಧನ

ಕನ್ನಾಂಬೀರ ಪಾರ್ವತಿ




ಮೈಸೂರು, ಡಿ. 5– ಮೈಸೂರಿನ ರಾಮಕೃಷ್ಣನಗರದ ನಿವಾಸಿ ಪಾಲಂಗಪ್ಪ ಅವರ ಪತ್ನಿ ಕನ್ನಾಂಬೀರ ಪಾರ್ವತಿ (ಕೆಚೇಟ್ಟೀರಾ) ಮಂಗಳವಾರ ಬೆಳಗ್ಗೆ ನಿಧನರಾದರು. ಅವರಿಗೆ 74 ವರ್ಷ ವಯಸ್ಸಾಗಿತ್ತು. ಮೃತರು ಪತಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಆರ್. ಗಾಯತ್ರಿ




ಮೈಸೂರಿನ ಸಿದ್ದಾರ್ಥ ಬಡಾವಣೆಯ ನಿವಾಸಿ ನಿವೃತ್ತ ಪಶುವೈದ್ಯಾಧಿಕಾರಿ ಡಾ.ಎಂ.ಎನ್.ಸ್ವಾಮಿ ಅವರ ಪತ್ನಿ ಎಂ.ಆರ್.ಗಾಯತ್ರಿ (66) ಸೋಮವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಪುಟ್ಟಮ್ಮ



ಸಾಲಿಗ್ರಾಮದ ಬಾಬು ಜಗಜೀವನರಾಂ ನಗರದ ನಿವಾಸಿ ವೆಂಕಟೇಶ್ ಅವರ ಪತ್ನಿ ಶ್ರೀಮತಿ ಪುಟ್ಟಮ್ಮ (58) ಅವರು ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಾಲಿಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.12.2023 ಬುಧವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023 ರಿಂದ 15.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ರವೀಂದ್ರ ಜೋಶಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿಗಳಿಕೆ–ಉಳಿಕೆ– ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ– ಮೂಕನಹಳ್ಳಿ ರಂಗಸ್ವಾಮಿ, 6.40 ಪದಸಂಸ್ಕೃತಿ – ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ಮನೋರಂಜನ, 10.00 ಎಂ.ಎಸ್. ಆನಂದ್ – ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನಕ ಗೀತ ಗಾಂಭೀರ್ಯ–ಬಾನುಲಿ ಸರಣಿ, ರಚನೆ–ಡಾ. ಶ್ರೀಧರ ಹೆಗಡೆ ಭದ್ರನ್, ಪ್ರಸ್ತುತಿ–ದಿವಾಕರ ಹೆಗಡೆ, 1.20 ಭಾವಗೀತೆಗಳು–ಪಾವನಿ ಕಾಶಿನಾಥ್, 3.00 ಓ.ಎಸ್. ಅರುಣ್–ಹಾಡುಗಾರಿಕೆ, 4.00 ಮಹಿಳಾರಂಗ–ಸ್ತ್ರೀ ಚೇತನ, 6.50 ಕೃಷಿರಂಗ–ಸಾವಯವ ಕೃಷಿ ಉತ್ಪನ್ನಗಳ ನೇರ ಮಾರಾಟ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ ಎನ್.ಪಿ. ಶಂಕರಯ್ಯ, 9.30 ಹಿಂದೂಸ್ಥಾನಿ ಸಂಗೀತ–ರಾಜೀವ್ ತಾರಾನಾಥ್–ಸರೋದ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು

■ **ಮೈಸೂರು ವಿಶ್ವವಿದ್ಯಾನಿಲಯ, ಕಾನೂನು ಅಧ್ಯಯನ ವಿಭಾಗ :** ಡಾ. ಬಿ.ಆರ್. ಅಂಬೇಡ್ಕರ್‌ರವರ ಪರಿನಿಬ್ಬಾಣ ದಿನ ಹಾಗೂ ಸಂವಿಧಾನ ಸಮರ್ಪಣಾ ದಿನಾಚರಣೆ, ಮುಖ್ಯ ಅತಿಥಿಗಳು : ಸಂಸದ ವಿ. ಶ್ರೀನಿವಾಸ ಪ್ರಸಾದ್, ಗೌರವ ಅತಿಥಿಗಳು : ಕಾನೂನು ಪ್ರಾಧ್ಯಾಪಕರಾದ ಡಾ. ರಮೇಶ್, ಡಾ. ಎಂ. ಸುರೇಶ್ ಬೆಂಜಮಿನ್, ಅಧ್ಯಕ್ಷತೆ : ಕಾನೂನು ನಿಕಾಯ ಅಧ್ಯಕ್ಷ ಡಾ. ಟಿ.ಆರ್. ಮಾರುತಿ, ಸ್ಥಳ: ಕಾನೂನು ವಿಭಾಗ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) :** ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪರಿನಿಬ್ಬಾಣ ದಿನಾಚರಣೆ, ಸ್ಥಳ: ಅಂಬೇಡ್ಕರ್ ಭವನದ ಎದುರು, ದಿವಾನ್ಸ್ ರಸ್ತೆ, ಬೆಳಗ್ಗೆ 10ಕ್ಕೆ.

■ **ರತ್ನ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ :** ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿ, ಸ್ಥಳ: ಕನ್ನೇಗೌಡ ಕ್ರೀಡಾ ಮೈದಾನ, ಅಶೋಕಪುರಂ ಪೊಲೀಸ್ ಠಾಣೆ ಹಿಂಭಾಗ, ಬೆಳಗ್ಗೆ 10ರಿಂದ.

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ ಪ್ರೌಢಶಾಲೆ :** ಡಾ. ಬಿ.ಆರ್. ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣ ದಿನದ ಅಂಗವಾಗಿ ಭಾರತ ಭಾಗ್ಯವಿಧಾತ ರೂಪಕ ಪ್ರದರ್ಶನ ಹಾಗೂ ಸಂವಾದ, ಡಾ. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಭಾರತ ಭಾಗ್ಯ ವಿದಾತ ರೂಪಕಕ್ಕೆ ಚಾಲನೆ : ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ. ಬಿ.ಕೆ. ಜಗದೀಶ, ಸಂವಾದದಲ್ಲಿ ಉಪಸ್ಥಿತರು : ಡಾ. ಬಿ.ಆರ್. ಅಂಬೇಡ್ಕರ್ ಪೀಠ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಆರ್. ಇಂದಿರಾ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಪ್ರೊ. ಎಸ್. ನರೇಂದ್ರಕುಮಾರ್, ಅಧ್ಯಕ್ಷತೆ : ಮಾನಸಗಂಗೋತ್ರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಸಿ.ಎ. ಚಿಂದೇಗೌಡ, ಸ್ಥಳ: ಮಾನಸಗಂಗೋತ್ರಿ ಪ್ರೌಢಶಾಲೆ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ವಿಶ್ವಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನ :** ಅಂಬೇಡ್ಕರ್ ಅವರ 67ನೇ ಮಹಾಪರಿನಿಬ್ಬಾಣ ದಿನ, ಮುಖ್ಯ ಅತಿಥಿಗಳು : ಸಾಹಿತಿ ಬನ್ನೂರು ಕೆ. ರಾಜು, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸಹ ಶಿಕ್ಷಕ ಶಿವಯ್ಯ, ಸ್ಥಳ: ಅಕ್ಕನ ಬಳಗ ಶಾಲೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ, ಆಲನಹಳ್ಳಿ, ಬೆಳಗ್ಗೆಯಿಂದ.

■ **ಇಎಸ್‌ಐಸಿ ಪೆನ್ಷನರ್ಸ್ ಅಸೋಸಿಯೇಷನ್ :** ಬೆಳ್ಳಿ ಹಬ್ಬ ಆಚರಣೆ, ಉಪಸ್ಥಿತರು : ಇಎಸ್‌ಐ ಕಾರ್ಪೋರೇಷನ್ ಸದಸ್ಯ ಕೆ. ರಾಧಾಕೃಷ್ಣ, ಐಜಿಪಿ (ನಿವೃತ್ತ) ಕೆ. ಅರ್ಕೇಶ್, ಇಎಸ್‌ಐಸಿ ಪ್ರಾದೇಶಿಕ ನಿರ್ದೇಶಕ ಮತ್ತು ಹೆಚ್ಚುವರಿ ಆಯುಕ್ತ ಟಿ. ರೇಣುಕಾಪ್ರಸಾದ್, ಸ್ಥಳ: ಗುರು ರೆಸಿಡೆನ್ಸಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ :** 2023–24ನೇ ಸಾಲಿನ ಒಂದು ದಿನದ ವಿಶೇಷ ಉಪನ್ಯಾಸ, ಆಂಧ್ರಪ್ರದೇಶದ ಕುಪ್ಪಮ್‌ನ ದ್ರಾವಿಡಿಯನ್ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಶಾರದಾ ಅವರಿಂದ ಬಸದಿಗಳು : ಸಾಂಸ್ಕೃತಿಕ ನಿರ್ವಹಣೆ ಮತ್ತು ಯಾಜಮಾನ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ : ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ. ವಿಜಯಕುಮಾರಿ ಎಸ್. ಕರಿಕಲ್, ನಿರೂಪಣೆ : ಡಾ. ಎಸ್. ಅರುಣಕುಮಾರಿ, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಡಾ. ಬಿ.ಆರ್. ಅಂಬೇಡ್ಕರ್ ಅವರ 67ನೇ ಮಹಾಪರಿನಿಬ್ಬಾಣ ದಿನಾಚರಣೆ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಪದವಿಪೂರ್ವ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಆರ್. ಮಹದೇವಪ್ಪ ಅವರಿಂದ ಉಪನ್ಯಾಸ, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಬಾಬಾ ಸಾಹೇಬ ಅಂಬೇಡ್ಕರ್ ಅವರ ಮಹಾಪರಿನಿಬ್ಬಾಣ ದಿನ, ಮುಖ್ಯ ಭಾಷಣ : ನಳಂದ ಬೌದ್ಧ ವಿಶ್ವವಿದ್ಯಾನಿಲಯ ಪ್ರಧಾನ ಕಾರ್ಯದರ್ಶಿ ಪೂಜ್ಯ ಭಂತೇ ಬೋಧಿದತ್ತ, ಅಧ್ಯಕ್ಷತೆ : ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಉಪಸ್ಥಿತರು : ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಕಚೇರಿ, ಬೆಳಗ್ಗೆ 11.30ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ದಲಿತ ಮಹಾಸಭಾ :** ಡಾ. ಬಿ.ಆರ್. ಅಂಬೇಡ್ಕರ್‌ರವರ 67ನೇ ಪರಿನಿಬ್ಬಾಣದ ಅಂಗವಾಗಿ ಮೇಣದ ಬತ್ತಿ ಮೆರವಣಿಗೆ, ಕ್ರಾಂತಿಗೀತೆಗಳ ಗಾಯನ, ಸಾನ್ನಿಧ್ಯ : ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉಪಸ್ಥಿತರು : ನಳಂದ ಬೌದ್ಧ ವಿಶ್ವವಿದ್ಯಾನಿಲಯದ ಶ್ರೀ ಬೋಧಿದತ್ತ ಭಂತೇಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಉಪ ಪೊಲೀಸ್ ಆಯುಕ್ತ ಮುತ್ತುರಾಜ್, ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಿ. ಬಾನೋತ್, ಸ್ಥಳ: ಗಾಂಧಿನಗರದ ಅಂಬೇಡ್ಕರ್ ವೃತ್ತ, ಸಂಜೆ 6.30 ರಿಂದ.

■ **ಪ್ರದೀಪ್ ಕುಮಾರ್ ಸಿದ್ದಾರ್ಥನಗರ :** ಬಾಬಾ ಸಾಹೇಬ್ ಅಂಬೇಡ್ಕರ್‌ರವರ 67ನೇ ಪರಿನಿಬ್ಬಾಣ ದಿನಾಚರಣೆ ಅಂಗವಾಗಿ ಮೊಂಬತ್ತಿ ಬೆಳಗಿಸುವ ಮೂಲಕ ನುಡಿನಮನ, ಭಾರತೀಯ ಸಾಂಸ್ಕೃತಿಕ ರಾಯಭಾರಿ ಅಮ್ಮ ರಾಮಚಂದ್ರ ಮತ್ತು ತಂಡದಿಂದ ಭೀಮ ಗೀತ ಗಾಯನ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಸಿದ್ದಾರ್ಥನಗರ, ಸಂಜೆ 6ಕ್ಕೆ.

■ **ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ :** ಡಾ. ಬಿ.ಆರ್. ಅಂಬೇಡ್ಕರ್‌ರವರ 67ನೇ ಪರಿನಿಬ್ಬಾಣದ ಅಂಗವಾಗಿ ಕಾರ್ಮಿಕರು, ಒಳಚರಂಡಿ ಸಹಾಯಕರು, ಸ್ವಚ್ಛತಾ ವಾಹನ ಚಾಲಕರಿಂದ ಮೇಣದಬತ್ತಿ ಮೆರವಣಿಗೆ, ಸ್ಥಳ: ಶ್ರೀ ಬಸವೇಶ್ವರ ವೃತ್ತದಿಂದ ಪುರಭವನದವರೆಗೆ, ಸಂಜೆ 6ಕ್ಕೆ

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್, ಮೈಸೂರು:** 28ನೇಯ ಸಂಗೀತ ಸಮ್ಮೇಳನ–2023, ಸಂಗೀತಾಂಜಲಿ, ಸಂಜೆ 5.30 ರಿಂದ ಸಂಪಗೋಡು ವಿಘ್ನರಾಜ ಅವರಿಂದ ಗಾಯನ, ಮತ್ತೂರು ಆರ್. ಶ್ರೀನಿಧಿ–ವಯೋಲಿನ್, ಎ.ವಿ. ಆನಂದ್–ಮೃದಂಗ, ಸಿ.ಪಿ. ವ್ಯಾಸವಿಠ್ಠಲ–ಖಂಜಿರ, ಸಂಜೆ 7.30 ರಿಂದ ಸಮಾರೋಪ ಸಮರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮೇಳನಾಧ್ಯಕ್ಷ ವಿದ್ವಾನ್ ಎ.ವಿ. ಆನಂದ್ ಅವರಿಗೆ ಸಂಗೀತ ವಿದ್ಯಾನಿಧಿ ಪ್ರಶಸ್ತಿ ಪ್ರದಾನ, ಉಡುಪಿಯ ಅರವಿಂದ್ ಹೆಬ್ಬಾರ್ ಅವರಿಂದ ಸಂಗೀತ ಸೇವಾನಿಧಿ ಪ್ರಶಸ್ತಿ ಪ್ರದಾನ, ಅಧ್ಯಕ್ಷತೆ : ಸಂಗೀತ ವಿದ್ಯಾನಿಧಿ ಮೈಸೂರು ಎಂ. ನಾಗರಾಜ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಪಡುವಾರಹಳ್ಳಿ ಗ್ರಾಮಸ್ಥರು :** ಬಾಬಾ ಸಾಹೇಬ ಅಂಬೇಡ್ಕರ್ ಅವರ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಭೀಮ ಜ್ಯೋತಿ ಮೆರವಣಿಗೆ ಹಾಗೂ ಧಮ್ಮ ಸಂಗೀತ ಗಾಯಕಿ ಲಕ್ಷ್ಮಿರಾಂ ಮತ್ತು ತಂಡದಿಂದ ಭೀಮಗೀತೆ ಕಾರ್ಯಕ್ರಮ, ಸ್ಥಳ: ಮಾತೃ ಮಂಡಳಿ ಶಾಲೆಯ ಹತ್ತಿರ, ಅಂಬೇಡ್ಕರ್ ಆಟೋ ನಿಲ್ದಾಣ, ವಿನಾಯಕನಗರ, ಸಂಜೆ 7ಕ್ಕೆ.


ಮೈಸೂರು ಮಿತ್ರ ಬುಧವಾರ 6 ಡಿಸೆಂಬರ್ 2023

ಸೆರೆ ಹಿಡಿಯ ಬೇಕಾಗಿದ್ದು ಒಂದಾದರೆ; ದಾಳಿ ಮಾಡಿದ್ದೇ ಮತ್ತೊಂದು ಆನೆ

● ಮದವೇರಿದ್ದರಿಂದ 45 ನಿಮಿಷ ನಡೆದಿತ್ತು ಘೋರ ಕದನ ● ಇಳಿಜಾರಿನಲ್ಲಿದ್ದ ಅರ್ಜುನನ ಮೇಲೆ ಮುಗಿಬಿದ್ದ ಒಂಟಿಸಲಗ ● ಕಾಡಾನೆ ಚದುರಿಸಲು ಅರಣ್ಯ ಸಿಬ್ಬಂದಿ ಪ್ರಯೋಗಿಸಿದ ಚೆರ್ರಿ ಅರ್ಜುನನ ಕಾಲಿಗೆ ತಗುಲಿತ್ತು

● ಎಂ.ಟಿ.ಯೋಗೇಶ್ ಕುಮಾರ್


ವಾಸ್ತವವಾಗಿ ಸೆರೆ ಹಿಡಿಯುಬೇಕಿದ್ದ ಆನೆ.


ಅರ್ಜುನನ ಮೇಲೆ ಏಕಾಏಕಿ ದಾಳಿ ನಡೆಸಿದ ಆನೆ


ಅರ್ಜುನನ ಕಳೇಬರದ ಮುಂದೆ ಮಾವುತನ ಆಕ್ರಂದನ.

ಮೈಸೂರು, ಡಿ.5– ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ, ಮೊನ್ನೆ–ಮೊನ್ನೆ ಅಂತ್ಯಗೊಂಡ ದಸರಾ ಜಂಬೂಸವಾರಿಯಲ್ಲಿ ಸಾಥ್ ನೀಡಿದ್ದ ಅರ್ಜುನನ ದುರಂತ ಸಾವಿನ ಸುತ್ತ ಹಲವು ಅನುಮಾನ ವ್ಯಕ್ತವಾಗಿದ್ದು, ಮದವೇರಿದ್ದ ಆನೆಯೊಂದಿಗೆ ಕಾದಾಡುವ ವೇಳೆ ಕಾಡಾನೆ ಚದುರಿಸಲು ಅರಣ್ಯ ಸಿಬ್ಬಂದಿ ಹಾರಿಸಿದ ಚುದುರು ಗುಂಡಿನ ಚೆರ್ರಿ ಅರ್ಜುನನ ಕಾಲಿಗೆ ತಾಕಿದೆ. ಹಾಗಾಗಿ ಅರ್ಜುನ ಸಮರ್ಥ ಪ್ರತಿದಾಳಿ ನಡೆಸಲು ಸಾಧ್ಯವಾಗಿಲ್ಲ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಹಾಸನ ಜಿಲ್ಲೆಯ ಯಸಳೂರಿನ ಅರಣ್ಯ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಉಪಟಳ ನೀಡುತ್ತಿದ್ದ 'ವಿಕ್ರಮ' ಎಂದು ಸ್ಥಳೀಯರು ಕರೆಯುತ್ತಿದ್ದ ಕಾಡಾನೆ ಸೆರೆ, ಸ್ಥಳಾಂತರಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿತ್ತು. ಸ್ಥಳೀಯ ಅರಣ್ಯ ಸಿಬ್ಬಂದಿ ಯಸಳೂರು ವಲಯದ ದಬ್ಬಳ್ಳಿಕಟ್ಟೆ ಬಳಿ ಹೋಗುತ್ತಿದ್ದಾಗ ಮದವೇರಿದ ಕಾಡಾನೆ ಏಕಾಏಕಿ ದಾಳಿಗೆ ಮುಂದಾಗಿದೆ. ಸೆರೆ ಹಿಡಿಯಲು ನಿರ್ಧರಿಸಿದ್ದ ಆನೆಯ ಬದಲು ಬೇರೆ ಆನೆ ದಾಳಿ ನಡೆಸಿದೆ. ಈ ಆನೆಯನ್ನು ಅರಣ್ಯ ಸಿಬ್ಬಂದಿ ಈ ಮೊದಲು ನೋಡಿದ್ದೇ ಇಲ್ಲ. ತನ್ನ ರೌದ್ರಾವತಾರದಿಂದ ಎಲ್ಲರನ್ನು ಬೆಚ್ಚಿ ಬೀಳಿಸಿದೆಯಲ್ಲದೆ, ಕರ್ನಾಟಕ ಅರಣ್ಯ ಇಲಾಖೆಯ ಅಮೂಲ್ಯ ಆಸ್ತಿಯಾಗಿದ್ದ ಅರ್ಜುನನ್ನು ಬಲಿ ಪಡೆದಿದೆ.

ಎರಡನೇ ಬಾರಿ ಕಾಳಗ: ಆನೆ ಸೆರೆ ಕಾರ್ಯಾಚರಣೆಯಲ್ಲಿ ಒಂಟಿಸಲಗವನ್ನು ಕೆಲವೇ ನಿಮಿಷದಲ್ಲಿ ಅರ್ಜುನ ಹಿಮ್ಮೆಟ್ಟಿಸಿದ್ದ. ಕಾದಾಡುವ ವೇಳೆ ಪ್ರಯೋಗಿಸಿದ ಅರವಳಿಕೆ ಮದ್ದು ಆಕಸ್ಮಿಕವಾಗಿ ಪ್ರಶಾಂತ ಆನೆಗೆ ತಗುಲಿತ್ತು. ಕ್ಷಣಾರ್ಧದಲ್ಲೇ ಸಿಬ್ಬಂದಿ ಸಾಕಾನೆ ಪ್ರಶಾಂತನ ದೇಹಕ್ಕೆ ಚುಚ್ಚಿಕೊಂಡಿದ್ದ ಅರವಳಿಕೆ ಇಂಜೆಕ್ಷನ್ ಹೊರತೆಗೆದರಾದರೂ ಅಷ್ಟರಲ್ಲಾಗಲೇ ಅರ್ಧದಷ್ಟು ಮಂಪರು ಔಷಧಿ ಪ್ರಶಾಂತನ ದೇಹ ಸೇರಿತ್ತು. ಇದರಿಂದ ಪ್ರಶಾಂತ ನಿಧಾನವಾಗಿ ಮಂಪರಿಗೆ ಜಾರುತ್ತಾ ನೆಲಕ್ಕೊರಗಿದ್ದಾನೆ.

ಎರಡನೇ ಬಾರಿ ಘೋರ ದಾಳಿ: ಪ್ರಶಾಂತ ಆನೆಯನ್ನು ಸಹಜ ಸ್ಥಿತಿಗೆ ತರುವುದಕ್ಕೆ ರಿಯಾಕ್ಷನ್ ಇಂಜೆಕ್ಷನ್ ನೀಡಿ ಉಪಚರಿಸಲು ಪಶುವೈದ್ಯರು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಅರ್ಜುನನನ್ನು ಅಡ್ಡ ನಿಲ್ಲಿಸಲಾಗಿತ್ತು. ಪ್ರಶಾಂತ ಮಂಪರಿನಿಂದ ಮೇಲೇಳುತ್ತಿದ್ದಂತೆಯೇ ಆ ಆನೆಯನ್ನು ಹಿಮ್ಮೆಟ್ಟಿಸಲು ನಿರ್ಧರಿಸಲಾಗಿತ್ತು. ಈ ವೇಳೆ ಅರ್ಜುನನ ಪ್ರತಿದಾಳಿಗೆ ಬೆಚ್ಚಿ ಕಾಡಿನತ್ತ ಕಾಲ್ಕಿತ್ತಿದ್ದ ಮದಗಜ ಮತ್ತೊಮ್ಮೆ ಮುನ್ನುಗ್ಗಿ ಬಂದಿದೆ. ಅರ್ಜುನನ ಮೇಲಿದ್ದ ಪಶುವೈದ್ಯ ಡಾ.ರಮೇಶ ಮದಗಜಕ್ಕೆ ಅರವಳಿಕೆ ಮದ್ದು ನೀಡಿದ್ದಾರೆ. ಆದರೆ ಮಸ್ತಿಯಲ್ಲಿದ್ದ ಒಂಟಿಸಲಗ ಇನ್ನಷ್ಟು ರೋಷದಿಂದ ಕಾದಾಟಕ್ಕಿಳಿದಿದೆ.

ಅರ್ಜುನನಿಗೂ ಮದವಿತ್ತು: ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ವಾಪಸ್ಸಾದ ಬಳಿಕ ಅರ್ಜುನನಿಗೂ ಮದವೇರಿತ್ತು. ಸಾಮಾನ್ಯವಾಗಿ ಮದವೇರಿದ ಆನೆಯ ಸಹವಾಸಕ್ಕೆ ಬೇರೆ ಆನೆ ಬರಲ್ಲ. ಸಾಧ್ಯವಾದಷ್ಟು ಮದವೇರಿದ ಆನೆಯಿಂದ ದೂರ ಇರುತ್ತವೆ. ಆದರೆ, ಮದವೇರಿದ್ದ ಸ್ಥಿತಿಯಲ್ಲೇ ಇದ್ದ ಅರ್ಜುನನೂ ಒಂಟಿಸಲಗದೊಂದಿಗೆ ಪ್ರತಿದಾಳಿ ಆರಂಭಿಸಿದ್ದಾನೆ. ಸುಮಾರು 13 ನಿಮಿಷ ಕಾದಾಟದಲ್ಲಿ ಅರ್ಜುನನ ಮೇಲೆ ಕೂತಿದ್ದ ಮಾವುತ ವಿನು, ಪಶುವೈದ್ಯ ಡಾ. ರಮೇಶ್, ಭೀಮ ಆನೆಯ ಮಾವುತ ಗುಂಡ ಹಾಗೂ ಸಹಾಯಕ ನಾಲ್ವರು ಅರ್ಜುನನ ಮೇಲಿಂದ ಕೆಳಗೆ ಹಾರಿದ್ದಾರೆ. ಈ ವೇಳೆ ಕಾಡಾನೆಯಿದ್ದ ಸ್ಥಳ ಸ್ವಲ್ಪ ಎತ್ತರದಲ್ಲಿದ್ದ ಕಾರಣ ಅದಕ್ಕೆ ನೆಲೆ ಸಿಕ್ಕ ಕೂಡಲೇ ಕಾಡಾನೆ ಬಿರುಸಿನ ದಾಳಿಗೆ ಮುಂದಾಗಿದೆ.

ಅರ್ಜುನನ್ನು ದಂತದಿಂದ ತಿವಿಯುತ್ತ ಅಟ್ಟಾಡಿಸಿದೆ. ಈ ವೇಳೆ ಅರ್ಜುನನ ರಕ್ಷಣೆಗೆ ಅರಣ್ಯ ಸಿಬ್ಬಂದಿ ಕಾಡಾನೆ ಮೇಲೆ ಹಾರಿಸಲು ಮುಂದಾದ ಬೆದರು ಗುಂಡಿನ(ಸೈಕಲ್ ಬಾಲ್ಸ್ ಮಾದರಿ) ಚೆರ್ರಿ ಅರ್ಜುನನ ಕಾಲಿಗೇ ತಗುಲಿದೆ. ಇದರಿಂದ ಅರ್ಜುನನಿಗೆ ಪ್ರತಿದಾಳಿ ಮುಂದುವರೆಸಲು ಹಿನ್ನಡೆಯಾಗಿದೆ. ಇದನ್ನರಿತ ಕಾಡಾನೆ ಇನ್ನಷ್ಟು ರೋಷದಿಂದ ಅರ್ಜುನನ ಮೇಲೆರಗಿ ಮನಬಂದಂತೆ ದಂತದಿಂದ ತಿವಿದು ಗಾಯಗೊಳಿಸಿದೆ. ಇದರಿಂದ ಅರ್ಜುನನಿಗೆ ಸಾಕಷ್ಟು ಗಾಯವಾಗಿ ಕೊನೆಯುಸಿರೆಳೆದಿದ್ದಾನೆ.

ಕಳೇಬರದ ಬಳಿ ಬಂದು ಹೋದ ಸಲಗ: ಸಾಮಾನ್ಯವಾಗಿ ಕಾಡಾನೆ ದಾಳಿಗೆ ತುತ್ತಾಗಿ ಯಾವುದೇ ಆನೆ ಮಣಿದರೂ, ಕೆಲ ಸಮಯದ ನಂತರ ದಾಳಿ ನಡೆಸಿದ ಆನೆ ವಾಪಸ್ ಬಂದು ಹೋಗುತ್ತವೆ. ಮದವೇರಿದ್ದ ಆನೆಗಳು ಕೆಲ ಸಂದರ್ಭದಲ್ಲಿ ದಾಳಿ ನಡೆಸಿ ಹತ್ಯೆ ಮಾಡಿದ ಆನೆ ಮೃತದೇಹದ ಮೇಲೂ ಮತ್ತೆ ದಾಳಿ ಮಾಡುವುದು ಅಥವಾ ಮೃತದೇಹಕ್ಕೆ ತಿವಿಯುವುದನ್ನು ಮಾಡುತ್ತವೆ. ಇಲ್ಲದಿದ್ದರೆ ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುವಂತೆ ಮೌನವಾಗಿ ನಿಂತು ಕಂಬನಿ ಮಿಡಿಯುತ್ತವೆ. ಅದೇ ಮಾದರಿಯಲ್ಲಿ ಅರ್ಜುನನ್ನು ಬಲಿ ಪಡೆದ ಸಲಗ ರಾತ್ರಿ ಕಳೇಬರದ ಬಳಿ ಬಂದು ಮತ್ತೆ ದಾಳಿ ಮಾಡದೇ ಕೆಲ ಹೊತ್ತು ನಿಂತು, ಮಂಕಾಗಿ ಮರಳಿದೆ.

ಮಡುಗಟ್ಟಿದ ದುಃಖ: ದಸರಾ ಆನೆ ಅರ್ಜುನನ ಸಾವು ಸ್ಥಳೀಯರಲ್ಲಿ ದುಃಖ ಮಡುಗಟ್ಟುವಂತೆ ಮಾಡಿತ್ತು. ಮೈಸೂರಿಂದ ಕರೆತಂದು, ನಮ್ಮೂರಲ್ಲಿ ಅರ್ಜುನನ ಅರಣ್ಯ ಇಲಾಖೆಯವರು ಬಲಿ ಕೊಟ್ಟರು ಎಂಬ ಸುದ್ದಿ ಸ್ಥಳೀಯರನ್ನು ರೊಚ್ಚಿಗೆಬ್ಬಿಸಿತ್ತು. ಆನೆ ಸೆರೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಸಿಬ್ಬಂದಿಯ ಕಣ್ಣಾಲಿ ನೀರಾಡುತ್ತಿದ್ದವು. ಎಲ್ಲೆಡೆ ನೀರವ ಮೌನ ಆವರಿಸಿತ್ತು. ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದ ಅರ್ಜುನನ ಅಕಾಲಿಕ ಸಾವು ಎಲ್ಲರನ್ನು ಚಿಂತೆಗೀಡು ಮಾಡಿದೆ.

ರಕ್ತದ ಮಡುವಿನಲ್ಲಿ ಅರ್ಜುನ

ಕಾಡಾನೆ ದಾಳಿಗೆ ಬಲಿಯಾದ ಅರ್ಜುನನ ಕಳೇಬರ ಬಿದ್ದಿದ್ದ ಸ್ಥಳದಲ್ಲಿ ರಕ್ತ ಮಡುಗಟ್ಟಿದ್ದು ಕಂಡು ಬಂದಿತು. ಇದರಿಂದ ಮದವೇರಿದ ಸಲಗಕ್ಕೆ ಎಷ್ಟು ರೋಷವಿತ್ತು ಎಂದು ಘಟನೆ ನಡೆದ ಸ್ಥಳದಲ್ಲಿನ ಕುರುಹುಗಳು ಸಾರಿ–ಸಾರಿ ಹೇಳುತ್ತಿದ್ದವು. ಅರ್ಜುನನ ಬಾಯೊಳಗೂ ಗಾಯವಾಗಿತ್ತು. ಸಲಗದ ದಂತ ಅರ್ಜುನನ ಅಂಗಳು ಸೀಳಿತ್ತು. ಕುತ್ತಿಗೆ ಭಾಗದಲ್ಲಿ ಆಳವಾದ ಗಾಯವಾಗಿತ್ತು. ಗಂಟಲು ಸೀಳಿತ್ತು. ಈ ದಾಳಿಗೆ ತತ್ತರಿಸಿದ್ದ ಅರ್ಜುನ ಕ್ಷಣ ಮಾತ್ರದಲ್ಲೇ ಕೊನೆಯುಸಿರೆಳೆದಿದ್ದಾನೆ.

ಅರ್ಜಿ ಆಹ್ವಾನ

ಮೈಸೂರು: ರಾಜ್ಯಾದ್ಯಂತ ಹಾಗೂ ಹೊರ ರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಜಾನಪದ, ನೃತ್ಯ, ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ–ಸಂಸ್ಥೆಗಳನ್ನು ಪ್ರೋತ್ಸಾಹಿಸಲು 2023–24ನೇ ಸಾಲಿನ ಸಾಮಾನ್ಯ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಸಂಸ್ಥೆಗಳಿಗೆ ಧನಸಹಾಯ ನೀಡಲು ಸೇವಾ ಸಿಂಧು www.sevasindhu.karnataka.gov.in ಮುಖಾಂತರ ಡಿ.13ರವರೆಗೆ ಕಾಲಾವಕಾಶ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅರ್ಜಿಗಳನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕರಿಸುವುದಿಲ್ಲ. ಮಾಹಿತಿಗಾಗಿ 08022279954/9986837037/8792662814/8792662816/08022213530 ಹಾಗೂ ಸೇವಾ ಸಿಂಧು ವ್ಯವಸ್ಥಾಪಕರನ್ನು ಸಂಪರ್ಕಿಸಿ.

ಕಾಲುವೆ ಮೇಲಿದೆ ಬಂಬೂ ಬಿರಿಯಾನಿ; ಪೂರ್ಣ ನಿರ್ಮಾಣದ ನಂತರ ತೆರವಿಗೆ ಮುಂದಾಗಿದೆ ಪಾಲಿಕೆ!




ಮೈಸೂರು,ಡಿ.5– ಮೈಸೂರಿನ ಪ್ರತಿಷ್ಠಿತ ಗೋಕುಲಂ ಬಡಾವಣೆಯ ರಾಜಕಾಲುವೆ ಮೇಲೆ ಅನಧಿಕೃತ ನಿರ್ಮಾಣ ತಲೆ ಎತ್ತಿದ್ದು, ಇದನ್ನು ತೆರವುಗೊಳಿಸಲು ನಗರಪಾಲಿಕೆ ಅಧಿಕಾರಿಗಳು ಬುಧವಾರ ಮುಹೂರ್ತ ನಿಗದಿ ಮಾಡಿದ್ದಾರೆ.

ಗೋಕುಲಂ ಒಂದನೇ ಮುಖ್ಯರಸ್ತೆಯಲ್ಲಿ ರಾಜಕಾಲುವೆ ಮೇಲೆಯೇ ಆಧುನಿಕ ಮಾದರಿ ಬಿದಿರಿನ ಗುಡಿಸಲು ನಿರ್ಮಾಣವಾಗಿದೆ. ವ್ಯಕ್ತಿಯೊಬ್ಬರು ಇದನ್ನು ನಿರ್ಮಿಸಿ, ಬಂಬೂ ಬಿರಿಯಾನಿ ಹೋಟೆಲ್ ನಡೆಸಲು ಬಾಡಿಗೆಗೆ ನೀಡಿದ್ದಾರೆ ಎನ್ನಲಾಗಿದೆ ಹೊರವಲಯದಲ್ಲೆಲ್ಲೋ ಅಲ್ಲ ನಗರದ ಹೃದಯ ಭಾಗದಲ್ಲೇ ರಾಜಕಾಲುವೆ ಆಕ್ರಮಿಸಿದರೂ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ. ಇದನ್ನು ರಾತ್ರೋರಾತ್ರಿ ನಿರ್ಮಿಸಿಲ್ಲ. ಕನಿಷ್ಠ ಒಂದು ವಾರ ಕಾಲ ನಿರ್ಮಾಣ ಕಾರ್ಯ ನಡೆದಿದೆ. ಆದರೂ ಪಾಲಿಕೆ ಅಧಿಕಾರಿಗಳ ಕಣ್ಣಿಗೆ ಬಿದ್ದಿಲ್ಲ ಎಂದರೆ ವಿಷಾದನೀಯ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬುಧವಾರ ಮುಹೂರ್ತ: ಈ ಬಗ್ಗೆ ನಗರಪಾಲಿಕೆ ವಲಯ ಕಚೇರಿ 4ರ ಸಹಾಯಕ ಆಯುಕ್ತೆ ಚಂದ್ರಮ್ಮ ಪ್ರತಿಕ್ರಿಯಿಸಿ, ಗೋಕುಲಂನಲ್ಲಿ ರಾಜಕಾಲುವೆ ಮೇಲೆ ಬಿದಿರಿನ ಬಂಬುಗಳಿಂದ ಹೋಟೆಲ್ ಮಾದರಿ ನಿರ್ಮಿಸಿರುವ ಬಗ್ಗೆ ಮಾಹಿತಿ ತಿಳಿದ ಕೂಡಲೇ ಪರಿಶೀಲನೆ ನಡೆಸಲಾಗಿದೆ. ಆದರೆ ಅದನ್ನು ನಿರ್ಮಿಸಿದ್ದು ಯಾರೆಂದು ತಿಳಿದುಬಂದಿಲ್ಲ. ನಮ್ಮ ಸಿಬ್ಬಂದಿ ಅಲ್ಲಿದ್ದ ಕೆಲ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಬುಧವಾರ ಬೆಳಗ್ಗೆ ಆ ನಿರ್ಮಾಣವನ್ನು ತೆರವುಗೊಳಿಸಿ, ಸಂಬಂಧಪಟ್ಟವರ ವಿರುದ್ಧ ಕ್ರಮ ವಹಿಸಲಾಗುವುದು ಎಂದು ತಿಳಿಸಿದ್ದಾರೆ.

ಛಾಯಾಗ್ರಾಹಕ ಕೆ.ವಿ.ಸುಬ್ಬರಾವ್ ನಿಧನ



ಮೈಸೂರು,ಡಿ.5–ಮೈಸೂರು ಬೋಗಾದಿ ಎರಡನೇ ಹಂತದ ಸಿಎಫ್‌ಟಿಆರ್‌ಐ ಬಡಾವಣೆ ನಿವಾಸಿ, ಹಿರಿಯ ಛಾಯಾಗ್ರಾಹಕ ಕೆ.ವಿ.ಸುಬ್ಬರಾವ್(94) ಮಂಗಳವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

1950ರಲ್ಲಿ ಧನ್ವಂತರಿ ರಸ್ತೆಯ ಗಾಯಿತ್ರಿ ಭವನದ ಕಟ್ಟಡದಲ್ಲಿ 'ಫೋಟೋ ಪ್ಲಾಸ್' ಎಂಬ ಹೆಸರಿನ ಸ್ಟುಡಿಯೋ ಸ್ಥಾಪಿಸಿ, ಬ್ಲಾಕ್ ಅಂಡ್ ವೈಟ್ ಭಾವಚಿತ್ರ ತೆಗೆದು, ಸಾರ್ವಜನಿಕರಿಗೆ ನೀಡುತ್ತಿದ್ದರು. ತಂತ್ರಜ್ಞಾನ ಮುಂದುವರೆದಂತೆ ಮ್ಯಾನ್ಯುಯಲ್ ಜಮಾನ ಪಕ್ಕಕ್ಕೆ ಸರಿದಿದೆ. ಆದರೂ ಆ ಕಾಲದ ಕ್ಯಾಮರಾ, ಪ್ರಿಂಟರ್ ಸೇರಿದಂತೆ ಇತರೆ ಭಾವಚಿತ್ರ ಕ್ಲಿಕ್ಕಿಸುವ ಪರಿಕರಗಳನ್ನು ಮನೆಯಲ್ಲೇ ಪ್ರದರ್ಶನಕ್ಕಿಟ್ಟಿದ್ದರು. ಅಲ್ಲದೆ, ಇತ್ತೀಚೆಗೆ ಮೈಸೂರು ಮಹಾರಾಜರ ಅರಮನೆಯಲ್ಲಿ ಛಾಯಾಚಿತ್ರ ಪ್ರದರ್ಶನ ಮಾಡಿ, ರಾಜ ಪರಿವಾರದಿಂದ ಗೌರವಕ್ಕೂ ಪಾತ್ರರಾಗಿದ್ದರು.

ಮೆಕ್ಕೆಜೋಳ ಗೋದಾಮಿನ ಕೊಠಡಿ ಕುಸಿತ; 7 ಕಾರ್ಮಿಕರ ಶವ ಹೊರಕ್ಕೆ, ಓರ್ವನ ರಕ್ಷಣೆ

ವಿಜಯಪುರ, ಡಿ.5– ನಗರದ ಕೈಗಾರಿಕಾ ಪ್ರದೇಶದ ಖಾಸಗಿ ಗೋದಾಮಿನಲ್ಲಿ ಜೋಳದ ಚೀಲಗಳ ಬೃಹತ್ ರಾಶಿಯಡಿ ಸಿಲುಕಿ 7 ಕಾರ್ಮಿಕರು ಮೃತಪಟ್ಟಿದ್ದು, ಓರ್ವ ಕಾರ್ಮಿಕ ಪಾರಾಗಿದ್ದಾರೆ.

ಗೋದಾಮುಗಳಲ್ಲಿ ಇಟ್ಟಿದ್ದ ನೂರಾರು ಜೋಳದ ಚೀಲಗಳು ವಾಲಿ ಕೆಳಗೆ ಬಿದ್ದು ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ಬಿದ್ದಿವೆ. ಎಲ್ಲಾ ಕಾರ್ಮಿಕರು ಬಿಹಾರ ಮೂಲದವರು ಎಂದು ವರದಿಯಾಗಿದೆ.

ಬೆಳಗಾವಿ ವಿಧಾನಸಭೆ ಅಧಿವೇಶನದಲ್ಲಿ ಭಾಗವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್ ಘಟನಾ ಸ್ಥಳಕ್ಕೆ ದೌಡಾಯಿಸಿ ಪರಿಸ್ಥಿತಿ, ಮಾಹಿತಿ ಪಡೆದುಕೊಂಡರು. ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೃತದೇಹಗಳನ್ನು ಹೊರತರುವ ಕಾರ್ಯ ನಡೆಯುತ್ತಿದೆ. ಎಷ್ಟು ಮಂದಿ ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ನಿಖರವಾದ ಸಂಖ್ಯೆ ಲಭ್ಯವಿಲ್ಲ ಎಂದು ಹೇಳಿದರು.

ಇದು ಅತ್ಯಂತ ದುರಂತ ಘಟನೆ ಎಂದು ಬಣ್ಣಿಸಿದ ಸಚಿವರು, ಕಾರ್ಮಿಕರು ಬೇರೆ ರಾಜ್ಯದವರು ಎಂದು ಹೇಳಿದರು. ಮೃತದೇಹಗಳ ಶವಪರೀಕ್ಷೆ ನಡೆಸಿ ಸ್ಥಳೀಯ ಆಡಳಿತವನ್ನು ಸಂಪರ್ಕಿಸುವ ಮೂಲಕ ಆಯಾ ರಾಜ್ಯಗಳಿಗೆ ಕಳುಹಿಸಲಾಗುವುದು ಎಂದರು.

ಮೊದಲು ತನಿಖೆ ನಡೆಯಬೇಕಾಗಿರುವುದರಿಂದ ಘಟನೆಗೆ ನಿಖರವಾದ ಕಾರಣವನ್ನು ಈಗ ಹೇಳಲು ಸಾಧ್ಯವಿಲ್ಲ ಎಂದರು. ಗೋದಾಮಿನ ಮಾಲೀಕರ ತಪ್ಪಾಗಿದ್ದರೆ ನಂತರ ಅದನ್ನು ಸಹ ಪರಿಶೀಲಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಂ.ಬಿ.ಪಾಟೀಲ್ ಹೇಳಿದರು.

ಘಟನೆ ಕುರಿತು ಮುಖ್ಯಮಂತ್ರಿಗಳಿಗೆ ಈಗಾಗಲೇ ವಿಷಯ ತಿಳಿಸಿರುವುದಾಗಿ ತಿಳಿಸಿದ ಸಚಿವರು, ಸಂತ್ರಸ್ತರ ಕುಟುಂಬಗಳಿಗೆ ಸರಕಾರದಿಂದ ಪರಿಹಾರ ದೊರಕಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಕಾರ್ಮಿಕರು ಬೇರೆ ರಾಜ್ಯದವರಾಗಿದ್ದರೂ, ಮಾನವೀಯ ಆಧಾರದ ಮೇಲೆ, ಸಂತ್ರಸ್ತರ ಕುಟುಂಬಗಳಿಗೆ ಸ್ವಲ್ಪ ಆರ್ಥಿಕ ನೆರವು ಪಡೆಯಲು ನಾವು ಪ್ರಯತ್ನಿಸುತ್ತೇವೆ. ಅದೇ ಸಮಯದಲ್ಲಿ ಮಾಲೀಕರಿಗೆ ಪರಿಹಾರವನ್ನು ನೀಡುವ ಜವಾಬ್ದಾರಿಯೂ ಇದೆ. ಆ ನಿಟ್ಟಿನಲ್ಲಿ ಸಂತ್ರಸ್ತರಿಗೆ ಪರಿಹಾರ ದೊರಕಿಸಲು ಪ್ರಯತ್ನಿಸಲಾಗುವುದು ಎಂದರು.

ಈ ಹಿಂದೆಯೂ ಇದೇ ಗೋದಾಮಿನಲ್ಲಿ ಇಬ್ಬರು ಮೃತಪಟ್ಟ ಘಟನೆ ನಡೆದಿದ್ದು, ಮಾಲೀಕರು ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಿದ್ದಾರೆ ಎಂಬ ವರದಿಗಳ ಬಗ್ಗೆ ತನಿಖೆ ನಡೆಸಲಾಗುವುದು ಮತ್ತು ಪ್ರಸ್ತುತ ಪ್ರಕರಣದಲ್ಲಿ ಯಾವುದೇ ತಪ್ಪಿತಸ್ಥರನ್ನು ಬಿಡುವುದಿಲ್ಲ ಎಂದು ಸಚಿವ ಎಂ.ಬಿ.ಪಾಟೀಲ್ ಹೇಳಿದರು.

ಅತಿಥಿ ಉಪನ್ಯಾಸಕರ ಪ್ರತಿಭಟನೆ ಮುಂದುವರಿಕೆ



ಮೈಸೂರು,ಡಿ.5(ಜಿಎ)–ಅತಿಥಿ ಉಪನ್ಯಾಸಕರ ಸೇವೆ ಕಾಯಂ ಮಾಡುವಂತೆ ಒತ್ತಾಯಿಸಿ ವಿವಿಧ ಕಾಲೇಜುಗಳ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಪ್ರತಿಭಟನೆ ಮಂಗಳವಾರವೂ ಮುಂದುವರಿಯಿತು.

ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ನೇತೃತ್ವದಲ್ಲಿ ನಗರದ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಎದುರು ಪ್ರತಿಭಟನೆ ನಡೆಸಿದ ಅತಿಥಿ ಉಪನ್ಯಾಸಕರು, ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಂದಾಜು 12 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಹಲವು ವರ್ಷದಿಂದ ಕೆಲಸ ಮಾಡುತ್ತಿರುವ ಇವರಿಗೆ ಸೇವಾ ಭದ್ರತೆ ಇಲ್ಲದಂತಾಗಿದೆ ಎಂದು ಕಿಡಿಕಾರಿದರು. ಈ ನಡುವೆ ಹಲವರು ಇದೀಗ ನಿವೃತ್ತಿ ಅಂಚಿನಲ್ಲಿದ್ದು, ಸೇವಾ ಭದ್ರತೆ ಇಲ್ಲದಿದ್ದರೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಇಂದಿಗೂ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಹೀಗಾಗಿ ಸರ್ಕಾರ ಹಾಗೂ ಸಂಬಂಧಪಟ್ಟವರು ಈಗಲಾದರೂ ನಮ್ಮ ಸಮಸ್ಯೆಗಳ ಬಗ್ಗೆ ನಿಗಾವಹಿಸುವ ಮೂಲಕ ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಯಂ ಮಾಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಜಿ.ವಿ.ರಮೇಶ್, ಕಾರ್ಯದರ್ಶಿ ಕೆಂಪನಂಜಪ್ಪ, ಡಾ.ವೆಂಕಟೇಶ್, ವಿನಾಯಕ, ನಾಗಾರ್ಜುನ, ಕೆಂಪನಂಜಪ್ಪ ಹಲವರು ಭಾಗವಹಿಸಿದ್ದರು.

ಸಿಬ್ಬಂದಿಗೆ ವೇತನ ನೀಡಲು ಮನೆಯನ್ನೇ ಗಿರವಿ ಇಟ್ಟ ಬೈಜು ಸಂಸ್ಥಾಪಕ

ಮುಂಬೈ,ಡಿ.5–ತೀವ್ರ ಕುಸಿತದಲ್ಲಿರುವ ಖ್ಯಾತ ಶೈಕ್ಷಣಿಕ ಸಂಸ್ಥೆ ಬೈಜೂಸ್ ತನ್ನ ಸಿಬ್ಬಂದಿಗಳಿಗೆ ವೇತನ ನೀಡಲು ಮಾಲೀಕರು ಮನೆಗಳನ್ನೇ ಗಿರವಿ ಇಟ್ಟಿದ್ದ ಅಂಶ ಇದೀಗ ಬೆಳಕಿಗೆ ಬಂದಿದೆ.

ಹೌದು.. ಭಾರತದ ಎಜ್ಯುಟೆಕ್ ಸಂಸ್ಥೆ ಬೈಜೂಸ್‌ನ ಸಂಸ್ಥಾಪಕರಾದ ಬೈಜು ರವೀಂದ್ರನ್ ಸಂಸ್ಥೆಯ ಉದ್ಯೋಗಿಗಳಿಗೆ ವೇತನ ನೀಡುವ ಸಲುವಾಗಿ ತಮ್ಮ ಮನೆ ಹಾಗೂ ಕುಟುಂಬ ಸದಸ್ಯರ ಮಾಲೀಕತ್ವದ ನಿವೇಶನಗಳನ್ನು ಅಡಮಾನವಿರಿಸಿದ್ದಾರೆ ಎಂಬುದಾಗಿ ವರದಿಯಾಗಿದೆ. ಪ್ರಸ್ತುತ ಬೈಜೂಸ್ ತೀವ್ರ ಆರ್ಥಿಕ ಸಂಕಷ್ಟವನ್ನೆದುರಿಸುತ್ತಿದ್ದು ನಗದು ಕೊರತೆಯನ್ನು ಪರಿಹರಿಸಲು ರವೀಂದ್ರನ್ ಈ ನಿರ್ಧಾರ ಕೈಗೊಂಡಿರುವುದಾಗಿ ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ, ಬೆಂಗಳೂರಿನಲ್ಲಿ ರವೀಂದ್ರನ್ ಕುಟುಂಬ ಎರಡು ಮನೆಗಳನ್ನು ಹೊಂದಿದ್ದು ಹಾಗೂ ನಿರ್ಮಾಣ ಹಂತದಲ್ಲಿರುವ ವಿಲ್ಲಾ ಇದೆಲ್ಲರ ಒಟ್ಟು ಮೌಲ್ಯ ಅಂದಾಜು $12 ಮಿಲಿಯನ್ ಎಂಬುದಾಗಿ ತಿಳಿದುಬಂದಿದ್ದು, ಬೈಜೂಸ್‌ನಲ್ಲಿ ಉದ್ಯೋಗಿಗಳಾಗಿರುವ 15,000 ಸಿಬ್ಬಂದಿ ವೇತನಕ್ಕಾಗಿ ತಮ್ಮ ಮನೆಗಳನ್ನೇ ರವೀಂದ್ರನ್ ಅಡಮಾನವಿರಿಸುವ ನಿರ್ಧಾರಕ್ಕೆ ಬಂದಿದ್ದಾರೆ ಎಂಬುದಾಗಿ ಅವರ ಕುಟುಂಬ ಸದಸ್ಯರೊಬ್ಬರು ಮಾಹಿತಿ ನೀಡಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವಿಪಕ್ಷಗಳ ವಾಗ್ದಾಳಿಗೆ ಎಚ್ಚೆತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ

ರಾಜ್ಯದ ಪ್ರತಿಯೊಬ್ಬರಿಗೂ ರಕ್ಷಣೆ ನೀಡ್ತೇನೆ...

ಬೆಂಗಳೂರು, ಡಿ.5 (ಕೆಎಂಶಿ)–ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರಿಗೂ ರಕ್ಷಣೆ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದ್ದಾರೆ.

ರಾಷ್ಟ್ರದ ಸಂಪತ್ತಿನಲ್ಲಿ ಅಲ್ಪಸಂಖ್ಯಾತರಿಗೆ ವಿಶೇಷ ಹಕ್ಕು ಕೊಡುವುದಾಗಿ ನಿನ್ನೆ ನೀಡಿದ ಹೇಳಿಕೆ ಬೆನ್ನಲ್ಲೇ ಈ ಸ್ಪಷ್ಟೀಕರಣ ನೀಡಿದ್ದಾರೆ. ಮುಖ್ಯಮಂತ್ರಿ ಅವರ ಹೇಳಿಕೆಗೆ ಬಿಜೆಪಿ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿ, ಹಿಂದೂಗಳನ್ನು ಎರಡನೇ ಪಂಕ್ತಿಗೆ ಸೇರಿಸಲು ಹೊರಟಿರುವುದನ್ನು ಖಂಡಿಸಿದ್ದಾರೆ. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಅವರು ಸುವರ್ಣ ಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಅಲ್ಪಸಂಖ್ಯಾತರಿಗೆ 4ರಿಂದ 5 ಸಾವಿರ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿಡುವುದಕ್ಕೆ ಈಗಲೂ ಸಿದ್ಧನಿದ್ದೇನೆ. ಇದೇನು ಓಲೈಕೆ ರಾಜಕಾರಣ ಅಲ್ಲ, ಇದರಲ್ಲಿ ಏನು ತಪ್ಪಿದೆ. ಸಮಾಜದ ಎಲ್ಲರಿಗೂ ಸಮಾನ ಸವಲತ್ತು ಕಲ್ಪಿಸುವುದಾಗಿ ತಿಳಿಸಿದರು.

ಮುಖ್ಯಮಂತ್ರಿ ಹೇಳಿಕೆ ಬೆನ್ನಲ್ಲೇ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಮುಖ್ಯಮಂತ್ರಿ ಅವರಿಗೆ ಟಿಪ್ಪು ಎಂದರೆ ಬಹಳ ಪ್ರೀತಿ, ಅವರು ಕೇವಲ ಒಂದು ಸಮುದಾಯವನ್ನು ಓಲೈಕೆ ಮಾಡುವುದು ಸರಿಯಲ್ಲ.



ಹಿಂದೂಗಳನ್ನು ಎರಡನೇ ದರ್ಜೆ ಪ್ರಜೆಗಳಾಗಿ ನೋಡುತ್ತಿದ್ದಾರೆ, ಅವರು ನಿನ್ನೆ ಮತ್ತು ಇಂದು ನೀಡಿರುವ ಹೇಳಿಕೆಗಳು ದೇಶ ಮತ್ತು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯ ಹೇಳಿಕೆಯಲ್ಲ. ಈ ಹೇಳಿಕೆಯನ್ನು ನಾನು ಖಂಡಿಸುತ್ತೇನೆ. ಟಿಪ್ಪು ಜಯಂತಿ, ಶಾದಿಭಾಗ್ಯ, ಮುಸ್ಲಿಂ ಸಮುದಾಯದವರ ವಿವಾಹಕ್ಕೆ ಧನಸಹಾಯ ಸೇರಿದಂತೆ ಆ ಸಮುದಾಯಕ್ಕೆ ಹತ್ತು ಹಲವು ಕಾರ್ಯಕ್ರಮ ನೀಡಿರುವ ಸಿದ್ದರಾಮಯ್ಯ, ಈಗ ಮತ್ತೆ ಹೊಸ ಕಾರ್ಯಕ್ರಮಗಳನ್ನು ನೀಡಲು ಹೊರಟಿರುವುದಕ್ಕೆ ನಮ್ಮ ವಿರೋಧವಿದೆ ಎಂದರು.

ಇದೇ ವೇಳೆ ಮಾತನಾಡಿದ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಅಲ್ಪಸಂಖ್ಯಾತರಿಗೆ ವಿಶೇಷ ಹಕ್ಕು ಕೊಡುವ ಮೂಲಕ ಮುಖ್ಯಮಂತ್ರಿ ಅವರು ತುಷ್ಟೀಕರಣದ ರಾಜಕಾರಣ ಮತ್ತು ಮತ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ ಎಂದರು.

ಅಲ್ಪಸಂಖ್ಯಾತ ಸಮುದಾಯಕ್ಕೆ ಅನೇಕ ಮಾದರಿಯಲ್ಲಿ ವಿವಿಧ ಸವಲತ್ತುಗಳು ದೊರೆಯುತ್ತಿವೆ, ಇಷ್ಟಾಗಿಯೂ ಇತರ ಎಲ್ಲಾ ಸಮುದಾಯಗಳ ಮೇಲೆ ಸವಾರಿ ಮಾಡುವ ರೀತಿ ಒಂದು ಸಮುದಾಯವನ್ನು ಓಲೈಕೆ ಮಾಡಲು ಹೊರಟಿರುವುದು ಸರಿಯಲ್ಲ. ರಾಜ್ಯದಲ್ಲಿ ಬರ ತಾಂಡವವಾಡುತ್ತಿದೆ, ಇದುವರೆಗೂ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಂಡಿಲ್ಲ, ಸಂಪುಟದ ಯಾವ ಮಂತ್ರಿಯೂ ಪರಿಸ್ಥಿತಿ ಅರಿಯುವ ಕೆಲಸ ಮಾಡಿಲ್ಲ. ನೊಂದವರಿಗೆ ಪರಿಹಾರ ಕೊಡುವ ಬದಲು ಅಲ್ಪಸಂಖ್ಯಾತರಿಗೆ ಒಂದರ ಮೇಲೊಂದು ಸವಲತ್ತು ಕೊಡಲು ಹೊರಟಿದ್ದೀರಿ. ನಿಮ್ಮ ಜನ ವಿರೋಧಿ ನೀತಿಗಳಿಂದ ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿ ಆಗುವುದಲ್ಲದೆ, ಸಾಮಾಜಿಕವಾಗಿ ತಾರತಮ್ಯ ಮಾಡಿದಂತಾಗುತ್ತದೆ ಎಂದಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : "ನಾನು ಅಳುತ್ತಾ ಇದ್ರೆ ಯಾಕೆ ಅಂತ ಕೂಡ ಕೇಳಲ್ಲ ನೀವು"

ಪತಿ : "ಇತ್ತೀಚೆಗೆ ಇಂಥ ಅಳು ತುಂಬಾ ದುಬಾರಿ, ಒಂದು ರೇಷ್ಮೆ ಸೀರೆ ಕನಿಷ್ಠ ಐದು ಸಾವಿರ ರೂಪಾಯಿ"

ಮೈಸೂರು ಮಿತ್ರ

ಬುಧವಾರ, 6 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ವಿಚಾರದಲ್ಲಿ ಉದಾರತನ, ಕೃತಿಯಲ್ಲಿ ಮಾನವೀಯತೆ, ವಿಜಯದಲ್ಲಿ ಸಂಯಮ ಉಳ್ಳವನೇ ದೊಡ್ಡವನು –ಬಿಸ್ಮಾರ್ಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿ ಇದ್ದವನಲ್ಲಿ ಶ್ರದ್ಧೆ, ನಿದ್ದೆ ಬಾರದವನಲ್ಲಿ ವಿದ್ಯೆ

ನಿಮ್ಮ ಪತ್ರಗಳು

ಅರ್ಜುನನಿಗೆ ಅಂತಿಮ ವಿದಾಯ

ಮಾನ್ಯರೆ,



"ಪ್ರಾಣಿಗಳೇ ಗುಣದಲ್ಲಿ ಮೇಲು ಮಾನವ ಅದಕ್ಕಿಂತ ಕೀಳು" ಎಂಬ ಡಾ. ರಾಜ್‌ಕುಮಾರ್ ಅಭಿನಯದ ಗಿರಿಕನ್ಯೆ ಚಿತ್ರದ ಹಾಡಿನಂತೆ, ಪ್ರಾಣಿಗಳು ಒಮ್ಮೆ ಮನುಷ್ಯನನ್ನು ಹೊಂದಿಕೊಂಡರೆ ಅವು ಮನುಷ್ಯನಿಗಿಂತ ಹೆಚ್ಚು ಸಂವೇದನಾಶೀಲ ಗುಣವನ್ನು ಬೆಳೆಸಿಕೊಳ್ಳುತ್ತವೆ. ಇದೇ ಹಾದಿಯಲ್ಲಿ ನಾಡ ಹಬ್ಬ ದಸರಾ ಎಂದರೆ ಎಲ್ಲರಿಗೂ ಚಿರಪರಿಚಿತ. ಒಂಬತ್ತು ದಿನ ನಡೆಯುವ ನವರಾತ್ರಿಯ ನಾಡಹಬ್ಬ ದಸರಾದಲ್ಲಿ ಪ್ರಪಂಚದ ನಾನಾ ಭಾಗಗಳಿಂದ ಜನಸಾಗರ ಹರಿದುಬರುತ್ತದೆ. ನಾಡಹಬ್ಬ ದಸರಾದ ಮುಖ್ಯ ಆಕರ್ಷಣೆ 750 ಕೆಜಿ ತೂಕದ ಚಿನ್ನದ ಅಂಬಾರಿಯಲ್ಲಿ ಚಾಮುಂಡೇಶ್ವರಿಯ ವಿಗ್ರಹವನ್ನು ಹೊತ್ತು ಸಾಗುವ ಆನೆಗಳ ಕಾರ್ಯವೈಖರಿ ಎಲ್ಲರೂ ಮೆಚ್ಚುವಂತಹದ್ದು.

ಅರ್ಜುನ ಆನೆ 2012 ರಿಂದ 2019 ರವರೆಗೆ ಅಂಬಾರಿಯನ್ನು ಹೊತ್ತಿದ್ದ 64 ವರ್ಷದ ಅರ್ಜುನ ನಮ್ಮನ್ನು ಅಗಲಿರುವುದು ಇಡೀ ರಾಜ್ಯಕ್ಕೆ ಶೋಕದ ವಿಷಯವಾಗಿದೆ. ಹಾಸನ ಜಿಲ್ಲೆಯಲ್ಲಿ ಆನೆ ಸೆರೆ ಕಾರ್ಯಾಚರಣೆ ನಡೆಯುವಾಗ ಒಂಟಿಸಲಗದೊಂದಿಗೆ ನಡೆದ ಸಂಘರ್ಷದಲ್ಲಿ ತಿವಿತಕ್ಕೊಳಗಾಗಿ ಅರ್ಜುನ ಆನೆ ಮೃತಪಟ್ಟಿದೆ.

64 ವರ್ಷದ ಅರ್ಜುನ ಆನೆ ಮೈಸೂರು ಜಿಲ್ಲೆಯ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಬಳ್ಳೆ ಶಿಬಿರದಲ್ಲಿ ಇತ್ತು. ಅಂಬಾರಿ ಹೊರುವುದರಿಂದ ನಾಲ್ಕು ವರ್ಷದ ಹಿಂದೆ ನಿವೃತ್ತಿ ನೀಡಲಾಗಿತ್ತು. ಅಂಬಾರಿ ಹೊರದೇ ಇದ್ದರೂ ದಸರೆಯಲ್ಲಿ ಭಾಗಿಯಾಗುತ್ತಿತ್ತು. ಈ ಬಾರಿಯೂ ನಿಶಾನೆ ಆನೆಯಾಗಿ ಕಾರ್ಯ ನಿರ್ವಹಿಸಿತ್ತು. ನಂತರ ಆನೆ, ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಅರ್ಜುನ ಆನೆಯನ್ನು ತೊಡಗಿಸಿಕೊಳ್ಳಲಾಗುತ್ತಿತ್ತು. ಈಗ ಆನೆ ಸೆರೆ ಕಾರ್ಯಾಚರಣೆ ವೇಳೆಯೇ ಹಾಸನ ಜಿಲ್ಲೆ ಎಸಳೂರು ಬಳಿ ಸೋಮವಾರ ಮಧ್ಯಾಹ್ನ ಮೃತಪಟ್ಟಿದೆ.

ಅಂಬಾರಿ ಹೊತ್ತ ಆನೆಗಳು ದುರಂತ ಸಾವಿನ ಇತಿಹಾಸ ಗಮನಿಸುವುದಾರೆ ಕೆಲ ವರ್ಷದ ಹಿಂದೆ ದ್ರೋಣ ಎಂಬ ಆನೆ ವಿದ್ಯುತ್ ತಂತಿ ತಗುಲಿ ಕಾಡಿನಲ್ಲಿ ಮೃತಪಟ್ಟಿತ್ತು. ಅದೂ ಅಂಬಾರಿ ಹೊತ್ತ ಆನೆಯಾಗಿತ್ತು. ನಂತರದಲ್ಲಿ ಶ್ರೀರಾಮ ಎಂಬ ಆನೆ ಸಂಗಾತಿ ಗಜೇಂದ್ರ ಆನೆ ತಿವಿತದಿಂದ ಮೃತಪಟ್ಟಿತ್ತು ಮತ್ತು ಗೋಪಾಲಸ್ವಾಮಿ ಎಂಬ ಆನೆಯೂ ಇದೇ ರೀತಿ ದುರಂತವಾಗಿ ಅಂತ್ಯ ಕಂಡಿತ್ತು. ಅಂಬಾರಿ ಹೊತ್ತಿದ್ದ ಬಲರಾಮನಿಗೆ ಕಳೆದ ವರ್ಷ ಗುಂಡೇಟು ತಗುಲಿ ಆನಂತರ ಮೃತಪಟ್ಟಿತ್ತು. ಈಗ ಮತ್ತೊಂದು ಆನೆ ಅರ್ಜುನ ಕೂಡ ದುರಂತ ಸಾವು ಕಂಡ ಆನೆಗಳ ಪಟ್ಟಿಗೆ ಸೇರಿಕೊಂಡಿರುವುದು ದುರದೃಷ್ಟಕರವಾಗಿದೆ.

ಅರ್ಜುನ ಆನೆಯ ಸಾವು ರಾಜ್ಯಕ್ಕೆ ದುಃಖದ ವಿಷಯವಾಗಿದ್ದು, ರಾಜ್ಯ ಸರ್ಕಾರ ಅಂಬಾರಿ ಹೊತ್ತು ನಿವೃತ್ತಿಯಾದ ಆನೆಗಳ ಸೇವೆಯನ್ನು ಪರಿಗಣಿಸಿ ನಿವೃತ್ತಿಯ ಜೀವನ ಕಲ್ಪಿಸಬೇಕು ಮತ್ತು ಯಾವುದೇ ರೀತಿಯ ಕಾರ್ಯಾಚರಣೆಗಳಿಂದ ಮುಕ್ತಿ ನೀಡಬೇಕು ಎಂದೂ ರಾಜ್ಯದ ಜನರ ಪರವಾಗಿ ಸರ್ಕಾರವನ್ನು ಆಗ್ರಹಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಗ್ರಂಥಪಾಲಕರ ನೇಮಕಾತಿ ಯಾವಾಗ?

ಮಾನ್ಯರೆ,

ಇಂದಲ್ಲ ನಾಳೆ ಗ್ರಂಥಪಾಲಕರ ನೇಮಕಾತಿ ಹಾಗೆ ಆಗುತ್ತದೆ ಎಂಬ ನಂಬಿಕೆಯಲ್ಲಿ ಸುಮಾರು 10 ವರ್ಷಗಳಿಂದ ಸಾವಿರಾರು ಸಂಖ್ಯೆಯಲ್ಲಿ ಅಭ್ಯರ್ಥಿಗಳು MLISc, Phd, NET, K-SET ಅರ್ಹತೆಯೊಂದಿಗೆ ಕಾದು ಕುಳಿತಿದ್ದಾರೆ. 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ಗೆದ್ದು ಅಧಿಕಾರಕ್ಕೆ ಬಂದಿದೆ. ರಾಜ್ಯದ ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ ಹೀಗೆ ಹಲವು ಇಲಾಖೆಗಳಿಗೆ ಶೀಘ್ರ ನೇಮಕಾತಿಗಳು ಆಗುತ್ತಿರುವುದು ಬಹಳ ಸಂತೋಷ ತಂದಿದೆ. ಆದರೆ ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಮತ್ತು ಸಾರ್ವಜನಿಕ ಗ್ರಂಥಾಲಯಗಳಿಗೆ ಗ್ರಂಥಪಾಲಕರ ನೇಮಕಾತಿ ಯಾವಾಗ? ದಯವಿಟ್ಟು ರಾಜ್ಯ ಸರ್ಕಾರ, ಶಿಕ್ಷಣ ಇಲಾಖೆ ಅಥವಾ ಸಂಬಂಧಪಟ್ಟ ಇಲಾಖೆಗಳು ರಾಜ್ಯದ ವಿವಿಧ ಇಲಾಖೆಗಳ ಗ್ರಂಥಾಲಯದಲ್ಲಿ ಖಾಲಿ ಇರುವ ಗ್ರಂಥಪಾಲಕರ ಹುದ್ದೆಗಳಿಗೆ ಶೀಘ್ರ ನೇಮಕಾತಿ ಮಾಡಿ.

–ಅಂಕರಾಜು ಎನ್, ಗ್ರಂಥಪಾಲಕರು, ಮೈಸೂರು

ಕಿಡಿಗೇಡಿಗಳ ಹಾವಳಿ ತಪ್ಪಿಸಿ

ಮಾನ್ಯರೆ,


ಮೈಸೂರಿನ ಬನ್ನಿಮಂಟಪ ಬಳಿಯಿರುವ ಉನ್ನತಿ ನಗರದಲ್ಲಿ ಇತ್ತೀಚೆಗೆ ಕೆಲ ಕಿಡಿಗೇಡಿಗಳ ಉಪಟಳ ಹದ್ದು ಮೀರುತ್ತಿದೆ. ಅಲ್ಲಿರುವ ಎರಡು ಉದ್ಯಾನವನಗಳಲ್ಲಿ ಸಂಜೆಯ ನಂತರ ಕೆಲ ಪುಂಡ ಪೋಕರಿಗಳು ಮಾದಕ ವಸ್ತುಗಳನ್ನು ತಂದು ಬಳಸುತ್ತಿದ್ದಾರೆ. ಇದರಿಂದ ಅಲ್ಲಿನ ನಿವಾಸಿಗಳು ಕತ್ತಲೆಯಾದ ನಂತರ ಓಡಾಡಲು ಭಯಪಡುವಂತಾಗಿದೆ. ಇದರ ಜೊತೆಗೆ ಅಲ್ಲಿನ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಯೊಂದರ ಮಹಿಳೆಯರ ಕೆಲ ವಸತಿಗೃಹಗಳಿದ್ದು, ಮುಂಜಾನೆ ಕಾಲೇಜಿಗೆ ಹೋಗುವ ಮತ್ತು ಸಂಜೆಯ ನಂತರ ಕಾಲೇಜಿನಿಂದ ಬರುವ ವಿದ್ಯಾರ್ಥಿಗಳಿಗೆ ಈ ಕಿಡಿಗೇಡಿಗಳಿಂದ ಉಪಟಳವಾಗುತ್ತಿದೆ. ಕೆಲ ಮಂದಿಯಂತೂ ಅಸಹ್ಯಕರ ಕೈ ಮತ್ತು ಇತರೆ ಸನ್ನೆಗಳಿಂದ ಈ ಹುಡುಗಿಯರಿಗೆ ಮುಜುಗರವಾಗುವಂತೆ ವರ್ತಿಸುತ್ತಿದ್ದಾರೆ. ಗಸ್ತಿನ ಗರುಡ ವಾಹನವು ವರ್ತುಲ ರಸ್ತೆಯ ಕೆಳ ಸೇತುವೆ ಬಳಿ ಇರುವುದನ್ನು ಈ ಸ್ಥಳಕ್ಕೆ ನಿಯೋಜಿಸಿ, ಸಂಜೆಯ ನಂತರ ಕತ್ತಲಿನಲ್ಲಿ ಈ ಕಿಡಿಗೇಡಿಗಳ ಉಪಟಳಕ್ಕೆ ತಕ್ಷಣವೇ ಬ್ರೇಕ್ ಹಾಕಲು ಪೊಲೀಸ್ ಇಲಾಖೆ ಮುಂದಾಗಬೇಕಿದೆ. ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕಿಡಿಗೇಡಿಗಳನ್ನು ಬಂಧಿಸಿ, ನಿವಾಸಿಗಳು ನಿಟ್ಟುಸಿರುಬಿಡುವಂತೆ ಮಾಡಲು ಈ ಮೂಲಕ ಕೋರುತ್ತೇವೆ.

–ವಿಜಯ್ ಹೆಮ್ಮಿಗೆ, ಮೈಸೂರು

ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಲಿ

ಮಾನ್ಯರೆ,

ಡಿಸೆಂಬರ್ 3 ರಿಂದ ಬೆಳಗಾವಿಯಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ಆರಂಭವಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳು ಕಳೆದಿದ್ದು, ಸಮಸ್ಯೆ, ಸವಾಲುಗಳು ಸರ್ಕಾರದ ಮುಂದಿದೆ. ಬರ ಪರಿಹಾರ ಮೊತ್ತ ಶೀಘ್ರವಾಗಿ ವಿತರಿಸುವ ಸವಾಲು ಈಗ ಸರ್ಕಾರದ ಮುಂದಿದೆ. ಗ್ಯಾರಂಟಿ ಯೋಜನೆಗಳು ಸರಿಯಾಗಿ ಅನುಷ್ಠಾನಗೊಂಡಿಲ್ಲ. ಇದರಿಂದ ಅಭಿವೃದ್ಧಿ ಯೋಜನೆಗಳೂ ಕುಂಠಿತವಾಗಿದೆ. ಇತ್ತೀಚೆಗೆ ಜಾತಿ ಗಣತಿ ಸ್ವೀಕಾರ–ತಿರಸ್ಕಾರ ವಿಚಾರವು ರಾಜ್ಯದಲ್ಲಿ ಮುನ್ನೆಲೆಗೆ ಬಂದಿದೆ. ಎನ್‌ಇಪಿ–2020 ರದ್ದುಪಡಿಸಿ ರಾಜ್ಯದಲ್ಲಿ ರಾಜ್ಯ ಶಿಕ್ಷಣ ನೀತಿ ಪರಿಚಯಿಸುವುದಾಗಿ ಸರ್ಕಾರ ಹೇಳಿದೆ. ಈ ಹಿನ್ನೆಲೆಯಲ್ಲಿ ವೈಯಕ್ತಿಕ ಹಿತಾಸಕ್ತಿಯ ಆರೋಪ–ಪ್ರತ್ಯಾರೋಪಗಳಿಗೆ ವೇದಿಕೆಯಾಗದೇ, ರಚನಾತ್ಮಕ ಚರ್ಚೆಗಳಾಗಬೇಕು. ಪ್ರತೀ ಅಧಿವೇಶನ ನಡೆಸುವುದಕ್ಕಾಗಿ ಸಾರ್ವಜನಿಕರ ಕೋಟ್ಯಂತರ ರೂ. ಖರ್ಚಾಗುತ್ತದೆ. ಹೀಗಾಗಿ ರಾಜ್ಯದ ಜ್ವಲಂತ ಸಮಸ್ಯೆಗಳ ಕುರಿತು ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬೇಕು. ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಲು ಸದನದ ಹೊರಗೆ ಮಾರ್ಗಗಳು, ವೇದಿಕೆಗಳಿವೆ. ಜನಪ್ರತಿನಿಧಿಗಳು ತಮ್ಮ ಹೊಣೆ ಅರಿತು, ತಮಗೆ ಮತ ಹಾಕಿದ ಮತದಾರರ ಕಷ್ಟ–ಕಾರ್ಪಣ್ಯಗಳಿಗೆ ನೆರವಾಗಬೇಕು. **–ಪ್ರಸಾದ್ ಜಿ.ಎಂ, ಮೈಸೂರು**



ಡಾ. ವಿ. ರಂಗನಾಥ್

ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು

ಮೊ : 94482 08746 / 97421 79000

ಚಿಂತನೆ

ಅರಿತರೆ ಬಾಳು; ಮರೆತರೆ ಬರಿ ಗೋಳು

ಈ ಜೀವನವೇ ಒಂದು ವಿಸ್ಮಯ. ಅನೇಕ ವೇಳೆ ನಾವು ಅಂದುಕೊಂಡಿರುವುದಕ್ಕಿಂತ ಬೇರೆಯದೇ ರೀತಿಯಲ್ಲಿ ಅದು ಸಾಗಿಬಿಡುತ್ತದೆ. ಬದುಕಿನಲ್ಲಿ ಹಲವು ಅನಿರೀಕ್ಷಿತ ಬದಲಾವಣೆಗಳು ಆಗುತ್ತಲೇ ಇರುತ್ತವೆ. ಬದುಕನ್ನು ನಾವು ಹೇಗೆ ತೆಗೆದುಕೊಳ್ಳುತ್ತೇವೆಯೋ, ಕೆಲವೊಮ್ಮೆ ಅದಕ್ಕೆ ಪೂರಕವಾದ ಹಲವು ರೀತಿಯ ಘಟನೆಗಳು ನಮ್ಮ ಸುತ್ತಮುತ್ತ ನಡೆಯುತ್ತವೆ. ನಾವು ಸತ್ಯತೆಯ ಬಗ್ಗೆ ಇಚ್ಛೆಯುಳ್ಳವರಾದರೆ, ಅದಕ್ಕೆ ಸಂಬಂಧಿಸಿದಂತಹ ಘಟನೆಗಳೇ ನಮ್ಮ ಮುಂದೆ ಜರುಗುತ್ತವೆ. ನಮ್ಮದು ಹೋರಾಟದ ಬದುಕಾದರೆ ಜೀವನದಲ್ಲಿ ಅಂತಹುದೇ ಹೋರಾಟದ ಸನ್ನಿವೇಶ ಆಗಾಗ ಪುನರಾವರ್ತನೆಯಾಗುತ್ತವೆ. ಇದು ಕೇವಲ ಪ್ರಸಂಗಗಳಿಗೆ ಸಂಬಂಧಿಸಿದ್ದು ಮಾತ್ರ ಎಂದಲ್ಲ, ಬದಲಾಗಿ ನಮಗೆ ಆಗಾಗ ಬೀಳುವ ಕನಸುಗಳು, ನಮ್ಮ ಸ್ನೇಹಿತರು ಎಲ್ಲವೂ ಈ ರೀತಿಯ ಆಸುಪಾಸಿನಲ್ಲೇ ಇರುತ್ತವೆ. ನಮ್ಮ ಸ್ನೇಹಬಳಗವೂ ಸಾಮಾನ್ಯವಾಗಿ ನಮ್ಮ ಸ್ವಭಾವವನ್ನೇ ಅವಲಂಬಿಸಿರುತ್ತದೆ. ನಮ್ಮದು ಉಡಾಳ ಮನಸ್ಥಿತಿಯಾದರೆ ನಮ್ಮ ಸ್ನೇಹಬಳಗವೂ ಅದೇ ಸ್ವಭಾವದ ಜನರಿಂದ ಕೂಡಿರುತ್ತದೆ. ನೀವು ಸಾತ್ವಿಕ ಮನೋಭಾವದವರಾದರೆ, ಅದೇ ಸ್ವಭಾವದವರೇ ನಮ್ಮ ಒಡನಾಡಿಗಳಾಗಿರುತ್ತಾರೆ.

ನಾವು ನಮ್ಮ ಜೀವಮಾನದಲ್ಲಿ ಹಲವಾರು ರೀತಿಯ ಸಂಬಂಧಗಳು ಹಾಗೂ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಸಂಬಂಧಗಳು ಉತ್ತಮವಾಗಿದ್ದರೆ ಜೀವನ ಸುಂದರವಾಗಿ ಸಾಗುತ್ತದೆ. ನಾವು ಮಾಡಿಕೊಳ್ಳುವ ಸಂಬಂಧಗಳು ಉತ್ತಮವಾಗಿರದಿದ್ದರೆ ನಮ್ಮ ಜೀವನ ಉತ್ತಮಗೊಳ್ಳಲು ಸಾಧ್ಯವಿಲ್ಲ. ಬಾಲ್ಯಾವಸ್ಥೆಯಲ್ಲಿದ್ದಾಗ ಇದ್ದಂತಹ ನಮ್ಮ ಬೇಕು–ಬೇಡಗಳು, ಸ್ವಲ್ಪ ನಾವು ಬೆಳೆದು ವಿದ್ಯಾಭ್ಯಾಸ ಮಾಡುವಾಗ ವ್ಯತಿರಿಕ್ತವಾಗಿ ರಲೂ ಬಹುದು. ಮುಂದೆ ಯೌವನಾವಸ್ಥೆಯ ರೀತಿ ನೀತಿಗಳೇ ಬೇರೆ. ಮುಂದೆ ಮದುವೆಯಾಗಿ, ಮಕ್ಕಳಾಗಿ ಜವಾಬ್ದಾರಿ ಬಂದಾಗ ನಮ್ಮ ಸಂಬಂಧಗಳ ಆಯ್ಕೆ ವಿಧಾನವೂ ಬದಲಾಗುತ್ತದೆ. ನಂತರದ ಜವಾಬ್ದಾರಿ ಹಾಗೂ ಜೀವನ ನಿರ್ವಹಣೆ ಬೇರೆ ರೀತಿಯೇ ಆಗಿರುತ್ತದೆ. ವೃದ್ಧಾಪ್ಯದ ಬದುಕು ಇವೆಲ್ಲವನ್ನೂ ಮೀರಿದ ಬದುಕಾಗಿ ಅಲ್ಲಿ ಸಂಬಂಧಗಳಿಗೆ ಹೆಚ್ಚಿನ ಮಹತ್ವವಿರುತ್ತದೆ.

ಯೌವನ ಹಾಗೂ ವೃದ್ಧಾಪ್ಯದಲ್ಲಿ ನಮ್ಮ ಬಾಳಲ್ಲಿ ಅನ್ಯರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಯೌವನದ ಆಕರ್ಷಣೆ ಬಹುತೇಕರ ಜೀವನದಲ್ಲಿ ದೊಡ್ಡ ಪರಿವರ್ತನೆಯನ್ನು ತಂದುಬಿಡುತ್ತದೆ. ಶಾರೀರಿಕ ಆಕರ್ಷಣೆ ಕಡಿಮೆಯಾದಂತೆ ನಮ್ಮ ಇಷ್ಟಾನಿಷ್ಟಗಳು ಬದಲಾಗುತ್ತವೆ. ಮದುವೆಗೆ ಪೂರ್ವದಲ್ಲಿ ಪ್ರೀತಿ ಹಾಗೂ ಪ್ರೀತಿಸುವವರೇ ಆದ್ಯತೆಯಲ್ಲಿರುತ್ತಾರೆ. ಆ ಸಮಯದಲ್ಲಿ ನಾನು ಬಹಳ ಒಳ್ಳೆಯವನು/ಳು ಎಂದು ಬಿಂಬಿಸಿಕೊಳ್ಳುವತ್ತಾ ನಮ್ಮೆಲ್ಲಾ ಪ್ರಯತ್ನಗಳಿರುತ್ತವೆ. ಬೇರೆಯವರಿಗಿಂತ ಭಿನ್ನವಾದ ಗುಣಗಳು ನನ್ನಲ್ಲಿವೆ. ಹೇಗಾದರೂ ಪ್ರೀತಿ ಸಂಪಾದಿಸಬೇಕೆಂಬ ಧಾವಂತದಲ್ಲಿ ಸುಳ್ಳು ಹೇಳಿ ಸಂಗಾತಿಯನ್ನು ಒಲಿಸಿಕೊಂಡು ಮದುವೆಯಾಗಿಬಿಡುತ್ತಾರೆ.

ಆದರೆ, ಒಟ್ಟಾಗಿ ಜೀವನಯಾತ್ರೆ ಆರಂಭಿಸಿದ ನಂತರ ನಮ್ಮ ಬಂಡವಾಳ ಒಂದೊಂದಾಗಿ ಬಯಲಾಗುತ್ತಾ ಹೋಗುತ್ತದೆ. ಮದುವೆಗೆ ಮುಂಚೆ ನಾನು ಹಾಗೆ–ಹೀಗೆ ಎಂದೆಲ್ಲಾ ಹೇಳಿಕೊಂಡಿದ್ದಂತೆ ನಾವಿರದಿದ್ದರೆ, ಸಂಗಾತಿಗೆ ಆಘಾತವಾಗುತ್ತದೆ. ಸಣ್ಣಪುಟ್ಟ ಕಾರಣಗಳಿಗೂ ಜಗಳ–ಮನಸ್ತಾಪ ಜಾಸ್ತಿಯಾಗುತ್ತಾ ಹೋಗುತ್ತದೆ. ಬರ ಬರುತ್ತಾ ಪರಸ್ಪರರಲ್ಲಿನ ಆಕರ್ಷಣೆ ಕಡಿಮೆಯಾಗುತ್ತದೆ. ಕೊನೆಗೆ ಇದಕ್ಕೆ ಹೊಳೆಯುವ ಒಂದು ಪರಿಹಾರ ಎಂದರೆ 'ವಿವಾಹ ವಿಚ್ಛೇದನ'. ಇದಕ್ಕಾಗಿ ಇಷ್ಟೆಲ್ಲಾ ಹೆಣಗಾಡಬೇಕಾಗಿತ್ತಾ? ಎಂದು ಕೇಳಿಕೊಳ್ಳುವಂತೆ ಆಗಿಬಿಡುತ್ತದೆ. ಆದರೆ ಅಷ್ಟರಲ್ಲಿ ಸಮಯ ಮೀರಿ ಹೋಗಿರುತ್ತದೆ. ಜೀವನದಲ್ಲಿ ತಪ್ಪು ಮಾಡಿದೆನೇನೋ, ಆರಂಭದಲ್ಲೇ ನಾನು ನಿಜ ಹೇಳಬೇಕಾಗಿತ್ತು, ಇದರಲ್ಲಿ ನನ್ನ ತಪ್ಪೂ ಇದೆ ಎಂಬ ವಿಮರ್ಶಾ ಭಾವ ಪ್ರಾರಂಭವಾಗುತ್ತದೆ. ಹೊಂದಾಣಿಕೆ ಸ್ವಭಾವ ಇಲ್ಲದಿದ್ದರೆ ಪರಸ್ಪರ ದೂರವಾಗಿ ಇರಬೇಕಾಗುತ್ತದೆ. ಕೆಲವೊಮ್ಮೆ ಜೊತೆಗಿದ್ದರೂ ಒಂಟಿಯಾಗಿ ಕಾಲ ಕಳೆಯಬೇಕಾಗುತ್ತದೆ. ಇದು ಬಹಳ ಕಷ್ಟದ ಕೆಲಸ. ಹೊರಹೋಗಿ, ವಾಪಸ್ಸು ಮನೆಗೆ ಬಂದಾಗ ಮನೆಯಲ್ಲಿ ಅಘೋಷಿತ ಯುದ್ಧದ ವಾತಾವರಣ ನಿರ್ಮಾಣವಾಗಿ ಒಂದೊಂದು ಕ್ಷಣ ಕಳೆಯುವುದೂ ಕಷ್ಟವೆನಿಸತೊಡಗುತ್ತದೆ. ಒಬ್ಬರು ಬೇಡ ಎನಿಸಿದಾಗ ಅವರ ಒಂದೊಂದು ನಡೆಯೂ ಆಕ್ಷೇಪಣೀಯ, ಕಪಟವೆನಿಸತೊಡಗುತ್ತದೆ. ಆದ್ದರಿಂದ ವಿವಾಹ ಪೂರ್ವ ಪರಿಸ್ಥಿತಿ ಹಾಗೂ ನಂತರದ ಜೀವನ ಸಂಘರ್ಷಮಯ, ಸಂಕಷ್ಟಮಯವಾಗಿ ಪರಿಣಮಿಸುತ್ತದೆ.

ನಾವು ಏನೇ ಮಾಡಿದರೂ ಹೊಂದಾಣಿಕೆ ಭಾವ ಇಲ್ಲದಿದ್ದರೆ, ಸ್ವಲ್ಪವಾದರೂ ಸೋಲನ್ನು ಸಹಿಸುವಂತಹ ಸ್ವಭಾವವಿಲ್ಲದಿದ್ದರೆ,

> "ನಾವು ಏನೇ ಮಾಡಿದರೂ ಹೊಂದಾಣಿಕೆ ಭಾವ ಇಲ್ಲದಿದ್ದರೆ, ಸ್ವಲ್ಪವಾದರೂ ಸೋಲನ್ನು ಸಹಿಸುವಂತಹ ಸ್ವಭಾವ ವಿಲ್ಲದಿದ್ದರೆ, ನಾವು ಜೀವನದಲ್ಲಿ ಕ್ಷಣ ಕ್ಷಣಕ್ಕೂ ಹೆಣಗಬೇಕಾಗುತ್ತದೆ. ಜೀವನ ಎಂದರೆ ಏನು, ನಮ್ಮ ಗುರಿಯೇನು? ಎಂಬುದರ ಬಗ್ಗೆ ಮುಂಚಿತವಾಗಿಯೇ ಆಲೋಚಿಸುವುದು ಹಾಗೂ ಅದರಂತೆ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಬಹು ಮುಖ್ಯವಾಗಿರುತ್ತದೆ.



ನಾವು ಜೀವನದಲ್ಲಿ ಕ್ಷಣ ಕ್ಷಣಕ್ಕೂ ಹೆಣಗಬೇಕಾಗುತ್ತದೆ. ಜೀವನ ಎಂದರೆ ಏನು, ನಮ್ಮ ಗುರಿಯೇನು? ಎಂಬುದರ ಬಗ್ಗೆ ಮುಂಚಿತವಾಗಿಯೇ ಆಲೋಚಿಸುವುದು ಹಾಗೂ ಅದರಂತೆ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಮುಖ್ಯವಾಗಿರುತ್ತದೆ.

ಮದುವೆಯಾದ ನಂತರ ಗಂಡ–ಹೆಂಡತಿಯ ನಡುವಿನ ಸಂಬಂಧ ಹೇಗಿರಬೇಕು ಎಂಬುದು ಅತ್ಯಂತ ಸೂಕ್ಷ್ಮ ವಿಚಾರ. ಬಹಳಷ್ಟು ಜನರು ತಪ್ಪು ಮಾಡುವುದೇ ಇಲ್ಲಿ. ಗಂಡನಾದವನಿಗೆ ತನ್ನ ಜವಾಬ್ದಾರಿ ಜಾಸ್ತಿ, ಹೆಂಡತಿ ಕೇವಲ ಮನೆಗೆಲಸ ಮಾಡುವವಳು, ಮಕ್ಕಳನ್ನು ಹೆರುವವಳು ಎಂಬ ಭಾವನೆ ಬಂದಾಗ ಸಂಬಂಧದಲ್ಲಿ ಶಿಥಿಲತೆ ಪ್ರಾರಂಭವಾಗುತ್ತದೆ. ಆದರೆ ಗಂಡ ಹೆಂಡತಿ ಇಬ್ಬರೂ ಒಂದು ಬಂಡಿಯ ಎರಡು ಚಕ್ರಗಳಿದ್ದಂತೆ, ಮೇಲು, ಕೀಳು ಎಂಬ ಭೇದವಿಲ್ಲ, ಎರಡೂ ಚಕ್ರ ಸಮಾನವಾಗಿ ಸಾಗಿದರೆ ಬಂಡಿ ಸುಗಮವಾಗಿ ಮುಂದೆ ಹೋಗುತ್ತದೆ ಎಂಬ ಅರಿವು ಬಹಳ ಮುಖ್ಯವಾಗಿರುತ್ತದೆ. ಇತ್ತೀಚೆಗೆ ಗಂಡ–ಹೆಂಡತಿ ಇಬ್ಬರೂ ದುಡಿಯುವವರಾಗಬೇಕು, ಆಗ ಜೀವನ ನಿರ್ವಹಣೆ ಸುಲಭ ಎನ್ನುವ ಮನೋಭಾವನೆ ಹೆಚ್ಚಾಗುತ್ತಿದೆ. ಆಗಲು ಒಡಕು ಚಿಗುರೊಡೆಯುವ ಸಾಧ್ಯತೆ ಉಂಟು. ಆರಂಭದಲ್ಲೇನೋ ಜೀವನ ಚೆನ್ನ ಎನ್ನಿಸುತ್ತದೆ. ನಂತರ, ನಿನ್ನ ಸಂಬಳ ಇಷ್ಟು, ನನ್ನದು ಇಷ್ಟು ಎರಡೂ ಸೇರಿದರೆ ಇಷ್ಟು, ಜೀವನಕ್ಕೆ ಇಷ್ಟು ಸಾಕು, ಉಳಿದಿದ್ದು ಉಳಿತಾಯ ಎಂದು ಖಾಲಿ ಹಾಳೆಯ ಮೇಲೆ ಬರೆದುಕೊಂಡು ನಮ್ಮ ಮುಂದಿನ ಜೀವನ ಎಷ್ಟು ಚೆನ್ನಾಗಿರುತ್ತದೆ ಎಂದುಕೊಳ್ಳುತ್ತಾರೆ. ಆದರೆ ದಿನಗಳೆದಂತೆ ಅಥವಾ ವರ್ಷಗಳು ಉರುಳಿದಂತೆ ದುಡ್ಡೇ ಮುಖ್ಯವಲ್ಲ, ಅದು ಜೀವನಕ್ಕೆ ಒಂದು ಸಾಧನವಷ್ಟೇ. ಅನುರಾಗ, ನೆಮ್ಮದಿ ಮುಖ್ಯ ಎಂಬುದು ಅರ್ಥವಾಗುತ್ತದೆ. ಆಗಲಾದರೂ ಮೇಲು–ಕೀಳು ಭಾವನೆ ಬಿಟ್ಟು ಹೊಂದಾಣಿಕೆ ಮಾಡಿಕೊಂಡರೆ ಜೀವನ ನಿಜವಾಗಲೂ ಅರ್ಥಪೂರ್ಣವಾಗುತ್ತದೆ. ಆದರೆ ನಾನು ಹೆಚ್ಚು, ನನ್ನ ಸಂಪಾದನೆ ಹೆಚ್ಚು, ಮತ್ತೊಬ್ಬರ ಸಂಪಾದನೆ ಕಡಿಮೆ ಆದ್ದರಿಂದ ಅವರು ನನಗಿಂತ ಕೀಳು, ಮೇಲು ಎಂಬ ಮನಸ್ಥಿತಿ ಮೊಳಕೆಯೊಡೆದರೆ ಜೀವನ ಕಿರಿಕಿರಿ ಎನಿಸತೊಡಗುತ್ತದೆ.

ಯಶಸ್ವಿ ಜೀವನದ ಮುಖ್ಯ ಗುಟ್ಟು ಎಂದರೆ ಹೊಂದಾಣಿಕೆ. ನಾನು ಇತರರು ಸರಿಯಿಲ್ಲ ಎಂಬುದಕ್ಕೆ ನೂರು ಕಾರಣ ಹೇಳಬಹುದು. ಆದರೆ ನಾನು ಎಷ್ಟರಮಟ್ಟಿಗೆ ಸರಿ ಎಂಬ ಬಗ್ಗೆ ಸ್ವಲ್ಪ ಅವಲೋಕನ ಮಾಡಿಕೊಳ್ಳದಿದ್ದರೆ ಜೀವನ ಕಠಿಣವೆನಿಸುತ್ತದೆ. ಆಗ ಇಷ್ಟೆಲ್ಲಾ ದುಡ್ಡಿದ್ದರೂ ನಮಗೆ ನೆಮ್ಮದಿ ಸಿಗುತ್ತಿಲ್ಲ ಎಂಬುದು ಅರ್ಥವಾಗುತ್ತದೆ. ಆಗಲೇ ದುಡ್ಡೇ ಎಲ್ಲಾ ಅಲ್ಲ ಎಂಬುದು ಅರ್ಥವಾಗುತ್ತದೆ.

ಪತ್ನಿಯನ್ನು ಕಳೆದುಕೊಂಡು ಕೆಲವೇ ದಿನಗಳಾಗಿದ್ದ ನನಗೆ ಗೊತ್ತಿರುವವರೊಬ್ಬರು, ಸಂಗಾತಿ ಬದುಕಿದ್ದಾಗ ತಾನು ಮಾಡಿದ ತಪ್ಪುಗಳ ಅವಲೋಕನ ಮಾಡಿಕೊಂಡಿದ್ದನ್ನು ಇಲ್ಲಿ ಉಲ್ಲೇಖಿಸುವುದು ಔಚಿತ್ಯಪೂರ್ಣ ಎಂದು ಭಾವಿಸುತ್ತೇನೆ. ಪತ್ನಿ ಇದ್ದಾಗ ಆಕೆ ಏನು ಮಾಡುತ್ತಿದ್ದಾಳೆ, ನನಗಾಗಿ ಏನೆಲ್ಲಾ ಕಷ್ಟ ಪಡುತ್ತಾಳೆ ಎಂಬುದನ್ನೇ ನಾನು ಪರಿಗಣಿಸಲೂ ಇಲ್ಲ, ಗಮನಿಸಲೂ ಇಲ್ಲ ಎಂದು ಅಲವತ್ತುಕೊಂಡರು. ಅವರು ತಿಳಿಸುವಂತೆ ಪತ್ನಿ ಸಾವಿಗೀಡಾದ ಕೆಲವು ದಿನಗಳವರೆಗೆ ನೆಂಟರಿಷ್ಟರು ಬಂದು ಸಮಾಧಾನ, ಸಾಂತ್ವನ ಹೇಳಿ ಹೋದಾಗ ಅಂತಹ ವ್ಯತ್ಯಾಸ ಗೊತ್ತಾಗಲಿಲ್ಲ. ಆದರೆ ಬಂದವರು ಒಬ್ಬೊಬ್ಬರಾಗಿ ಮರಳಿದ ನಂತರ, ಕ್ರಮೇಣ ಮನೆಗೆ ಬರುವವರ ಸಂಖ್ಯೆ ಕಡಿಮೆಯಾದಂತೆ ಒಂಟಿತನ ಕಾಡತೊಡಗುತ್ತದೆ. ಆಕೆ ತನಗಾಗಿ ಏನೆಲ್ಲಾ ತ್ಯಾಗ ಮಾಡಿದ್ದಳು, ತನ್ನನ್ನು ಎಷ್ಟು ಮುತುವರ್ಜಿಯಿಂದ ಗಮನಿಸುತ್ತಿದ್ದಳು, ನಾನೇ ಅವಳನ್ನು ಅಷ್ಟಾಗಿ ಪರಿಗಣಿಸಲಿಲ್ಲ, ಗಮನಿಸಲಿಲ್ಲ. ನಾನು ಹೊರಗಿನಿಂದ ಬಂದ ಕೂಡಲೇ ಕಾಫಿ–ತಿಂಡಿ ನೀಡುತ್ತಿದ್ದುದು, ತನಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ತವರು ಮನೆಗೆ ಹೋದರೂ ಬೇಗನೇ ಹಿಂದಿರುಗುತ್ತಿದ್ದುದ್ದು, ನಾನು ಹೊರಗಡೆ ಊಟ ಮಾಡಿದರೆ ನನ್ನ ಆರೋಗ್ಯದಲ್ಲಿ ಏರುಪೇರಾಗಬಹುದೆಂದು ಮುತುವರ್ಜಿವಹಿಸಿ ಮನೆಯಲ್ಲಿ ತನಗಿಷ್ಟವಾದ ಅಡುಗೆ ಮಾಡುತ್ತಿದ್ದುದು, ಕೊನೆಗೆ ತಾನು ಯಾವ ರೀತಿಯ ಬಟ್ಟೆ ಹಾಕಿದರೆ ಚೆನ್ನ ಎಂದು ತೀರ್ಮಾನಿಸಿ ಬಟ್ಟೆ ಸಿದ್ಧಪಡಿಸುತ್ತಿದ್ದುದು, ದಿನವಿಡೀ ಕೆಲಸ ಮಾಡಿ ದಣಿದರೂ ತಮಗೆ ಏನೂ ದಣಿವಾಗಿಯೇ ಇಲ್ಲ ಎಂದು ಹೇಳಿ ತನ್ನ ಕಾಲು ಒತ್ತುತ್ತಿದ್ದುದು, ದಿನವಿಡೀ ದುಡಿದು ಕೆಲವು ಸಮಯ ಟಿವಿ ನೋಡಲು ಆಕೆ ಕುಳಿತರೆ, ತಾನು ಹಾಗೂ ಮಕ್ಕಳು ಕಾಫಿ/ಟೀ ಮಾಡಿಕೊಡಲು ಕೇಳುತ್ತಿದ್ದುದು, ಇಷ್ಟಾದರೂ ಆಕೆಯ ಬೇಕು ಬೇಡಗಳನ್ನು ತಾನು ಎಂದೂ ಕೇಳದಿದ್ದುದನ್ನು ನೆನೆಸಿಕೊಂಡರೆ ಆಕೆಗೆ ನಾವು ಚಿತ್ರಹಿಂಸೆ ನೀಡಿದ್ದೇವೆ ಅನ್ನಿಸುತ್ತದೆ. ತಾನು ತಪ್ಪು ಮಾಡಿದೆ ಎಂದು ಪಶ್ಚಾತ್ತಾಪ ಪಡುವಂತಾಗಿದೆ. ಹೀಗೆ ಹೇಳುತ್ತಾ ಮಮ್ಮಲ ಮರುಗುತ್ತಾರೆ. ಕೊನೆಗೆ ತನ್ನ ಮಕ್ಕಳು ತನ್ನ ಪತ್ನಿಯಂತಲ್ಲಾ. ತಾನು ಸಂಜೆ ಕಾಫಿ ಕೇಳಿದರೆ, ನಿಮ್ಮದೇನು ಗೋಳು, ನಾನೂ ಬೆಳಗಿನಿಂದ ದುಡಿದು ದುಡಿದು ಸುಸ್ತಾಗಿ ಬಂದಿದ್ದೇನೆ, ಬೇಕಿದ್ದರೆ ನೀವೇ ಮಾಡಿಕೊಂಡು ಕುಡಿಯಿರಿ ಎಂದು ಮುಖ ತಿರುಗಿಸುವುದನ್ನು ಕಂಡಾಗ ಪತ್ನಿ ಹೀಗಿರಲಿಲ್ಲ, ತನ್ನ ಆಯಾಸ ಹೇಳಿಕೊಳ್ಳಲೇ ಇಲ್ಲ ಎಂದು ಮತ್ತೆ ಮತ್ತೆ ಪತ್ನಿಯನ್ನು ನೆನಸಿಕೊಂಡು ದುಃಖ ತೋಡಿಕೊಳ್ಳುತ್ತಾರೆ. ಇದನ್ನು ಅವರು ಲೇಖಕರಾಗಿ ತಮ್ಮ ಲೇಖನದಲ್ಲೂ ಉಲ್ಲೇಖಿಸಿದ್ದಾರೆ.

ಇದು ಬಹಳಷ್ಟು ಜನರು ಮಾಡುವ ತಪ್ಪು ಎಂಬಂತೆ ಕಂಡುಬರುತ್ತದೆ. ಕೇವಲ ಪತಿ ಅಥವಾ ಪತ್ನಿಯ ಬಗೆಗಿನ ಮಾತಲ್ಲ. ಒಬ್ಬರಿಲ್ಲವಾದಾಗ ದುಃಖಿಸುವುದಕ್ಕಿಂತ ಬದುಕಿರುವಾಗಲೇ ಸ್ವಲ್ಪ ವಿವೇಚನೆ ಉಪಯೋಗಿಸಿ ತನಗಾಗಿ ದುಡಿಯುವವರ ಬಗ್ಗೆ ನಾವು ಒತ್ತಾಸೆಯಾಗಿರಬೇಕು. ನಮ್ಮ ಜೀವನ ಇರುವುದೇ ಹೊಂದಾಣಿಕೆಯಿಂದಾಗಿ. ಇದು ದಂಪತಿಗೆ ಮಾತ್ರ ಸಂಬಂಧಿಸಿದ ವಿಷಯವಲ್ಲ. ನಮ್ಮ ನೆಂಟರು, ಸ್ನೇಹಿತರಿಗೂ ಅನ್ವಯಿಸುವಂತಹುದು. ನಾವು ಎಲ್ಲರೊಡನೆ ಹೇಗೆ ಸಂಬಂಧ ಇಟ್ಟುಕೊಂಡಿದ್ದೇವೆ ಎಂಬುದು ಜೀವನದ ಸಂತೋಷಕ್ಕೆ ಕಾರಣವಾಗಿರುತ್ತದೆ. ಎಲ್ಲರೂ ನಾನು ಹೇಳಿದಂತೆಯೇ ಕೇಳಬೇಕು, ಹಾಗೆ ಕೇಳದಿದ್ದರೆ ಅಂತಹವರೊಡನೆ ನನ್ನ ಸಂಬಂಧ ಬೇಡ ಎಂದುಕೊಂಡರೆ ಈ ಅಹಂನಿಂದಾಗಿ ಕ್ರಮೇಣ ನಾವು ಒಂಟಿತನ ಅನುಭವಿಸಬೇಕಾಗುತ್ತದೆ. ಒಂಟಿತನಕ್ಕಿಂತ ಬೇರೊಂದು ಶತ್ರುವಿರಲು ಸಾಧ್ಯವಿಲ್ಲ. ಸ್ನೇಹತ್ವದಲ್ಲೂ ಪರಸ್ಪರ ಸಹಕಾರ ಹಾಗೂ ಅನುಬಂಧ ಮುಖ್ಯವಾಗುತ್ತದೆ. ಅನೇಕ ವೇಳೆ ನಮಗೆ ಮನೆಯಲ್ಲಿ ಸಿಗದ ನೆಮ್ಮದಿ ನಮ್ಮ ಸ್ನೇಹಿತರಿಂದ ಸಿಗುತ್ತದೆ. ಅಂತಹವರೊಡನೆ ಸಮಾನ ಮನೋಭಾವ ತೋರಬೇಕು. ಅವರು ಗೊತ್ತಿಲ್ಲದೆ ಮಾಡುವ ಸಣ್ಣಪುಟ್ಟ ತಪ್ಪುಗಳನ್ನು ದೊಡ್ಡದಾಗಿ ನೋಡದೆ, ಹೊಂದಾಣಿಕೆ ಮಾಡಿಕೊಳ್ಳಬೇಕು. ಈ ಕಾರಣದಿಂದಲೇ ಆಪತ್ತಿಗಾದವನೇ ನೆಂಟ ಎಂದು ಹೇಳುವುದು. ಇತ್ತೀಚೆಗೆ ಒಬ್ಬರು ಖಾಯಿಲೆಯಿಂದ ಆಸ್ಪತ್ರೆಗೆ ದಾಖಲಾದರು. ಅವರಿಗೆ ಸ್ನೇಹಬಳಗ ಜಾಸ್ತಿ. ಹಾಗಾಗಿ ಆ ಸ್ನೇಹಿತರೇ ಸಮಯ ನಿಗದಿಪಡಿಸಿಕೊಂಡು, ಆ ವ್ಯಕ್ತಿಯೊಡನೆ ಆಸ್ಪತ್ರೆಯಲ್ಲಿ ಕಾಲ ಕಳೆದುದ್ದು, ಮನೆಯವರಿಗೆ ಹೊರೆಯಾಗದಂತೆ ತಾವುಗಳೇ ಆಸ್ಪತ್ರೆಯ ಖರ್ಚನ್ನೂ ನಿಭಾಯಿಸಿದ್ದನ್ನು ನಾನು ಗಮನಿಸಿದ್ದೇನೆ. ಅಂತಹ ವ್ಯಕ್ತಿಯ ಜೀವನ ಸಾರ್ಥಕ ಎಂದು ಹೇಳಬಹುದಲ್ಲವೇ? ಇಂತಹವರ ಜೀವನ ನಮಗೆ ಮಾರ್ಗದರ್ಶಕವಾಗಬೇಕು.

ಮಿಚಾಂಗ್ ಚಂಡಮಾರುತ: ನಿಂತ ಮಳೆ, ತಗ್ಗಿದ ನೀರು, ಚೆನ್ನೈ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟ ಪುನಾರಂಭ

ಚೆನ್ನೈ,ಡಿ.5–ಭಾರಿ ಮಳೆಯಿಂದಾಗಿ ಪ್ರವಾಹ ಮತ್ತು ರನ್‌ವೇಗಳಲ್ಲಿ ನೀರು ನಿಂತಿದ್ದರಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡ ನಂತರ ಚೆನ್ನೈ ವಿಮಾನ ನಿಲ್ದಾಣವು ಕಾರ್ಯಾಚರಣೆಯನ್ನು ಪುನರಾರಂಭಿಸಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ನಿಲ್ದಾಣವು ಇಂದು ಬೆಳಗ್ಗೆ 9 ಗಂಟೆ ನಂತರ ಆಗಮನ ಮತ್ತು ನಿರ್ಗಮನ ಮುಕ್ತವಾಗಿದೆ. ವಿಮಾನ ನಿಲ್ದಾಣದ ಅಧಿಕಾರಿಗಳು ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, ಮಳೆ ನಿಂತಿದೆ ಮತ್ತು ನೀರು ತಗ್ಗಿದೆ. ರನ್‌ವೇಗಳು ಮತ್ತು ಟ್ಯಾಕ್ಸಿವೇಗಳಲ್ಲಿ ಸಾಕಷ್ಟು ಕೆಸರು ಇದೆ. ಇದನ್ನು ನಾಲ್ಕು ನಾಗರಿಕ ಬಂದೂಕು ತಂಡಗಳು (CFT) ಮತ್ತು ಹೆಚ್ಚುವರಿ ಮಾನವಶಕ್ತಿಯಿಂದ ತೆರವುಗೊಳಿಸಲಾಗುತ್ತಿದೆ ಎಂದರು.

ಎಲ್ಲಾ ಸಿಎನ್ ಎಸ್ ಮತ್ತು ಎಟಿಎಂ ಸೌಲಭ್ಯಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಚೆನ್ನೈ ತಂಡವು ದೃಢಪಡಿಸಿದೆ ನೋಟಮ್‌ನ್ನು ಶೀಘ್ರದಲ್ಲೇ



ಹಿಂಪಡೆಯಲಾಗುತ್ತದೆ. ವಿಮಾನಯಾನ ಸಂಸ್ಥೆಗಳು ಮತ್ತು ಇತರ ಸಂಬಂಧಪಟ್ಟವರು ಕಾರ್ಯಾಚರಣೆಯ ಪುನರಾರಂಭದ ಬಗ್ಗೆ ತಿಳಿಸಲಾಗಿದೆ ಮತ್ತು ಅದಕ್ಕೆ ಅನುಗುಣವಾಗಿ ತಮ್ಮ ವಿಮಾನಗಳನ್ನು ಯೋಜಿಸಲು ಕೇಳಲಾಗಿದೆ ಎಂದರು.

ಏರ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ (ATM) ವಿಮಾನ ನಿಲ್ದಾಣದಲ್ಲಿ ಸಿಲುಕಿರುವ ಪ್ರಯಾಣಿಕರ ಬ್ಯಾಕ್‌ಲಾಗ್‌ನ್ನು ತೆರವುಗೊಳಿಸಲು ನಿರ್ಗಮನಕ್ಕೆ ಆದ್ಯತೆ ನೀಡುತ್ತದೆ. ಪ್ರಸ್ತುತ 21 ವಿಮಾನಗಳಿವೆ ಮತ್ತು ಟರ್ಮಿನಲ್‌ಗಳಲ್ಲಿ ಸುಮಾರು 1,500 ಪ್ರಯಾಣಿಕರು ಇದ್ದಾರೆ.

ಆಂಧ್ರಪ್ರದೇಶದ ದಕ್ಷಿಣ ಕರಾವಳಿಯಲ್ಲಿ ನೆಲ್ಲೂರು ಮತ್ತು ಮಚಲಿಪಟ್ಟಣಂ ನಡುವೆ ಇಂದು 'ಮಿಚಾಂಗ್' ನಿಂದ ತೀವ್ರ ಭೂಕುಸಿತವುಂಟಾಗಿದ್ದು, ಜಲಾವೃತಗೊಂಡ ಕಾರಣ ಬಹು ರಸ್ತೆಗಳು ಮತ್ತು



ಸುರಂಗಮಾರ್ಗಗಳನ್ನು ಮುಚ್ಚಲಾಗಿದ್ದು, 8 ಜನರು ಪ್ರಾಣ ಕಳೆದುಕೊಂಡಿದ್ದಾರೆ.

ಪುಝಲ್ ಸರೋವರದಿಂದ ನೀರು ಬಿಡುವ ಕಾರಣ ಮಂಜಂಬಾಕ್ಕಂನಿಂದ ವಡಪೆರುಂಬಕ್ಕಂ ರಸ್ತೆಯಲ್ಲಿ ಸಂಚಾರವನ್ನು ಮುಚ್ಚಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪರಿಹಾರ ಶಿಬಿರಗಳಲ್ಲಿ ತಂಗಿರುವವರಿಗೆ ಆಹಾರ ವ್ಯವಸ್ಥೆ ಮಾಡಲು ಅಕ್ಕಿ–ಬೇಳೆ–ತರಕಾರಿ ಸೇರಿದಂತೆ ಸಿದ್ಧ ವಸ್ತುಗಳ ಲಭ್ಯತೆ ಮತ್ತು ಅವುಗಳ ಗುಣಮಟ್ಟದ ಬಗ್ಗೆ ರಾಜ್ಯ ಸರ್ಕಾರವು ಅಧಿಕಾರಿಗಳನ್ನು ಕೇಳಿದೆ. ಇದಕ್ಕೂ ಮುನ್ನ ಸಿಎಂ ಸ್ಟಾಲಿನ್, ಕ್ರಮಬದ್ಧ ಸುಧಾರಣೆಗಳು ಮತ್ತು ಸಮಗ್ರ ರಚನಾತ್ಮಕ ಸಿದ್ಧತೆಗಳಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿಲ್ಲ. ರಕ್ಷಣಾ ಮತ್ತು ಪರಿಹಾರ ಕಾರ್ಯಗಳು ಶರವೇಗದಲ್ಲಿ ನಡೆಯುತ್ತಿದೆ ಎಂದು ಹೇಳಿದರು.

ಪರಿಹಾರ ಕಾರ್ಯಗಳಿಗಾಗಿ ಇತರ ಜಿಲ್ಲೆಗಳಿಂದ 5,000 ಕಾರ್ಮಿಕರನ್ನು ಚೆನ್ನೈಗೆ ಸ್ಥಳಾಂತರಿಸಲಾಗಿದೆ. ತಮಿಳುನಾಡು ಮುಖ್ಯ ಕಾರ್ಯದರ್ಶಿ ಮತ್ತು ಇತರ ಉನ್ನತ ಅಧಿಕಾರಿಗಳು ಇಂಟಿಗ್ರೇಟೆಡ್ ಕಮಾಂಡ್ & ಕಂಟ್ರೋಲ್ ಸೆಂಟರ್‌ನಲ್ಲಿ ಕಾರ್ಯಾಚರಣೆಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಚೆನ್ನೈ ಕಾರ್ಪೊರೇಷನ್‌ಗೆ ರಕ್ಷಣಾ ಕಾರ್ಯಾಚರಣೆಗಳಿಗೆ ಆದ್ಯತೆ ನೀಡುವುದು, ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಗೊಂಡ ವ್ಯಕ್ತಿಗಳಿಗೆ ಆಹಾರವನ್ನು ಒದಗಿಸುವುದು ಮತ್ತು ರಸ್ತೆಗಳನ್ನು ತೆರವುಗೊಳಿಸಲಾಗುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಜೆಪಿ ಮುಖಂಡನಿಗೆ ಚೂರಿ ಇರಿತ: ಆರೋಪಿಗಳ ಕೂಡಲೇ ಬಂಧಿಸಿ

ಸಿಎಂ ಸಿದ್ದರಾಮಯ್ಯಗೆ ವಿಜಯೇಂದ್ರ ಆಗ್ರಹ

ಬೆಳಗಾವಿ,ಡಿ.5–ಬಿಜೆಪಿ ಮುಖಂಡ ಪೃಥ್ವಿ ಸಿಂಗ್‌ಗೆ ಚಾಕುವಿನಿಂದ ಇರಿದ ಘಟನೆಗೆ ಸಂಬಂಧಿಸಿದಂತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಸಹೋದರ (ಚನ್ನರಾಜ್ ಹಟ್ಟಿಹೊಳಿ)ನನ್ನು ಕೂಡಲೇ ಬಂಧನಕ್ಕೊಳಪಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈವಿಜಯೇಂದ್ರ, ಸಿಎಂ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.



ಬೆಳಗಾವಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪೃಥ್ವಿ ಸಿಂಗ್ ಅವರನ್ನು ನಿನ್ನೆ ವಿಜಯೇಂದ್ರ ಅವರು ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಮವಾರ ಸಂಜೆ 4 ಗಂಟೆ ಸುಮಾರಿಗೆ ಚನ್ನರಾಜ್ ಹಟ್ಟಿಹೊಳಿ ಅವರ ಗನ್‌ಮ್ಯಾನ್ ಹಾಗೂ ಅವರ ಬಲಗೈ ಬಂಟ ಇಬ್ಬರೂ ಪೃಥ್ವಿ ಸಿಂಗ್ ಅವರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಹಟ್ಟಿಹೊಳಿ ಪ್ರಭಾವಿ ವ್ಯಕ್ತಿಯಾಗಿದ್ದು, ಹೀಗಾಗಿಯೇ ಹಗಲು ಹೊತ್ತಿನಲ್ಲಿ ಈ ರೀತಿ ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದರು.

ಬೆಳಗಾವಿಯಲ್ಲಿ ವಿಧಾನಮಂಡಲದ ಚಳಿಗಾಲದ ಅಧಿವೇಶನ ನಡೆಯುತ್ತಿರುವ ಹೊತ್ತಿನಲ್ಲೇ ಬಿಜೆಪಿ ಕಾರ್ಯಕರ್ತನ ಮೇಲೆ ಹಲ್ಲೆ ನಡೆದಿರುವುದು ದುರದೃಷ್ಟಕರ ಸಂಗತಿ. ಪೃಥ್ವಿ ಸಿಂಗ್ ಅವರ ಮೇಲಿನ ಹಲ್ಲೆಗೆ ಕಾರಣರಾದವರನ್ನು ಕೂಡಲೇ ಸರ್ಕಾರ ಬಂಧಿಸಬೇಕು. ಈ ವಿಷಯದ ಬಗ್ಗೆ ಹೇಳಿಕೆಗಳನ್ನು ನೀಡುವ ಬದಲು, ಜವಾಬ್ದಾರಿಯುತ ಸಚಿವೆಯಾಗಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ತಮ್ಮ ಸಹೋದರನನ್ನು ತಕ್ಷಣವೇ ಪತ್ತೆಹಚ್ಚಿ ಬಂಧಿಸುವಂತೆ ನೋಡಿಕೊಳ್ಳಬೇಕು ಎಂದು ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.

ದೇಶದ ಸಂಪತ್ತಲ್ಲಿ ನಿಮಗೆ ಪಾಲು ಸಿಗಬೇಕು; ನಿಮಗೆ ಅನ್ಯಾಯವಾಗೋಕೆ ಬಿಡಲ್ಲ



ಬೆಳಗಾವಿ: ರಾಜ್ಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯದ ಕಲ್ಯಾಣಕ್ಕಾಗಿ 4 ಸಾವಿರದಿಂದ 5 ಸಾವಿರ ಕೋಟಿ ರೂ. ಮೀಸಲಿಡುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ಬೆಳಗಾವಿಯ ಸುವರ್ಣಸೌಧದಲ್ಲಿ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಿಎಂ, ಹುಬ್ಬಳ್ಳಿಯ ಸಮಾವೇಶದಲ್ಲಿ ತಾವು ನೀಡಿದ ಹೇಳಿಕೆಯಲ್ಲಿ ಏನು ತಪ್ಪಿದೆ. ಎಲ್ಲರಿಗೂ ರಕ್ಷಣೆ ಕೊಡುತ್ತೇವೆ ಎಂದಿದ್ದೆ, ಅದನ್ನು ಬಿಟ್ಟು ಬೇರೆ ಬರೆದರೆ ನಾನು ಏನು ಮಾಡುವುದು ಎಂದರು.

ನನ್ನ ಹೇಳಿಕೆಗೆ ಉಪ್ಪು ಖಾರ ಹಾಕಿ ಹೇಳುತ್ತಿದ್ದಾರೆ. ಮುಸ್ಲಿಮರು ಸೇರಿ ಎಲ್ಲರಿಗೂ ರಕ್ಷಣೆ ಕೊಡುತ್ತೇನೆ ಎಂದು ಹೇಳಿದ್ದೇನೆ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು.

ಹುಬ್ಬಳ್ಳಿಯಲ್ಲಿ ಸೋಮವಾರ ಸಂಜೆ ನಡೆದ ಮುಸ್ಲಿಂ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಅವರು, 4ರಿಂದ 5 ಸಾವಿರ ಕೋಟಿ ರೂ.ಗಳನ್ನು ಸಮುದಾಯದ ಕಲ್ಯಾಣಕ್ಕಾಗಿ ಮೀಸಲಿಡುವುದಾಗಿ ಘೋಷಿಸಿದ್ದರು. ಅಲ್ಲದೆ ಮುಂದೆ ಅದನ್ನು 10 ಸಾವಿರ ಕೋಟಿಗೆ ಹೆಚ್ಚಿಸಬೇಕು ಅನ್ನೋದು ನಮ್ಮ ಉದ್ದೇಶ. ನಿಮ್ಮ ಧಾರ್ಮಿಕ ಕೇಂದ್ರಗಳಿಗೆ ಅನುದಾನ ಬೇಕು. ದೇಶದ ಸಂಪತ್ತಲ್ಲಿ ನಿಮಗೆ ಪಾಲು ಸಿಗಬೇಕು. ನಿಮಗೆ ಅನ್ಯಾಯವಾಗೋಕೆ ಬಿಡಲ್ಲ. ನಿಮ್ಮನ್ನು ನಾನು ರಕ್ಷಣೆ ಮಾಡುತ್ತೇನೆ ಎಂದು ಹೇಳಿದ್ದರು. ಇಂದು ತಮ್ಮ ಹೇಳಿಕೆಯಲ್ಲಿ ತಪ್ಪೇನಿದೆ? ಎಂದು ಅಚ್ಚರಿ ವ್ಯಕ್ತಪಡಿಸಿದ ಸಿಎಂ, ತಮ್ಮ ಹೇಳಿಕೆಯ ಒಂದು ಭಾಗವನ್ನು ಮಾತ್ರ ಸಮರ್ಥವಾಗಿ ಹೈಲೈಟ್ ಮಾಡಿ, ಇನ್ನೊಂದು ಭಾಗವನ್ನು ನಿರ್ಲಕ್ಷಿಸಿರುವ ಮಾಧ್ಯಮಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮುಸ್ಲಿಮರಿಗೆ ಅನ್ಯಾಯವಾಗಲು ಬಿಡಲ್ಲ ಎಂಬ ಸಿಎಂ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಪ್ರತಿಪಕ್ಷ ಬಿಜೆಪಿ ನಾಯಕರು, ಮುಸ್ಲಿಮರಿಗೆ ಏನು ಅನ್ಯಾಯ ಆಗಿದೆ ಎಂದು ಪ್ರಶ್ನಿಸಿದ್ದಾರೆ. ರಾಜಕೀಯ ಲಾಭಕ್ಕಾಗಿ ಸಿದ್ದರಾಮಯ್ಯ ಅವರು ಮುಸ್ಲಿಮರ ತುಷ್ಟೀಕರಣ ಮಾಡುತ್ತಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಡಿಸಿಎಂ ಡಾ.ಅಶ್ವತ್ಥನಾರಾಯಣ್, ಶಾಸಕ ಮಹೇಶ್ ಟೆಂಗಿನಕಾಯಿ ಆರೋಪಿಸಿದ್ದಾರೆ.

ಅಂತರಶಾಲಾ ಮಟ್ಟದ ಛದ್ಮವೇಷ ಸ್ಪರ್ಧೆ

ಮೈಸೂರು, ಡಿ. 5– ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ವಿದ್ಯಾಸಂಸ್ಥೆಯಲ್ಲಿ ಕಲ್ಲುಣಿಕೆ ಮಹದೇವಯ್ಯನವರ ಸ್ಮರಣಾರ್ಥ ನರ್ಸರಿ ಮಕ್ಕಳಿಗಾಗಿ ಅಂತರಶಾಲಾ ಮಟ್ಟದ ಛದ್ಮವೇಷ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಅಭಿನಂದನಾ ಪತ್ರ, ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸುವ ಶಾಲೆಗೆ ಪರ್ಯಾಯ ಪಾರಿತೋಷಕ ಹಾಗೂ ಸ್ಮರಣಿಕೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಶ್ರೀಮತಿ ಶುಭಾ, ಮೊ. 9591451558 ಮೂಲಕ ಸಂಪರ್ಕಿಸಬಹುದು.



ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷರಾದ ಎನ್.ಆರ್.ನಾಗೇಶ್ ಅವರ 56ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕಾಯಕ ಸಮಾಜದ ಕಾಯಕಯೋಗಿಗಳಾದ ಕುಂಬಾರ್ ಸಮಾಜದ ಸುನೀಲ್, ಸವಿತಾ ಸಮಾಜದ ನಾಗೇಂದ್ರ, ಮೇದರ್ ಸಮಾಜದ ಸಿದ್ದಯ್ಯ, ವಿಶ್ವಕರ್ಮ ಸಮುದಾಯದ ನಾಗರಾಜು, ಕುರುಬ ಸಮಾಜದ ಪಾಂಡುರಂಗ, ಮಡಿವಾಳ ಸಮಾಜದ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕಾಂಗ್ರೆಸ್ ವಕ್ತಾರ ಲಕ್ಷ್ಮಣ್,. ಎಪಿಎನ್ ಸಂಸ್ಥೆಯ ಛೇರ್ಮನ್ ನಾಗೇಶ್, ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ಬಣ್ಣ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ರಾಜ್ಯ ಅಧ್ಯಕ್ಷ ಕೆ.ಎಸ್.ಶಿವರಾಂ, ಮಾಜಿ ಉಪಮೇಯರ್ ಮಹದೇವ್, ಹಿಂದುಳಿದ ವರ್ಗಗಳ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಕೊಲ್ಕತಾದ ವ್ಯಕ್ತಿಯ ವಿವಾಹವಾಗಲು ಭಾರತಕ್ಕೆ ಬಂದ ಪಾಕಿಸ್ತಾನ ಮಹಿಳೆ

ಕೊಲ್ಕತಾ: ಪ್ರೇಮಿಗಾಗಿ ಪಾಕಿಸ್ತಾನಕ್ಕೆ ತೆರಳಿದ್ದ ಭಾರತದ ಅಂಜು ವಿಚಾರ ಹಸಿರಾಗಿರುವಂತೆಯೇ ಇದೀಗ ಅಂತಹುದೇ ಮತ್ತೊಂದು ಪ್ರಕರಣ ವರದಿಯಾಗಿದೆ.

ಈ ಬಾರಿ ಕೊಲ್ಕತಾ ಮೂಲದ ವ್ಯಕ್ತಿಯನ್ನು ವಿವಾಹವಾಗಲು ಪಾಕಿಸ್ತಾನದ ಮಹಿಳೆಯೊಬ್ಬಳು ಗಡಿದಾಟಿ ಭಾರತಕ್ಕೆ ಆಗಮಿಸಿದ್ದಾರೆ. ಪಾಕಿಸ್ತಾನದ ಮಹಿಳೆ ಜವೇರಿಯಾ ಖಾನುಮ್ ಎಂಬುವವರು ವಾಘಾ–ಅಟ್ಟಾರಿ ಅಂತಾರಾಷ್ಟ್ರೀಯ ಗಡಿಯಿಂದ ಭಾರತಕ್ಕೆ ಬಂದಿದ್ದು, ಕೊಲ್ಕತ್ತಾ ನಿವಾಸಿಯನ್ನು ಮದುವೆಯಾಗಲು ಭಾರತಕ್ಕೆ ಬಂದಿದ್ದಾರೆ. ಮುಂದಿನ ವರ್ಷ ಜನವರಿಯಲ್ಲಿ ಆಕೆಯ ವಿವಾಹವನ್ನು ನಿಗದಿಪಡಿಸಲಾಗಿದೆ ಎಂದು ತಿಳಿದುಬಂದಿದೆ.



ಕರಾಚಿ ನಿವಾಸಿಯಾಗಿರುವ ಜವೇರಿಯಾ ಖಾನುಮ್ ತಮ್ಮ ಕುಟುಂಬಸ್ಥರು ನಿಶ್ಚಯಿಸಿದವರ ಕೊಲ್ಕತಾ ಮೂಲದ ಸಮೀರ್ ಖಾನ್‌ರನ್ನು ವಿವಾಹವಾಗಲು ಭಾರತಕ್ಕೆ ಬಂದಿದ್ದಾರೆ. ಜವೇರಿಯಾರನ್ನು ಬರಮಾಡಿಕೊಳ್ಳಲು ವರ ಸಮೀರ್ ಖಾನ್ ಮತ್ತು ಅವರ ಕುಟುಂಬದ ಕೆಲವು ಸದಸ್ಯರು ಗಡಿಯಲ್ಲಿ ಜವೇರಿಯಾಗೆ ಭರ್ಜರಿ ಸ್ವಾಗತ ನೀಡಿ, ಆಕೆಯನ್ನು ಸ್ವಾಗತಿಸಿದರು.

ಕ್ರಿಮಿನಲ್ ಕೇಸ್ ಎದುರಿಸುತ್ತಿರುವವರ ಪಾಸ್‌ಪೋರ್ಟ್ ನವೀಕರಿಸಲು ಸಾಧ್ಯವಿಲ್ಲ

ಬೆಂಗಳೂರು, ಡಿ.5– ಕ್ರಿಮಿನಲ್ ಕೇಸ್ ಎದುರಿಸುತ್ತಿರುವವರಿಗೆ ಹೊಸ ಪಾಸ್‌ಪೋರ್ಟ್ ನೀಡುವುದು, ನವೀಕರಣ ಅಥವಾ ಮರು ವಿತರಣೆ ಮಾಡಲು ಸಾಧ್ಯವಿಲ್ಲ ಎಂಬ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯ ನಿಯಮವನ್ನು ಕರ್ನಾಟಕ ಹೈಕೋರ್ಟ್ ಸೋಮವಾರ ಎತ್ತಿಹಿಡಿದಿದೆ.



ಸೆಷನ್ಸ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವ ಸಂತೋಷ ಬೀಜಾಡಿ ಶ್ರೀನಿವಾಸ್ ಅವರ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರು, ವ್ಯಕ್ತಿಯ ಕ್ರಿಮಿನಲ್ ಮೊಕದ್ದಮೆಯನ್ನು ಪರಿಗಣಿಸದೆ ಆತನಿಗೆ ಪಾಸ್‌ಪೋರ್ಟ್ ವಿತರಣೆ ಮಾಡಬಹುದು ಅಥವಾ ನವೀಕರಣ/ಮರು ನೀಡುವಂತೆ ಪಾಸ್‌ಪೋರ್ಟ್ ಕಾಯ್ದೆಯಲ್ಲಿ ಎಲ್ಲಿಯೂ ಹೇಳಿಲ್ಲ ಎಂದರು.

ಸೆಕ್ಷನ್ 6(2)(ಎಫ್) ಅಡಿಯಲ್ಲಿ ಪಾಸ್‌ಪೋರ್ಟ್ ವಿತರಣೆಗೆ ನಿಯಮಗಳನ್ನು ರೂಪಿಸಲಾಗಿದೆ. ಈ ನಿಯಮಗಳ ಪ್ರಕಾರ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವವರಿಗೆ ಹೊಸ ಪಾಸ್ ಪೋರ್ಟ್, ನವೀಕರಣ ಅಥವಾ ಮರು ವಿತರಣೆ ನೀಡುವುದನ್ನು ನಿಷೇಧಿಸಲಾಗಿದೆ. ಈ ನಿಯಮಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿದೆ. ಆದಾಗ್ಯೂ, ಸಂತೋಷ ಬೀಜಾಡಿ ಶ್ರೀನಿವಾಸ ಅವರು ತಮ್ಮ ವಿರುದ್ಧದ ಕ್ರಿಮಿನಲ್ ಮೊಕದ್ದಮೆ ವಿಚಾರಣೆ ನಡೆಸುತ್ತಿರುವ ಸೆಷನ್ಸ್ ನ್ಯಾಯಾಲಯವನ್ನು ಸಂಪರ್ಕಿಸಬಹುದು ಮತ್ತು ಅಲ್ಪಾವಧಿಯ ಪಾಸ್‌ಪೋರ್ಟ್ ಅನ್ನು ನೀಡುವಂತೆ ಕೋರಬಹುದು. ಆದರೆ ಸೆಷನ್ಸ್ ನ್ಯಾಯಾಲಯವು ಅಂತಹ ಅರ್ಜಿಯನ್ನು ಕಾಯ್ದೆಗೆ ಅನುಗುಣವಾಗಿ ಕಟ್ಟುನಿಟ್ಟಾಗಿ ಪರಿಗಣಿಸಬೇಕು ಎಂದು ಹೈಕೋರ್ಟ್ ಹೇಳಿದೆ.



ಶ್ರೀರಂಗಪಟ್ಟಣ ತಾಲೂಕು ಬೆಳಗೊಳ ಗ್ರಾಮದ ಶ್ರೀ ವಿಶ್ವಮಂಗಳ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ವೀರೇಂದ್ರ ಹೆಗ್ಗಡೆಯವರು 10 ಲಕ್ಷ ರೂ.ಗಳ ಚೆಕ್ ಅನ್ನು ದೇವಾಲಯದ ಶ್ರೀ ಲಕ್ಷ್ಮೀನರಹರಿ ಸೇವಾ ಟ್ರಸ್ಟ್‌ಗೆ ಧರ್ಮಸ್ಥಳ ಸಂಸ್ಥೆಯ ಮೈಸೂರು ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ ನೆಲ್ಲಿತ್ತಾಯ ಹಸ್ತಾಂತರಿಸಿದರು. ಶ್ರೀ ಲಕ್ಷ್ಮೀನರಹರಿ ಸೇವಾ ಟ್ರಸ್ಟ್‌ನ ವ್ಯವಸ್ಥಾಪಕ ಬಿ.ಎಸ್. ಸಂತೋಷ್, ಅಕೌಂಟೆಂಟ್ ಶ್ರೀವತ್ಸ, ಸುಬ್ಬರತ್ನಮ್ ಶ್ರೀಹರಿ, ಶ್ರೀಕೃಷ್ಣ, ಸಂಪತ್‌ಕುಮಾರ್, ಧರ್ಮಸ್ಥಳ ಸಂಸ್ಥೆಯ ತಾಲೂಕು ಯೋಜನಾಧಿಕಾರಿ ಯಶವಂತ್, ಸದಸ್ಯರಾದ ಧನ್ಯಕುಮಾರ್, ಗ್ರಾಮದ ಮುಖಂಡರಾದ ಶ್ರೀನಿವಾಸಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷ ಸುರೇಶ್, ಮುಖಂಡರಾದ ವಾಸು, ಪ್ರಸನ್ನ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗೃಹಲಕ್ಷ್ಮಿ ಎಲ್ಲರಿಗೂ ಒಲಿತಾಳೆ; ಯಾರಿಗೂ ಆತಂಕ ಬೇಡ

ಫಲಾನುಭವಿಗಳಿಗೆ ಡಾ.ಯತೀಂದ್ರ ಅಭಯ



ಮೈಸೂರು,ಡಿ.5(ಎಸ್‌ಪಿಎನ್)–ಐದು ಗ್ಯಾರಂಟಿಗಳಲ್ಲೊಂದಾದ ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿಕೊಂಡಿರುವ ಎಲ್ಲಾ ಫಲಾನುಭವಿಗಳಿಗೂ ಈ ಸೌಲಭ್ಯ ದೊರೆಯಲಿದೆ. ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಫಲಾನುಭವಿಗಳಿಗೆ ಅಭಯ ನೀಡಿದರು.

ಮೈಸೂರು ಜಿಲ್ಲೆ ವರುಣ ವಿಧಾನಸಭಾ ಕ್ಷೇತ್ರದ ಕಿರಾಳು ಸಜ್ಜೆಹುಂಡಿ ಗ್ರಾಮದಲ್ಲಿ ಗ್ರಾಪಂ ಹಾಗೂ ತಾಪಂ ಸಹಯೋಗದೊಂದಿಗೆ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿ ಜನರ ಅಹವಾಲು ಸ್ವೀಕರಿಸುವ ಸಂದರ್ಭದಲ್ಲಿ ತಿಳಿಸಿದರು.

ಅಲ್ಲದೆ, ಕುಡಿಯುವ ನೀರು, ಸಾರಿಗೆ ಸಮಸ್ಯೆ, ಕಂದಾಯ ಇಲಾಖೆಯಲ್ಲಿನ ಸಮಸ್ಯೆ ಹೀಗೆ ಹಲವಾರು ಸಮಸ್ಯೆಗಳ ಬಗ್ಗೆ ಈ ಸಭೆಯಲ್ಲಿ ಗಮನ ಸೆಳೆದಿದ್ದೀರಿ. ಈ ಸಮಸ್ಯೆಗಳನ್ನು ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಬಗೆಹರಿಸುವುದಾಗಿ ಭರವಸೆ ನೀಡಿದರು.

ವರುಣ ಕ್ಷೇತ್ರದ ಹಲವು ಸಮಸ್ಯೆಗಳು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನದಲ್ಲಿದ್ದು, ಹಂತಹಂತವಾಗಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲಾಗುವುದು. ಗೃಹಲಕ್ಷ್ಮಿ, ಅನ್ನಭಾಗ್ಯ ಫಲಾನುಭವಿಗಳಿಗೆ ತಾಂತ್ರಿಕ ಕಾರಣಗಳಿಗಾಗಿ ಕೆಲವರ ಖಾತೆಗೆ ಹಣ ಸಂದಾಯವಾಗಿಲ್ಲ. ಆದರೂ ಈ ಸಮಸ್ಯೆ ಬಗ್ಗೆ ಸರ್ಕಾರ ಗಂಭೀರವಾಗಿದ್ದು, ಫಲಾನುಭವಿಗಳು ಆತಂಕಪಡುವ ಅಗತ್ಯವಿಲ್ಲ ಎಂದು ಹೇಳಿದರು.

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಇಲ್ಲಿನ ಮತದಾರರು ನಮ್ಮ ತಂದೆ ಸಿದ್ದರಾಮಯ್ಯ ಅವರನ್ನು ಗೆಲ್ಲಿಸುವ ಮೂಲಕ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಲು ಕಾರಣಕರ್ತರಾಗಿದ್ದೀರಿ. ನಿಮ್ಮ ಅಭಿಮಾನಕ್ಕೆ ನಾವು ಸದಾ ಚಿರಋಣಿಯಾಗಿರುತ್ತೇವೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಸಾಕಮ್ಮ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ರವಿ, ಮುಖಂಡರಾದ ಶಾಂತಮ್ಮ ಗುರುಸ್ವಾಮಿ, ಕಿರಣ್, ಸಂತೋಷ್, ಲಲಿತಾದ್ರಿಪುರ ಬಸವರಾಜು, ಎಂಸಿ ಹುಂಡಿ ಶಿವಪ್ರಸಾದ್, ನಂದೀಶ್, ಗಿರೀಶ್, ಸಜ್ಜೆಹುಂಡಿ ರವಿ, ಜಂತಗಳ್ಳಿ ಜಗದೀಶ್, ಮಂಡಕಳ್ಳಿ ಸೋಮಶೇಖರ್, ರಾಯಣ್ಣಹುಂಡಿ ಪಾಪಣ್ಣ, ಕುಂಬರಳ್ಳಿ ಮಠ ಮಹದೇವ್, ಕಂದಾಯ ಇಲಾಖೆಯ ಶಂಕರ್, ಲತಾ ಹಾಗೂ ಗ್ರಾಪಂ ಅಧಿಕಾರಿಗಳು, ಸದಸ್ಯರು ಹಾಜರಿದ್ದರು.

ಹುತಾತ್ಮ ಯೋಧ ಪ್ರಾಂಜಲ್ ಕುಟುಂಬಕ್ಕೆ 50 ಲಕ್ಷ ರೂ. ಚೆಕ್ ಹಸ್ತಾಂತರ



ಬೆಂಗಳೂರು, ಡಿ.5– ಜಮ್ಮು ಮತ್ತು ಕಾಶ್ಮೀರದ ರಜೌರಿಯಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಹುತಾತ್ಮರಾದ ರಾಜ್ಯದ ಹೆಮ್ಮೆಯ ಕ್ಯಾಪ್ಟನ್ ಪ್ರಾಂಜಲ್ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ 50 ಲಕ್ಷ ರೂಪಾಯಿಗಳ ಚೆಕ್ ಅನ್ನು ಮಂಗಳವಾರ ಹಸ್ತಾಂತರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹುತಾತ್ಮ ಯೋಧನ ಕುಟುಂಬಕ್ಕೆ 50 ಲಕ್ಷ ರೂ.ಗಳ ಪರಿಹಾರ ಘೋಷಣೆ ಮಾಡಿದ ಬೆನ್ನಲ್ಲೇ, ಜಿಲ್ಲಾಧಿಕಾರಿ ದಯಾನಂದ್ ಅವರು ಪ್ರಾಂಜಲ್ ಅವರ ನಿವಾಸಕ್ಕೆ ತೆರಳಿ ಕುಟುಂಬದ ಸದಸ್ಯರಿಗೆ 25 ಲಕ್ಷ ರೂಪಾಯಿ ಮೊತ್ತದ ಎರಡು ಚೆಕ್‌ಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಸೈನಿಕ ಕಲ್ಯಾಣ ನಿರ್ದೇಶಕ ಶಶಿಧರ್ ಉಪಸ್ಥಿತರಿದ್ದರು. ಮುಂದಿನ ದಿನಗಳಲ್ಲಿಯೂ ರಾಜ್ಯ ಸರ್ಕಾರ ನಿಮ್ಮ ಕುಟುಂಬದ ಜತೆ ಇರಲಿದೆ ಎಂದು ಭರವಸೆ ನೀಡಲಾಗಿದೆ.

ಚಾಮುಂಡಿಬೆಟ್ಟದಲ್ಲಿ ವಿದ್ಯಾರ್ಥಿಗಳಿಂದ ಶ್ರಮದಾನ



ಮೈಸೂರು, ಡಿ.5–ಮೈಸೂರಿನ ಕುವೆಂಪುನಗರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಚಾಮುಂಡಿ ಬೆಟ್ಟದಲ್ಲಿ ವಾರ್ಷಿಕ ಶ್ರಮದಾನ ಶಿಬಿರವನ್ನು ಮಂಗಳವಾರ ನಡೆಸಲಾಯಿತು.

ರಾಷ್ಟ್ರೀಯ ಸೇವಾ ಯೋಜನೆ ಶಿಬಿರಾರ್ಥಿಗಳು ಮತ್ತು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಪದಾಧಿಕಾರಿಗಳು ಜೊತೆಗೂಡಿ ಚಾಮುಂಡಿಬೆಟ್ಟದಲ್ಲಿ ಪರಿಸರ ಜಾಗೃತಿ ಜಾಥಾ ನಡೆಸಿ, ಸ್ವಚ್ಛತಾ ಶ್ರಮದಾನ ಮುಖಾಂತರ ದೇವಾಲಯದ ಸುತ್ತಲೂ ಸ್ವಚ್ಛಗೊಳಿಸಿದರು.

ಈ ವೇಳೆ ಗ್ರಾಮಪಂಚಾಯಿತಿ ಅಧ್ಯಕ್ಷೆ ನಾಗಮ್ಮ, ಉಪಾಧ್ಯಕ್ಷ ವೈ.ಎಸ್.ರವಿಕುಮಾರ್, ಸದಸ್ಯ ಕೆ.ಭರತ್, ಪಿಡಿಓ ರೂಪೇಶ್, ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ನಿವೃತ್ತ ಪ್ರಾಂಶುಪಾಲ ಎಸ್.ಚಿದಂಬರ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ. ದಿವಾಕರ್, ಶಿಬಿರಾಧಿಕಾರಿ ಕ್ಯಾತಮಾರನಹಳ್ಳಿ ಮಹೇಶ, ಸಹ ಶಿಬಿರಾಧಿಕಾರಿ ಜಿ.ಬಿ.ಮಹೇಶ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಭಾಷ್ಯಂ, ಉಪನ್ಯಾಸಕರಾದ ಶ್ರೀನಿವಾಸ್, ಸದಾನಂದ್, ಪ್ರಸನ್ನ, ರವಿಕುಮಾರ್, ಮಧುಸೂಧನ ರಾಜೇ ಅರಸ್ ಪಾಲ್ಗೊಂಡಿದ್ದರು.

ರಜಪೂತ ಕರ್ಣಿ ಸೇನಾ ಅಧ್ಯಕ್ಷ ಸುಖದೇವ್‌ಸಿಂಗ್‌ಗೆ ಗುಂಡಿಕ್ಕಿ ಹತ್ಯೆ

ಜೈಪುರ, ಡಿ.5– ರಾಜಸ್ಥಾನದ ಜೈಪುರದಲ್ಲಿ ಹಾಡಹಗಲೇ ರಾಷ್ಟ್ರೀಯ ರಜಪೂತ ಕರ್ಣಿ ಸೇನಾ ರಾಷ್ಟ್ರೀಯ ಅಧ್ಯಕ್ಷ ಸುಖದೇವ್ ಸಿಂಗ್ ಗೊಗಮೆಡಿ ಅವರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.



ಇಂದು ಮಧ್ಯಾಹ್ನ ಶ್ಯಾಮನಗರದಲ್ಲಿರುವ ಸುಖದೇವ್ ಸಿಂಗ್ ಅವರ ಮನೆಗೆ ನುಗ್ಗಿದ ನಾಲ್ವರು ದುಷ್ಕರ್ಮಿಗಳು ಅವರ ಮೇಲೆ ಗುಂಡು ಹಾರಿಸಿ ಅಲ್ಲಿಂದ ಪರಾರಿಯಾಗಿದ್ದಾರೆ. ಈ ಗುಂಡಿನ ದಾಳಿಯಲ್ಲಿ ಸುಖದೇವ್‌ಸಿಂಗ್ ಅವರಿಗೆ ಎರಡು ಗುಂಡುಗಳು ತಗುಲಿದ್ದವು. ತಕ್ಷಣ ಅವರನ್ನು ಮಾನಸ ಸರೋವರದಲ್ಲಿರುವ ಮೆಟ್ರೋ ಮಾಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ವೈದ್ಯರು ಮೃತಪಟ್ಟಿರುವುದಾಗಿ ಘೋಷಿಸಿದ್ದಾರೆ. ಗುಂಡಿನ ದಾಳಿಯಲ್ಲಿ ಸುಖದೇವ್ ಸಿಂಗ್ ಅವರ ಇಬ್ಬರು ಭದ್ರತಾ ಸಿಬ್ಬಂದಿ ಸಹ ಗಾಯಗೊಂಡಿದ್ದಾರೆ ಎಂದು ರಾಜಸ್ಥಾನ ಪೊಲೀಸ್ ಮಹಾನಿರ್ದೇಶಕ ಉಮೇಶ್ ಮಿಶ್ರಾ ಅವರು ತಿಳಿಸಿದ್ದಾರೆ.





ಮೈಸೂರಿನ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟಿನ ಸುಮಾರು 40 ವಿದ್ಯಾರ್ಥಿಗಳು ಮಂಗಳವಾರ 50–60 ಪುರಾತನ ವೀರಗಲ್ಲುಗಳಿರುವ ಈರನಗೆರೆಯಲ್ಲಿನ ಜಾಗದಲ್ಲಿ ಬೆಳೆದಿದ್ದ ಕಸ–ಕಡ್ಡಿಗಳನ್ನು ತೆಗೆದು ಶುದ್ಧಗೊಳಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಭಾಗವಾಗಿ ನಡೆದ ಈ ಕಾರ್ಯದ ನೇತೃತ್ವವನ್ನು ಕಾಲೇಜಿನ ಪ್ರಿನ್ಸಿಪಾಲ್ ಡಾ.ಪ್ರಭುಸ್ವಾಮಿ, ಕಾರ್ಯದರ್ಶಿ ಡಾ.ಮಂಜುನಾಥ್, ಎನ್‌ಎಸ್‌ಎಸ್ ಅಧಿಕಾರಿ ಭರತ್ ವಹಿಸಿದ್ದರು. ಕಾರ್ಯಕ್ರಮದ ವ್ಯವಸ್ಥೆಗೆ ಆಸಕ್ತಿ ವಹಿಸಿದ್ದ ನಾಗಮಂಗಲದ ಇತಿಹಾಸಕಾರ ಮೊಹಮ್ಮದ್ ಖಲೀಮುಲ್ಲಾ, ಮೈಸೂರಿನ ಇತಿಹಾಸ ತಜ್ಞ ಮತ್ತು ಹಿರಿಯ ಪತ್ರಕರ್ತ ಗೌರಿ ಸತ್ಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ವೀರಗಲ್ಲುಗಳ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು.

ಹಿಂದಿ ಜನಪ್ರಿಯ 'ಸಿಐಡಿ' ಧಾರಾವಾಹಿಯ ಪ್ರಮುಖ ಪಾತ್ರಧಾರಿ ದಿನೇಶ್ ಫಡ್ನಿಸ್ ವಿಧಿವಶ

ಮುಂಬೈ, ಡಿ.5–ಹಿಂದಿ ಜನಪ್ರಿಯ ಧಾರಾವಾಹಿ ಸಿಐಡಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಮೂಲಕ ಸಿಐಡಿ ನಟ ಎಂದೇ ಖ್ಯಾತರಾಗಿದ್ದ ದಿನೇಶ್ ಫಡ್ನಿಸ್ ನಿಧನರಾಗಿದ್ದಾರೆ.



ಈ ಮಾಹಿತಿಯನ್ನು ಸಹನಟ ದಯಾನಂದ್ ಶೆಟ್ಟಿ ಖಚಿತಪಡಿಸಿದ್ದಾರೆ. ಡಿಸೆಂಬರ್ 1ರಂದು ಅವರಿಗೆ ಹೃದಯಾಘಾತವಾಗಿತ್ತು. ಕೂಡಲೇ ಅವರನ್ನು ಮುಂಬೈ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಳೆದ ಕೆಲವು ದಿನಗಳಿಂದ ಅವರು ಗಂಭೀರ ಸ್ಥಿತಿಯಲ್ಲಿದ್ದರು ಮತ್ತು ಅವರನ್ನು ವೆಂಟಿಲೇಟರ್ ಬೆಂಬಲದಲ್ಲಿ ಇರಿಸಲಾಗಿತ್ತು. ಮುಂಬೈನ ತುಂಗಾ ಆಸ್ಪತ್ರೆಯಲ್ಲಿ ಜೀವನ್ಮರಣದ ನಡುವೆ ಹೋರಾಡುತ್ತಿದ್ದಾರೆ ಎಂಬ ವರದಿಗಳು ವೈರಲ್ ಆಗಿದ್ದವು. ಡಿಸೆಂಬರ್ 1, ಶುಕ್ರವಾರ ರಾತ್ರಿ ಅವರ ಆರೋಗ್ಯ ಕ್ಷೀಣಿಸುತ್ತಿರುವ ಬಗ್ಗೆ ಸಿಐಡಿಯ ಇಡೀ ಪಾತ್ರವರ್ಗ ಮತ್ತು ಸಿಬ್ಬಂದಿಗೆ ಮಾಹಿತಿ ನೀಡಲಾಯಿತು. ಆದರೆ, ಫಡ್ನಿಸ್ ಅವರಿಗೆ ಹೃದಯಾಘಾತವಾಗಿಲ್ಲ, ಆದರೆ ಯಕೃತ್ತಿಗೆ ಹಾನಿಯಾದ ಕಾರಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಿಐಡಿ ಖ್ಯಾತಿಯ ದಯಾನಂದ ಶೆಟ್ಟಿ ನಂತರ ಸ್ಪಷ್ಟಪಡಿಸಿದರು.

ಅವರು ಒಂದು ದಶಕಕ್ಕೂ ಹೆಚ್ಚು ಕಾಲ ಸಿಐಡಿಯ ಭಾಗವಾಗಿದ್ದರು, ಇದರಲ್ಲಿ ಅವರು ಇನ್ಸ್‌ಪೆಕ್ಟರ್ ಫ್ರೆಡೆರಿಕ್ಸ್ ಪಾತ್ರವನ್ನು ನಿರ್ವಹಿಸಿದರು ಮತ್ತು ಮನೆಮಾತಾದರು. ಅವರು ಅದಾಲತ್ ಶೋನಲ್ಲಿ ಪೊಲೀಸ್ ಪಾತ್ರವನ್ನು ನಿರ್ವಹಿಸಿದರು ಮತ್ತು ತಾರಕ್ ಮೆಹ್ತಾ ಕಾ ಊಲ್ಟಾ ಚಶ್ಮಾದಲ್ಲಿ ಇನ್ಸ್‌ಪೆಕ್ಟರ್ ಆಗಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡರು.

ಮೂವರು ಸಾಧಕರಿಗೆ ಅಮ್ಮ ವಸುಂಧರೆ ಪ್ರಶಸ್ತಿ ಪ್ರದಾನ

ಮೈಸೂರು: ಸರಗೂರು ತಾಲೂಕಿನ ದೇವಲಾಪುರದ ಅಮ್ಮ ವಸುಂಧರೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಟ್ರಸ್ಟ್ ವತಿಯಿಂದ ಮೂವರು ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಮೈಸೂರಿನ ವಿ.ವಿ. ಮೊಹಲ್ಲಾದ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಮಂಗಳವಾರ ನಡೆದ ಸುವರ್ಣ ಕರ್ನಾಟಕ ರಾಜ್ಯೋತ್ಸವ ಹಾಗೂ ಜನಪದ ಗೀತ ಗಾಯನ ಕಾರ್ಯಕ್ರಮದಲ್ಲಿ ಎಸ್.ಗಾಯತ್ರಿ, ಪಿ.ನಾಗರತ್ನಮ್ಮ ಹಾಗೂ ಡಾ. ರೇಖಾ ಅರುಣ್ ಅವರಿಗೆ 'ಅಮ್ಮ ವಸುಂಧರೆ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿ.ವಿ. ಮೊಹಲ್ಲಾದ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ನಡೆದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಹಾಗೂ ಜನಪದ ಗೀತ ಗಾಯನ ಕಾರ್ಯಕ್ರಮದಲ್ಲಿ ಡಾ.ರೇಖಾ ಅರುಣ್, ಪಿ.ನಾಗರತ್ನಮ್ಮ ಅವರಿಗೆ ಗಾನ ವಸುಂಧರೆ, ಎಸ್. ಗಾಯತ್ರಿ ಅವರಿಗೆ ನೃತ್ಯ ವಸುಂಧರೆ ಪ್ರಶಸ್ತಿಯನ್ನು ದೇವಲಾಪುರದ ರೈತ ಮಹಿಳೆ ದೇವಮ್ಮ ಪ್ರದಾನ ಮಾಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಎಚ್.ಪ್ರಕಾಶ್ ವಿಶೇಷ ಉಪನ್ಯಾಸ ನೀಡಿದರು. ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗು ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಶಿಕ್ಷಣಾಧಿಕಾರಿ ಶಿವಕುಮಾರ್, ಬೆಂಗಳೂರಿನ ಸಮಾಜ ಸೇವಕ ಶಿವಪ್ರಸಾದ್ ಮುಖ್ಯ ಅತಿಥಿಯಾಗಿದ್ದರು. ಪ್ರತಿಭಾವಂತ ವಿದ್ಯಾರ್ಥಿನಿಯರಾದ ಆರ್.ಜಯಶ್ರೀ, ಆರ್.ಡಿಂಪಲ್ ಹಾಗೂ ಎಚ್.ಸಿ.ಐಶ್ವರ್ಯ ಅವರನ್ನು ನಿಲಯ ಪಾಲಕಿ ರುಕ್ಮಿಣಿ ಅಭಿನಂದಿಸಿದರು. ಅಮ್ಮ ವಸುಂಧರೆ ಟ್ರಸ್ಟಿನ ಸಂಸ್ಥಾಪಕ ಕಾರ್ಯದರ್ಶಿ ಅಮ್ಮ ರಾಮಚಂದ್ರ ಸ್ವಾಗತಿಸಿದರು. ಗೀತಗಾಯನ ಮರಿಸ್ವಾಮಿ ಸರ್ವಾರ್ಥ, ಕುಮಾರಸ್ವಾಮಿ, ನವೀನ್, ಮೈಸೂರಿನ ಕೃಷ್ಣಮೂರ್ತಿ, ಶ್ರೀಧರ್, ರಾಣಿ ವರುಣ, ಸಿಂಚನಾ, ಕಂಸಾಳೆ ಮಹದೇವು ಮತ್ತು ತಂಡದವರು ಗೀತಗಾಯನ ನಡೆಸಿಕೊಟ್ಟರು.

ಮೈಸೂರಲ್ಲಿ ವಿದ್ಯಾರ್ಥಿ ಆತ್ಮಹತ್ಯೆ

ಮೈಸೂರು,ಡಿ.5(ಆರ್‌ಕೆ)–ಪ್ಲಾಸ್ಟಿಕ್ ಕವರ್‌ನಿಂದ ಉಸಿರು ಕಟ್ಟಿಸಿಕೊಂಡು ವಿದ್ಯಾರ್ಥಿಯೋರ್ವ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮೈಸೂರಿನ ಕಾಲೇಜೊಂದರ ಹಾಸ್ಟೆಲ್ ಕೊಠಡಿಯಲ್ಲಿ ಇಂದು ಸಂಭವಿಸಿದೆ. ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಕಾಲೇಜಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿ ಅಕ್ಷಜ್(17) ಆತ್ಮಹತ್ಯೆಗೆ ಶರಣಾದವರು. ಮೂಲತಃ ಹೈದರಾಬಾದ್‌ನವರಾದ ಆತ, ಖಿನ್ನತೆಯಿಂದ ಬಳಲುತ್ತಿದ್ದು, ಪ್ಲಾಸ್ಟಿಕ್ ಕವರ್‌ನಿಂದ ಮುಖ ಸುತ್ತಿ, ಉಸಿರುಕಟ್ಟಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸರ್ಕಾರದ ವಿವಿಧ ಯೋಜನೆ ಹಣ ಸಾಲಕ್ಕೆ

ಹೊಂದಾಣಿಕೆ ಮಾಡಿರುವ ಕ್ರಮ ಖಂಡಿಸಿ ಪ್ರತಿಭಟನೆ



ಮಂಡ್ಯ, ಡಿ.5– ಸರ್ಕಾರದ ವಿವಿಧ ಯೋಜನೆಯ ಫಲಾನುಭವಿಗಳ ಬ್ಯಾಂಕ್ ಖಾತೆಗಳಲ್ಲಿದ್ದ ಹಣವನ್ನು ಬಾಕಿ ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವ ಬ್ಯಾಂಕ್ ಆಫ್ ಬರೋಡಾ ಕ್ರಮ ಖಂಡಿಸಿ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಆಶ್ರಯದಲ್ಲಿ ಮಂಗಳವಾರ ನಗರದ ಡಾ. ಬಿ.ಆರ್.ಅಂಬೇಡ್ಕರ್ ರಸ್ತೆಯಲ್ಲಿರುವ ಬ್ಯಾಂಕ್ ಆಫ್ ಬರೋಡಾ ಪ್ರಾದೇಶಿಕ ಕಚೇರಿ ಎದುರು ರೈತರು ಪ್ರತಿಭಟನೆ ನಡೆಸಿ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬ್ಯಾಂಕ್ ಆಫ್ ಬರೋಡಾ ಶಾಖೆಗಳಲ್ಲಿ ರೈತರು ಪಡೆದಿರುವ ಸಾಲಗಳಿಗೆ ಹೊಂದಾಣಿಕೆ ಮಾಡಿಕೊಂಡಿರುವ ಕಿಸಾನ್ ಸಮ್ಮಾನ್, ಹಾಲಿನ ಪ್ರೋತ್ಸಾಹ ಧನ, ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ನರೇಗಾ ಕೂಲಿ, ಅನ್ನಭಾಗ್ಯ, ಸಾಮಾಜಿಕ ಭದ್ರತಾ ಯೋಜನೆ ಮೊಬಲಗನ್ನು ಬ್ಯಾಂಕ್ ಅಧಿಕಾರಿಗಳು ಬಾಕಿ ಇರುವ ಸಾಲಗಳಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಈ ಹಣವನ್ನು ಫಲಾನುಭವಿಗಳ ಖಾತೆಗೆ ಮರು ಜಮಾ ಮಾಡಬೇಕು. ಫಲಾನುಭವಿಗಳ ಒಪ್ಪಿಗೆ ಇಲ್ಲದೆ ಸಾಲಗಳಿಗೆ ಹೊಂದಾಣಿಕೆ ಮಾಡಿಕೊಳ್ಳಬಾರದು ಎಂದು ಎಚ್ಚರಿಸಿದರು.

ಅಡಮಾನ ಇರಿಸಿರುವ ಚಿನ್ನಾಭರಣ ಬಿಡಿಸಿಕೊಳ್ಳಲು ಸಾಲಗಾರರು ಹೋದಾಗ ಹಣ ಪಾವತಿಸಿದ ನಂತರ ಸಾಲ ಬಾಕಿ ಇರುವುದರಿಂದ ಸಾಲ ಮರುಪಾವತಿಸಿದ ಮೇಲೆ ಆಭರಣ ಕೊಡುವುದಾಗಿ ಹೇಳುವ ಅಧಿಕಾರಿಗಳ ಧೋರಣೆ ಖಂಡನೀಯ. ಒಂದು ಸಾಲಕ್ಕೂ, ಮತ್ತೊಂದು ಸಾಲಕ್ಕೂ ಜೋಡಣೆ ಮಾಡದೆ ಸಾಲ ಮರುಪಾವತಿಸಿದವರಿಗೆ ಆಭರಣಗಳನ್ನು ನೀಡುವಂತೆ ಸಂಬಂಧಪಟ್ಟ ಬ್ಯಾಂಕ್ ವ್ಯವಸ್ಥಾಪಕರಿಗೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯ ಎಲ್ಲಾ ತಾಲೂಕು ಬರಪೀಡಿತ ಎಂದು ಸರ್ಕಾರ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ರೈತರು ಪಡೆದಿರುವ ಯಾವುದೇ ತರಹದ ಸಾಲಗಳಿಗೆ ಬಡ್ಡಿ ಹಾಕುವುದನ್ನು ನಿಲ್ಲಿಸಬೇಕು. ಮುಂದಿನ 2 ವರ್ಷಗಳವರೆಗೆ ಸಾಲ ವಸೂಲಿ ಅಡಮಾನ ಚಿನ್ನ ಬಿಡಿಸಿಕೊಳ್ಳುವಂತೆ ಹಾಗೂ ಹರಾಜು ಮಾಡುತ್ತೇವೆ ಎಂದು ನೋಟೀಸ್ ನೀಡಬಾರದು. ಬಲವಂತದ ಸಾಲ ವಸೂಲಿ, ಹರಾಜು ಪ್ರಕ್ರಿಯೆ ಬ್ಯಾಂಕ್ ಶಾಖೆಗಳಲ್ಲಿ ಕಂಡುಬಂದರೆ ಉಗ್ರ ಹೋರಾಟ ನಡೆಸಲಾಗುವುದು ಎಂದರು.

ರೈತ ಮುಖಂಡರಾದ ಎ.ಎಲ್. ಕೆಂಪೂಗೌಡ, ಬಿ.ಎಸ್.ಲಿಂಗಪ್ಪಾಜಿ, ಎಸ್.ಕೆ. ರವಿಕುಮಾರ್ ಸೇರಿದಂತೆ ನೂರಾರು ಮಂದಿ ರೈತರು ಭಾಗವಹಿಸಿದ್ದರು.

ಹೆಣ್ಣು ಭ್ರೂಣ ಹತ್ಯೆ ಖಂಡಿಸಿ ಬೃಹತ್ ಪ್ರತಿಭಟನೆ



ಮಂಡ್ಯ, ಡಿ.5– ಹೆಣ್ಣು ಭ್ರೂಣ ಹತ್ಯೆ ಖಂಡಿಸಿ ಮಹಿಳಾ ಮುನ್ನಡೆ, ವಿಮೋಚನಾ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಡಾ.ಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಜಿಲ್ಲೆಯ ಹಾಡ್ಯ ಗ್ರಾಮದಲ್ಲಿ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಮಾಡುವ ಕರಾಳ ದಂಧೆ ನಡೆದಿದ್ದು, ಆದರೂ ಸಹ ಎಚ್ಚೆತ್ತುಕೊಳ್ಳದ ಆರೋಗ್ಯ ಇಲಾಖೆ ಬೇಜವಾಬ್ದಾರಿ ತೋರಿದೆ. ದಂಧೆಕೋರರು ಸಾಕ್ಷಿ ನಾಶ ಮಾಡಲು ಅನುಕೂಲವಾಗುವಂತೆ ಅಧಿಕಾರಿಗಳು ವಿಳಂಬವಾಗಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದು, ಇದನ್ನು ನೋಡಿದರೆ ಪ್ರಕರಣ ಮುಚ್ಚಿ ಹಾಕುವ ಹುನ್ನಾರ ನಡೆದಿದೆ. ಸಿಐಡಿ ತನಿಖೆಗೆ ಪ್ರಕರಣ ಒಪ್ಪಿಸಿದ್ದರೂ ಅಪರಾಧಿಗಳು ಜಾಮೀನಿನ ಮೇಲೆ ಹೊರ ಬರುತ್ತಿರುವುದು ಸರಿಯಲ್ಲ. ಇದರಿಂದ ಸಾಕ್ಷಿ ನಾಶ ಮಾಡಲು ತಾವೇ ಅವಕಾಶ ಒದಗಿಸಿದಂತೆ ಆಗುತ್ತದೆ. ಇದಕ್ಕೆ ಎಡೆಮಾಡಿಕೊಡದೆ ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹೆಣ್ಣು ಭ್ರೂಣ ಹತ್ಯೆ ಜಾಲ ರಾಜ್ಯದೆಲ್ಲೆಡೆ ವಿಸ್ತರಿಸಿದ್ದು, ಉನ್ನತ ಮಟ್ಟದ ತನಿಖೆ ನಡೆಸಿ ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಪತ್ತೆ ನಿಷೇಧ ಕಾಯ್ದೆ ಅನ್ವಯ ಕಾನೂನು ಕ್ರಮ ವಹಿಸಬೇಕು. ಕಾಯ್ದೆ ಉಲ್ಲಂಘಿಸುವ ವೈದ್ಯರು ಮತ್ತು ಸ್ಕ್ಯಾನಿಂಗ್ ಸೆಂಟರ್‌ಗಳ ಪರವಾನಗಿ ಶಾಶ್ವತವಾಗಿ ರದ್ದು ಮಾಡಬೇಕು. ಜಿಲ್ಲೆಯ ಪಿಸಿ ಮತ್ತು ಪಿಎನ್‌ಡಿಟಿ ಖಾತೆಯಲ್ಲಿ ಹಣ ಇದ್ದರೂ ಸಹ ಸಮುದಾಯ, ವೈದ್ಯರು, ಹೆಣ್ಣು ಮಕ್ಕಳ ಮೌಲ್ಯ ಮತ್ತು ಮಹತ್ವ ಹಾಗೂ ಕಾನೂನು ಸಮರ್ಪಕ ಅನುಷ್ಠಾನ ಬಗ್ಗೆ ಜಾಗೃತಿ ಆಂದೋಲನ ಆಯೋಜಿಸಿಲ್ಲ. ಇಂತಹ ಕಾರ್ಯಕ್ರಮ ತುರ್ತಾಗಿ ಆಯೋಜಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಗರ್ಭ ಪೂರ್ವ ಮತ್ತು ಪ್ರಸವಪೂರ್ವ ಭ್ರೂಣ ಪತ್ತೆ ನಿಷೇಧ ಕಾಯ್ದೆ ಪ್ರಕಾರ ಶಿಕ್ಷೆ ಮತ್ತು ಹೆಣ್ಣು ಮಕ್ಕಳ ಮೌಲ್ಯ ಮತ್ತು ಮಹತ್ವ ಕುರಿತ ಜಾಗೃತಿ ಮೂಡಿಸುವ ಫಲಕಗಳನ್ನು ಅಳವಡಿಸಬೇಕು. ಹಾಡ್ಯ ಪ್ರಕರಣದಲ್ಲಿ ಜಿಲ್ಲೆಯ ಅಧಿಕಾರಿಗಳ ನಿರ್ಲಕ್ಷ್ಯ ಕಂಡುಬಂದಿದ್ದು, ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತುಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಪತ್ತೆ ನಿಷೇಧ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿ ವಿಚಾರಣೆ ವಿಳಂಬವಾಗಿದ್ದು, ತುರ್ತು ವಿಚಾರಣೆಗೆ ಕ್ರಮವಹಿಸಿ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಜಿಲ್ಲಾ ಮಟ್ಟದ 3 ಹಂತದ ಸಮಿತಿ ಸಭೆಗಳನ್ನು ಕಡ್ಡಾಯವಾಗಿ ನಡೆಸಬೇಕು. ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅನಿರೀಕ್ಷಿತ ಭೇಟಿ ನೀಡಿ ದಾಖಲೆ ಪರಿಶೀಲಿಸಿ ನ್ಯೂನತೆ ಕಂಡು ಬಂದರೆ ದೂರು ದಾಖಲಿಸಬೇಕು. 900ಕ್ಕೂ ಹೆಚ್ಚು ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವ ಕುಟುಂಬ, ಸಂಬಂಧಿಕರು ಹಾಗೂ ಏಜೆಂಟ್‌ಗಳನ್ನು ಪತ್ತೆ ಹಚ್ಚಿ ಕ್ರಮ ವಹಿಸಬೇಕು. ಜಿಲ್ಲಾ ಮಟ್ಟದಲ್ಲಿ ಸ್ವಯಂಸೇವಾ ಸಂಸ್ಥೆ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರ ಸಭೆ ಕರೆದು ಸಲಹೆ ಪಡೆಯಬೇಕು. ವಿಳಂಬ ನೋಂದಣಿ ಮಾಡಿಸುವ ಗರ್ಭಿಣಿಯರ ಮೇಲೆ ನಿಗಾ ಇರಿಸಿ ಅರಿವು ಮೂಡಿಸಬೇಕು. ಜಿಲ್ಲಾ ಮಟ್ಟದಲ್ಲಿ ಹೆಣ್ಣು ಭ್ರೂಣ ಹತ್ಯೆ ಕುರಿತು ದೂರು ನೀಡಲು ಜಿಲ್ಲಾ ಸಹಾಯವಾಣಿ ಕೇಂದ್ರ ತೆರಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಹಿಳಾ ಮುನ್ನಡೆಯ ಪೂರ್ಣಿಮಾ, ವಿಮೋಚನಾ ಮಹಿಳಾ ಸಂಘಟನೆಯ ಜನಾರ್ಧನ್, ಸಿಐಟಿಯುನ ಸಿ.ಕುಮಾರಿ, ಡಿ.ಕೆ.ಲತಾ, ರಾಣಿ, ಸುಶೀಲ, ಸುನಂದ, ಮುಖಂಡರಾದ ನಾಗರತ್ನಮ್ಮ, ಲಕ್ಷ್ಮಿ, ಮುತ್ತಮ್ಮ, ನಾಗಮ್ಮ, ಮಹದೇವಮ್ಮ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಬಡಗಲಪುರ ನಾಗೇಂದ್ರ ಮೇಲೆ ಹಲ್ಲೆ: ಠಾಣೆಗೆ ದೂರು



ಮಂಡ್ಯ, ಡಿ.5– ತಮ್ಮ ಮೇಲೆ ಪಾಂಡವಪುರ ರೈತ ಮುಖಂಡ ಕೃಷ್ಣೇಗೌಡ ಎಂಬುವರು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ನಗರದ ಪಶ್ಚಿಮ ಠಾಣೆಗೆ ದೂರು ನೀಡಿದ್ದಾರೆ.

ಕಾರ್ಯನಿಮಿತ್ತ ಮಂಡ್ಯಕ್ಕೆ ಆಗಮಿಸಿದ್ದ ನಾನು ಊಟ ಮುಗಿಸಿ ಡಿಸಿ ಕಚೇರಿ ರಸ್ತೆ ಬಳಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಕಾರಿನಲ್ಲಿ ಬಂದು ಅಡ್ಡಗಟ್ಟಿದ ಪಾಂಡವಪುರದ ಕೃಷ್ಣೇಗೌಡ ಮತ್ತು ಆತನ ಸಹಚರರು ನನ್ನ ವಿರುದ್ಧ ಎಸ್ಪಿಗೆ ದೂರು ನೀಡುತ್ತೀಯಾ ಎಂದು ಪ್ರಶ್ನಿಸಿ, ನಮ್ಮ ಜಿಲ್ಲೆಗೇಕೆ ಬಂದಿದ್ದೀಯಾ ಎಂದು ನನ್ನ ತಲೆ, ಬೆನ್ನಿಗೆ ಹೊಡೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಕೃಷ್ಣೇಗೌಡ ಹಾಗೂ ಸಹಚರರ ವಿರುದ್ಧ ದೂರು ದಾಖಲಾಗಿದೆ.

ಚಿರತೆ ದಾಳಿ: ರೈತನಿಗೆ ಗಂಭೀರ ಗಾಯ



ಕೆ.ಆರ್.ಪೇಟೆ, ಡಿ.5– ಚಿರತೆ ದಾಳಿ ನಡೆಸಿದ ಪರಿಣಾಮ ರೈತ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ದೊಡ್ಡಗಾಡಿಗನಹಳ್ಳಿ ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದಿದೆ.

ದೊಡ್ಡಗಾಡಿಗನಹಳ್ಳಿ ಗ್ರಾಮದ ಗೋವಿಂದೇಗೌಡರ ಮಗ ವೆಂಕಟೇಶ್ ಗಾಯಗೊಂಡವರು. ಈತ ತಮ್ಮ ಜಮೀನಿನ ಬಳಿಯ ಅರಣ್ಯ ಪ್ರದೇಶದ ಹತ್ತಿರ ದನಗಳು ಹಾಗೂ ಕುರಿಗಳನ್ನು ಮೇಯಿಸುತ್ತಿದ್ದ ವೇಳೆ ಚಿರತೆ ಏಕಾಏಕಿ ದಾಳಿ ನಡೆಸಿದೆ. ಪರಿಣಾಮ ತಲೆ ಹಾಗೂ ಮುಖಕ್ಕೆ ಗಂಭೀರ ಗಾಯವಾಗಿದ್ದು, ತಕ್ಷಣ ಅವರನ್ನು ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಘಟನಾ ಸ್ಥಳ ಹಾಗೂ ಆಸ್ಪತ್ರೆಗೆ ಭೇಟಿ ನೀಡಿದ ತಾಲೂಕು ಅರಣ್ಯ ಸಂರಕ್ಷಣಾಧಿಕಾರಿ ಡಾ.ಅನಿತಾ ಅವರು ರೈತ ವೆಂಕಟೇಶ್‌ಗೆ ಧೈರ್ಯ ಹೇಳಿದರು. ಅಲ್ಲದೇ ಇಲಾಖೆ ವತಿಯಿಂದ ಚಿಕಿತ್ಸಾ ವೆಚ್ಚ, ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಚಿರತೆ ಸೆರೆಗೆ ಆಗ್ರಹ: ತಾಲೂಕಿನಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಬೋನಿಟ್ಟು ಚಿರತೆ ಸೆರೆ ಹಿಡಿದು ರೈತರ ಆತಂಕ ದೂರ ಮಾಡಬೇಕು ಎಂದು ತಾಲೂಕು ಕರ್ನಾಟಕ ರಕ್ಷಣಾ ಸೇನೆ ಅಧ್ಯಕ್ಷ ಪ್ರಶಾಂತ್ ಅರಣ್ಯಾಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ವಕೀಲನ ಮೇಲೆ ಹಲ್ಲೆ ಖಂಡಿಸಿ

ಕೆ.ಆರ್.ಪೇಟೆ, ಮದ್ದೂರಿನಲ್ಲಿ ವಕೀಲರಿಂದ ಪ್ರತಿಭಟನೆ





ಕೆ.ಆರ್.ಪೇಟೆ/ಮದ್ದೂರು, ಡಿ.5– ಚಿಕ್ಕಮಗಳೂರಿನಲ್ಲಿ ವಕೀಲರೊಬ್ಬರ ಮೇಲೆ ಪೊಲೀಸರು ಹಲ್ಲೆ ನಡೆಸಿರುವ ಕ್ರಮ ಖಂಡಿಸಿ ಕೆ.ಆರ್.ಪೇಟೆಯಲ್ಲಿ ಹಾಗೂ ಮದ್ದೂರಿನಲ್ಲಿ ವಕೀಲರು ಮಂಗಳವಾರ ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆ: ಚಿಕ್ಕಮಗಳೂರಿನಲ್ಲಿ ವಕೀಲನ ಮೇಲೆ ಹಲ್ಲೆ ನಡೆಸಿರುವ ಪೊಲೀಸರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ಪಟ್ಟಣದ ವಕೀಲರ ಸಂಘದ ಸದಸ್ಯರು ಪಟ್ಟಣದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು. ಬಳಿಕ ಮೆರವಣಿಗೆಯಲ್ಲಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ವಕೀಲರ ಸಂಘದ ಅಧ್ಯಕ್ಷ ಎನ್.ಆರ್. ರವಿಶಂಕರ್ ಮಾತನಾಡಿ, ಚಿಕ್ಕಮಗಳೂರು ಪೊಲೀಸರು, ವಕೀಲರು ಹಾಗೂ ವಕೀಲರ ಸಂಘದ ಸದಸ್ಯರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಕೂಡಲೇ ರದ್ದುಪಡಿಸಿ, ಪೊಲೀಸರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಬಿ.ಸಿ.ದಿನೇಶ್, ಕಾರ್ಯದರ್ಶಿ ಆರ್.ಕೆ.ರಾಜೇಗೌಡ, ಜಂಟಿ ಕಾರ್ಯದರ್ಶಿ ಸಿ.ನಿರಂಜನ್, ಖಜಾಂಚಿ ಜಗದೀಶ್, ನಿರ್ದೇಶಕರಾದ ಬಿ.ಎಸ್.ಪ್ರಭಾಕರ್, ಸುಂದರೇಶ್, ಎಂ.ರಾಣಿ, ಸುಜಾತ, ಮಾಜಿ ಅಧ್ಯಕ್ಷರಾದ ಜಿ.ಆರ್.ಅನಂತರಾಮಯ್ಯ, ಬಿ.ಗಣೇಶ್, ಹೆಚ್.ರವಿ, ಕೆ.ಎನ್.ನಾಗರಾಜು, ಎಂ.ಆರ್.ಪ್ರಸನ್ನಕುಮಾರ್, ವಕೀಲರಾದ ಕೆ.ಆರ್.ಮಹೇಶ್, ಡಿ.ಆರ್.ಮೋಹನ್, ಎಸ್.ಸ್ವಾಮಿ, ಸಿ.ಎನ್.ಮೋಹನ್, ಎಂ.ವಿ.ಪ್ರಭಾಕರ್, ಶಂಕರೇಗೌಡ, ಬಿ.ಕೆ.ಯೋಗೇಶ್, ಪ್ರವೀಣ್, ಶಿವಕುಮಾರ್, ಡಿ.ನರಸಿಂಹ, ಡಿ. ಯೋಗೇಶ್, ಸುಪ್ರಿತ, ಮನುರಾಧ, ಅಮೃತ ಸೇರಿದಂತೆ ಇನ್ನಿತರರಿದ್ದರು.

ಮದ್ದೂರು: ಪಟ್ಟಣದ ನ್ಯಾಯಾಲಯದಿಂದ ತಾಲೂಕು ಕಚೇರಿವರೆಗೆ ಮೌನ ಪ್ರತಿಭಟನಾ ಮೆರವಣಿಗೆ ನಡೆಸಿ ತಹಸೀಲ್ದಾರ್ ಸೋಮಶೇಖರ್ ಅವರಿಗೆ ಮನವಿ ಸಲ್ಲಿಸಿದರು.

ವಕೀಲರ ಸಂಘದ ಅಧ್ಯಕ್ಷ ಶಿವಣ್ಣ ಮಾತನಾಡಿ, ಚಿಕ್ಕಮಗಳೂರಿನ ವಕೀಲ ಪ್ರೀತಮ್ ಅವರ ಮೇಲೆ ಕ್ಷುಲ್ಲಕ ಕಾರಣಕ್ಕೆ ಅಲ್ಲಿನ ಪೊಲೀಸರು ಬಂಧಿಸಿ ಹಲ್ಲೆ ನಡೆಸಿದ್ದಾರೆ. ಇದು ಪೊಲೀಸರ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ. ಕೂಡಲೇ ಹಲ್ಲೆ ನಡೆಸಿದ ಪೊಲೀಸರನ್ನು ಕರ್ತವ್ಯದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಜೆ.ಸುಮಂತ್, ವಕೀಲರಾದ ಪ್ರಿಯಾಂಕ ಅಪ್ಪುಗೌಡ, ಮಧು, ಯದುನಂದನ್, ಸುನೀಲ್ ಇತರರಿದ್ದರು.

ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಪರಿಶೀಲಿಸಿ ವರದಿ ನೀಡಿ

ಡಿಹೆಚ್‌ಓಗೆ ಜಿಲ್ಲಾಧಿಕಾರಿ ಕುಮಾರ್ ಸೂಚನೆ



ಮಂಡ್ಯ, ಡಿ.5– ಜಿಲ್ಲೆಯಲ್ಲಿರುವ 55 ಸ್ಕ್ಯಾನಿಂಗ್ ಸೆಂಟರ್, ಲ್ಯಾಬ್, ಕ್ಲಿನಿಕ್ ಹಾಗೂ ಆಸ್ಪತ್ರೆಗಳಿಗೆ ಭೇಟಿ ನೀಡಿ, ಪರಿಶೀಲಿಸಿ ಸರ್ಕಾರ ನಿಗದಿಪಡಿಸಿರುವ ಕಾಯ್ದೆ ಹಾಗೂ ಕಾನೂನುಗಳ ಪ್ರಕಾರ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ 10 ದಿನದೊಳಗಾಗಿ ವರದಿ ನೀಡುವಂತೆ ಡಿಎಚ್‌ಓ ಡಾ.ಮೋಹನ್ ಅವರಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹೆಣ್ಣು ಭ್ರೂಣ ಹತ್ಯೆ ಹಾಗೂ ಲಿಂಗ ಪತ್ತೆ ತಡೆಗಟ್ಟಲು ರಚಿಸಲಾಗಿರುವ ಜಾಗೃತ ದಳದೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಮಾತನಾಡಿದ ಅವರು, ಮಂಡ್ಯ ತಾಲೂಕಿನ ಹಾಡ್ಯ ಗ್ರಾಮದಲ್ಲಿ ನಡೆದ ಹೆಣ್ಣು ಭ್ರೂಣ ಪತ್ತೆ ಪ್ರಕರಣ ಕುರಿತಂತೆ ಸಂಬಂಧಿಸಿದ ವ್ಯಾಪ್ತಿಯ ತಾಲೂಕು ಆರೋಗ್ಯಾಧಿಕಾರಿ, ಮೆಡಿಕಲ್ ಆಫೀಸರ್, ಆಶಾ ಕಾರ್ಯಕರ್ತೆಯರಿಂದ ವರದಿ ಪಡೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಅಧಿಕೃತ ರೆಡಿಯೋಲಾಜಿಸ್ಟ್ ಮಾತ್ರ ಕಾರ್ಯ ನಿರ್ವಹಿಸಬೇಕು. ಅವರನ್ನು ಹೊರತುಪಡಿಸಿ ಬೇರೆಯವರು ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಪರವಾನಗಿ ರದ್ದುಪಡಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಿ. ನಕಲಿ ಕ್ಲಿನಿಕ್ ಹಾಗೂ ವೈದ್ಯರನ್ನು ಪತ್ತೆ ಹಚ್ಚಿ. ಕೆಪಿಎಂಇಯಲ್ಲಿ ಪರವಾನಗಿ ಪಡೆದ ಪದ್ಧತಿಯಲ್ಲೇ ಕ್ಲಿನಿಕ್‌ಗಳು ಸೇವೆ ನೀಡಬೇಕು. ನಕಲಿ ಕ್ಲಿನಿಕ್ ಮತ್ತು ನಕಲಿ ವೈದ್ಯರು ಹೆಣ್ಣು ಭ್ರೂಣ ಹತ್ಯೆ ಹಾಗೂ ಮುಂತಾದ ಅಕ್ರಮಗಳಿಗೆ ದಾರಿ ಮಾಡಿ ಕೊಡುತ್ತಾರೆ. ಹೀಗಾಗಿ ಜಾಗೃತದಳ ತಮ್ಮ ವ್ಯಾಪ್ತಿಯಲ್ಲಿ ತೀವ್ರ ನಿಗಾ ವಹಿಸಿ ಪರಿಶೀಲಿಸಿ ವರದಿ ನೀಡಿ. ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳದಿದ್ದಲ್ಲಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಜಿಲ್ಲೆಯಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲೇ ವಿವಾಹವಾಗಿ ಗರ್ಭಿಣಿಯಾಗಿರುವ ಪ್ರಕರಣಗಳು ಬಾಲ್ಯವಿವಾಹವಾಗುತ್ತದೆ. ಅವುಗಳನ್ನು ಪತ್ತೆ ಹಚ್ಚಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿ 15 ದಿನದೊಳಗಾಗಿ ವರದಿ ನೀಡಬೇಕು ಎಂದರು.

ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್ ಮಾತನಾಡಿ, ಪಿಸಿ, ಪಿಡಿಎನ್‌ಟಿ ಕಾಯ್ದೆಯಲ್ಲಿ ಸ್ಕ್ಯಾನಿಂಗ್ ಸೆಂಟರ್ ಯಾವ ರೀತಿ ಇರಬೇಕು. ಯಾವ ದಾಖಲೆಗಳು ಇರಬೇಕು. ಕಾಯ್ದೆ ಉಲ್ಲಂಘಿಸಿದ್ದಲ್ಲಿ 3 ವರ್ಷ ಶಿಕ್ಷೆ ಹಾಗೂ ದಂಡ ಇರುವ ಬಗ್ಗೆ ಜಾಗೃತ ದಳದ ಸದಸ್ಯರಿಗೆ ವಿವರಿಸಿದರು.

ಕಳೆದ 3 ವರ್ಷಗಳಲ್ಲಿ ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳ ವಿವರ, 10ನೇ ತರಗತಿ ನಂತರ ಅವರ ಮುಂದಿನ ಶಿಕ್ಷಣದ ದಾಖಲಾತಿ ಅಥವಾ ಶಾಲೆಯಿಂದ ಹೊರಗೆ ಉಳಿದಿದ್ದರೆ ಏನು ಮಾಡುತ್ತಿದ್ದಾರೆ ಎಂದು ಶಿಕ್ಷಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವರದಿ ನೀಡಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಎಸಿ ನಂದೀಶ್, ಶಿಮೂರ್ತಿ, ಎಎಸ್ಪಿ ತಿಮ್ಮಯ್ಯ ಸೇರಿದಂತೆ ಎಲ್ಲಾ ತಾಲೂಕು ತಹಸೀಲ್ದಾರ್ ಉಪಸ್ಥಿತರಿದ್ದರು.

ಡಿ.8, ಉದ್ಯೋಗ ಮೇಳ

ಮಂಡ್ಯ, ಡಿ.5– ಲೋಹಿಯಾ ವಿಚಾರ ವೇದಿಕೆ, ಬೆಂಗಳೂರು ಇವರ ನೇತೃತ್ವದಲ್ಲಿ ಮಳವಳ್ಳಿಯ ಶಾಂತಿ ಕಾಲೇಜಿನಲ್ಲಿ ಡಿ.8ರಂದು ಬೆಳಗ್ಗೆ 9 ಗಂಟೆಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ. ಆಸಕ್ತರು ದೂ: 9632674657, 7349143993, 7975356112 ಅಥವಾ http://tinyur.com/ips-jobfair ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅನುಮತಿ ಪಡೆಯದ ಸ್ಕ್ಯಾನಿಂಗ್ ಸೆಂಟರ್‌ಗೆ ಬೀಗ

ಕೆ.ಆರ್.ಪೇಟೆ, ಡಿ.5– ತಾಲೂಕಿನಲ್ಲಿ ಅಕ್ರಮ ಸ್ಕ್ಯಾನಿಂಗ್ ಸೆಂಟರ್‌ಗಳು ನಡೆಯುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಬೆಟ್ಟಸ್ವಾಮಿ ಮತ್ತು ಪಾಂಡವಪುರ ಎಸಿ ನಂದೀಶ್ ನೇತೃತ್ವದ ತಂಡ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿತು.

ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಪರಿಶೀಲಿಸಿದ ವೇಳೆ ಪಟ್ಟಣದ ಹೊಸಹೊಳಲು ರಸ್ತೆ ಕೆಇಬಿ ಮುಂಭಾಗದಲ್ಲಿರುವ ನಾವಿ ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ನುರಿತ ವೈದ್ಯರಿದ್ದರೂ, ಸರ್ಕಾರಿ ನಿಯಮಾನುಸಾರ ಅನುಮತಿ ಪಡೆಯದೇ ಮತ್ತು ಕೆಲವು ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸದಿರುವುದರಿಂದ ಸ್ಕ್ಯಾನಿಂಗ್ ಸೆಂಟರ್‌ಗೆ ಅಧಿಕಾರಿಗಳು ಬೀಗ ಹಾಕಿ ಸೀಜ್ ಮಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಬೆಟ್ಟಸ್ವಾಮಿ ಮಾತನಾಡಿ, ಸ್ಕ್ಯಾನಿಂಗ್ ಸೆಂಟರ್ ಮಾಲೀಕರು ಸೂಕ್ತ ದಾಖಲಾತಿ ಒದಗಿಸಿ ಸರ್ಕಾರದ ಅನುಮತಿ ಪಡೆಯುವವರೆಗೆ ಸ್ಕ್ಯಾನಿಂಗ್ ಸೆಂಟರ್ ಪ್ರಾರಂಭಿಸಲು ಅನುಮತಿ ನೀಡುವುದಿಲ್ಲ ಎಂದರು. ಪಟ್ಟಣದ ನಾವಿ ಸ್ಕ್ಯಾನಿಂಗ್ ಸೆಂಟರ್ ಸರ್ಕಾರದ ನಿಯಮಾನುಸಾರ ಅನುಮತಿ ಪಡೆಯದಿರುವುದರಿಂದ ಸ್ಕ್ಯಾನಿಂಗ್ ಸೆಂಟರ್ ಸೀಜ್ ಮಾಡಲಾಗಿದೆ ಎಂದು ಉಪವಿಭಾಗಾಧಿಕಾರಿ ನಂದೀಶ್ ತಿಳಿಸಿದರು. ಈ ವೇಳೆ ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ.ಅಜಿತ್, ತಹಸೀಲ್ದಾರ್ ಡಾ.ನಿಸರ್ಗಪ್ರಿಯ, ಆಹಾರ ಸಂರಕ್ಷಣಾಧಿಕಾರಿ ಬಸವರಾಜ್, ಪಟ್ಟಣದ ಗ್ರಾಮ ಲೆಕ್ಕಾಧಿಕಾರಿ ಜಗದೀಶ್, ಆರೋಗ್ಯ ಶಿಕ್ಷಣಾಧಿಕಾರಿ ಶಿವಮ್ಮ, ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಅರುಣ್ ಕುಮಾರ್ ಸೇರಿದಂತೆ ಇತರರಿದ್ದರು.



ಪಂಚರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 3 ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಈ ವೇಳೆ ಮುಖಂಡ ಪೀಹಳ್ಳಿ ರಮೇಶ್, ಮಹದೇವು, ಪುಟ್ಟರಾಜು, ಉಮೇಶ್ ಕುಮಾರ್, ಹೇಮಂತ್ ಕುಮಾರ್, ರಾಮಕೃಷ್ಣ, ಮಹದೇವಸ್ವಾಮಿ, ಮಂಜುನಾಥ್, ಸಂತೋಷ್, ಭೈರಪ್ಪ, ಪ್ರಶಾಂತ್, ಜಯಲಕ್ಷ್ಮಮ್ಮ ಸೇರಿದಂತೆ ಇತರರಿದ್ದರು.

ಉಚಿತ, ರಿಯಾಯಿತಿ ದರದಲ್ಲಿ ವಿದ್ಯುತ್

ಮಂಡ್ಯ, ಡಿ.5– ವಿದ್ಯುತ್ ಮಗ್ಗ ಪೂರ್ವ ಮತ್ತು ವಿದ್ಯುತ್ ಮಗ್ಗ ಘಟಕಗಳಿಗೆ ಉಚಿತ ಹಾಗೂ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಅರ್ಜಿ ಆಹ್ವಾನಿಸಿದೆ. ಡಿ.15 ರೊಳಗೆ ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹೊಸದಾಗಿ ಅರ್ಜಿ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ವಿವರಗಳಿಗೆ ಕೈಮಗ್ಗ ಮತ್ತು ಜವಳಿ ಇಲಾಖೆ ಸಂಪರ್ಕಿಸಲು(08232–222366) ಪ್ರಕಟಣೆ ತಿಳಿಸಿದೆ.



ಡಾ.ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನದ ಪ್ರಯುಕ್ತ ಮೈಸೂರು ತಾಲೂಕಿನ ಜಯಪುರ ಹೋಬಳಿಯ ಧನಗಹಳ್ಳಿ ಗ್ರಾಮಸ್ಥರು ಮಹಾರಾಷ್ಟ್ರದ ದಾದರ್‌ನಲ್ಲಿರುವ ಅಂಬೇಡ್ಕರ್ ಚೈತ್ಯಭೂಮಿಗೆ ನಮನ ಸಲ್ಲಿಸಲು ಮಂಗಳವಾರ ಸಂಜೆ ಚೈತ್ರಯಾತ್ರೆ ತೆರಳಿದರು. ಇದೇ ವೇಳೆ ಮೇಣದ ಬತ್ತಿ ಹಚ್ಚಿ ಮೌನ ಮೆರವಣಿಗೆ ನಡೆಸಿದರು.

ಸರಗೂರಲ್ಲಿ ಎರಡು ಖಾಸಗಿ ಕ್ಲಿನಿಕ್‌ಗಳಿಗೆ ಬೀಗ

ತಾಲೂಕು ಆರೋಗ್ಯಾಧಿಕಾರಿಗಳಿಂದ ಆಸ್ಪತ್ರೆಗಳ ಮೇಲೆ ದಾಳಿ



ಸರಗೂರು, ಡಿ.5– ಕೆಪಿಎಂಇಎ ಕಾಯ್ದೆಯಡಿ ನೋಂದಣಿಯಾಗದೆ ಇರುವ ಮತ್ತು ಪ್ರಮಾಣಪತ್ರ ನವೀಕರಣಗೊಳಿಸಿದ ಎರಡು ಖಾಸಗಿ ಕ್ಲಿನಿಕ್‌ಗಳಿಗೆ ತಾಲೂಕು ಆರೋಗ್ಯಾಧಿಕಾರಿಗಳು ಬೀಗಮುದ್ರೆ ಹಾಕಿಸಿದ್ದಾರೆ.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಟಿ.ರವಿಶಂಕರ್ ಖಾಸಗಿ ಕ್ಲಿನಿಕ್‌ಗಳು ಮತ್ತು ಪ್ರಯೋಗಾಲಯಗಳು ಕಡ್ಡಾಯವಾಗಿ KPMEA ಕಾಯ್ದೆಯಡಿ ನೋಂದಣಿ ಮಾಡಿಸಬೇಕು. ಇಲ್ಲವಾದಲ್ಲಿ ಕ್ರಿಮಿನಲ್ ಕೇಸ್ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು. ಪಟ್ಟಣದ ವಿವೇಕಾನಂದ ಆಸ್ಪತ್ರೆಗೆ ತಾಲೂಕು ಆರೋಗ್ಯಾಧಿಕಾರಿಗಳು ಮತ್ತು ತಂಡದವರು ಭೇಟಿ ನೀಡಿ KPMEA ಕಾಯ್ದೆ ಪ್ರಕಾರ PC-PNDT ದಾಖಲಾತಿಗಳನ್ನು ಪರಿಶೀಲನೆ ನಡೆಸಿದರು. ನಂತರ ಖಾಸಗಿ ಕ್ಲಿನಿಕ್‌ಗಳಾದ ಗುರು ಕ್ಲಿನಿಕ್ ಮತ್ತು ದರ್ಶನ್ ಕ್ಲಿನಿಕ್ ಮೇಲೆ ದಾಳಿ ನಡೆಸಿದರು. ಈ ವೇಳೆ ಗುರು ಕ್ಲಿನಿಕ್ KPMEA ನೊಂದಣಿ ಆಗದೆ ಇರುವ ಕಾರಣ ಹಾಗೂ ದರ್ಶನ್ ಕ್ಲಿನಿಕ್ ಪ್ರಮಾಣ ಪತ್ರ ನವೀಕರಣ ಮಾಡಿಸದ ಕಾರಣ ಈ ಎರಡು ಖಾಸಗಿ ಕ್ಲಿನಿಕ್‌ಗಳನ್ನು ಮುಚ್ಚಿಸಿದರು. ದುರ್ಗಾ ಕ್ಲಿನಿಕ್ ಮೇಲೆ ದಾಳಿ ನಡೆಸಿದ ತಾಲೂಕು ಆರೋಗ್ಯಾಧಿಕಾರಿ ಗಳು ಸ್ವಚ್ಛತೆ ಹಾಗೂ ಬಯೋ ಮೆಡಿಕಲ್ ವೇಸ್ಟ್ ನಿರ್ವಹಣೆ ಹಾಗೂ ಗಾಳಿ ಬೆಳಕು ಇಲ್ಲದ ಕಾರಣ ಡಾ.ಚೈತ್ರಶೆಟ್ಟಿ ಅವರಿಗೂ ನೋಟಿಸ್ ನೀಡಿದರು. ಸರಗೂರು ಮತ್ತು ಹೆಚ್.ಡಿ.ಕೋಟೆಯಲ್ಲಿ ತೆರೆದಿರುವ ಎಲ್ಲಾ ಖಾಸಗಿ ಕ್ಲಿನಿಕ್ ಗಳು, ಪ್ರಯೋಗಾಲಯಗಳು ಕಡ್ಡಾಯವಾಗಿ KPMEA ನೋಂದಣಿಯನ್ನು ಮಾಡಿಸಿ ತೆರೆಯಬೇಕು ತಪ್ಪಿದಲ್ಲಿ ಅಂತಹವರು ಯಾರಾದರೂ ತಾಲೂಕಿನಲ್ಲಿ ಕಂಡು ಬಂದರೆ ಕ್ರಿಮಿನಲ್ ಕೇಸ್ ಹಾಕಲಾಗುವುದು ಎಂದು ತಿಳಿಸಿದ್ದಾರೆ.



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಕಾಂಗ್ರೆಸ್ ಹಿಂದುಳಿದ ವರ್ಗಗಳ ಮುಖಂಡ ಎನ್.ಆರ್. ನಾಗೇಶ್‌ರವರನ್ನು ಇಂದಿರಾಗಾಂಧಿ ಬ್ಲಾಕ್ ಮುಖಂಡ ಮಂಚೇಗೌಡನ ಕೊಪ್ಪಲು ರವಿ, ಎಪಿಎನ್ ಪ್ರಾಪರ್ಟೀಸ್‌ನ ನಾಗೇಶ್, ಕೇಬಲ್ ನಾಗರಾಜು ಇನ್ನಿತರರು ಅಭಿನಂದಿಸಿದರು.

ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ

ಮಂಡ್ಯ, ಡಿ.5– ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ವತಿಯಿಂದ ಡಿ.8 ರಿಂದ 27 ರವರೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಡಿ.8 ಕೀಲಾರ ಸರ್ಕಾರಿ ಆರೋಗ್ಯ ಕೇಂದ್ರ, ಡಿ.13 ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಡಿ.15 ಕೆ.ಆರ್.ಪೇಟೆ ತಾಲೂಕು ಆಸ್ಪತ್ರೆ, ಡಿ.16 ಮದ್ದೂರು ತಾಲೂಕು ಆಸ್ಪತ್ರೆ, ಡಿ.18 ಪಾಂಡವಪುರ ಉಪ ವಿಭಾಗ ಆಸ್ಪತ್ರೆ, ಡಿ.20 ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ, ಡಿ.21 ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ, ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸಾರ್ವಜನಿಕ ಆಸ್ಪತ್ರೆ, ಡಿ.22 ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಡಿ.27 ರಂದು ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಕಮಾಂಡ್ ಸೆಂಟರ್‌ಗೆ ಮಾಹಿತಿ ರವಾನೆ

ಯಾವ ಮಾರ್ಗದಲ್ಲಿ ಸಂಚರಿಸುತ್ತಿದೆ, ವೇಗ, ವಾಹನದ ಮಾರ್ಗ ಬದಲಾವಣೆ, ನಿರ್ಬಂಧಿತ ಪ್ರದೇಶ, ಸಂಚಾರ ನಿಯಮ ಸೇರಿದಂತೆ ಹಲವು ಮಾಹಿತಿ ಗಳು ಕ್ಷಣ ಮಾತ್ರದಲ್ಲಿ ಕಮಾಂಡ್ ಸೆಂಟರ್‌ಗೆ ತಲುಪಲಿದೆ. ಈ ವಿಚಾರ ತಿಳಿದ ನಂತರ ಪೊಲೀಸರು ಆ ವಾಹನ ಪತ್ತೆ ಮಾಡಿ ಮಹಿಳೆಯರ ರಕ್ಷಣೆಗೆ ಮುಂದಾಗುತ್ತಾರೆ.

ಮಹಿಳೆಯರು ಮಾತ್ರವಲ್ಲದೆ ಮಕ್ಕಳು ಸೇರಿದಂತೆ ಯಾರೇ ಆದರೂ ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಪ್ರಯಾಣಿಸು ವಾಗ ಸಂಕಷ್ಟ ಪರಿಸ್ಥಿತಿಯಲ್ಲಿ ಸಿಲುಕಿದರೆ ಈ ವ್ಯವಸ್ಥೆ ಸಹಾಯಕಾರಿ. ವಾಹನದಲ್ಲಿ ಸಂಚರಿಸುವ ವೇಳೆ ಆರೋಗ್ಯದಲ್ಲಿ ಏರುಪೇರಾಗಿ ತುರ್ತು ವೈದ್ಯಕೀಯ ಸೇವೆ ಅವಶ್ಯ ವಿದ್ದರೆ ಅಥವಾ ಅವಘಡಗಳು ಸಂಭವಿಸಿದ ಸಂದರ್ಭದಲ್ಲಿ ಕೂಡ ಪ್ಯಾನಿಕ್ ಬಟನ್ ಒತ್ತಬಹುದು. ಒಟ್ಟಾರೆ ಪ್ಯಾನಿಕ್ ಬಟನ್–ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ ಬಹುಪಯೋಗಿ ಉಪಕರಣವಾಗಿದೆ. ಸಿಲಿಕಾನ್ ಸಿಟಿ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಗಳಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರು ರಾತ್ರಿ ವೇಳೆ ಟ್ಯಾಕ್ಸಿ, ಕ್ಯಾಬ್‌ಗಳಲ್ಲಿ ಸಂಚರಿಸಲು ಹೆದರುತ್ತಿದ್ದರು. ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುವ ಯುವತಿಯರು, ಮಹಿಳೆಯರನ್ನು ವಾಹನ ಚಾಲಕರೇ ಅಪಹರಿಸಿ ಅತ್ಯಾಚಾರ, ಹತ್ಯೆ ಮಾಡಿರುವ ಪ್ರಕರಣಗಳು ನಡೆದಿವೆ. ಆದರೆ ಈಗ ಪ್ಯಾನಿಕ್ ಬಟನ್ ರಕ್ಷಣಾ ವ್ಯವಸ್ಥೆಯಿಂದ ಭಯ ಪಡುವಂತಿಲ್ಲ.

ಸಾಮಾಜಿಕ ಭದ್ರತೆ

ಯೋಜನೆ ಇದೆ. ಇದು ಅಪಘಾತ ವಿಮೆಯಾಗಿದ್ದು, ಕಾರ್ಮಿಕರಿಗೆ ಸಂಕಷ್ಟದಲ್ಲಿ ನೆರವಾಗಲಿದೆ. ಪ್ರಧಾನಮಂತ್ರಿ ಶ್ರಮಯೋಗಿ ಮಾನ್–ಧನ್ ಯೋಜನೆಯಡಿ 60 ವರ್ಷ ಪೂರೈಸಿದ ಅಸಂಘಟಿತ ಕಾರ್ಮಿಕರು ಮಾಸಿಕ ರೂ.3000ಗಳ ನಿಶ್ಚಿತ ಪಿಂಚಣಿ ಪಡೆಯಬಹುದಾಗಿದೆ. ಮುಂದಿನ ವರ್ಷದಲ್ಲಿ ರಾಜ್ಯ ಸರ್ಕಾರದಿಂದ ನೇಕಾರರು ಹಾಗೂ ಟೈಲರಿಂಗ್ ವೃತ್ತಿಯಲ್ಲಿ ತೊಡಗಿದವರಿಗೆ ವಿಶೇಷ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿ ಮಾಡಲಾಗುವುದು ಎಂದು ಪುನರುಚ್ಚರಿಸಿದರು.

ನಿರ್ಮಾಣ ಕ್ಷೇತ್ರದ ಸೆಸ್ ಮಾದರಿಯಂತೆ ಗಾರ್ಮೆಂಟ್, ವಾಹನ ತಯಾರಿಕೆ, ಸಾರಿಗೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಶೇ.1 ರಷ್ಟು ಸೆಸ್ ಸಂಗ್ರಹಿಸಲು ಚಿಂತನೆ ನಡೆಸಲಾಗುತ್ತಿದೆ. ಈ ಸೆಸ್‌ನಿಂದ ಸಂಗ್ರಹವಾದ ಹಣದಲ್ಲಿ ಆಯಾ ಕ್ಷೇತ್ರಗಳಲ್ಲಿ ತೊಡಗಿರುವ ಕಾರ್ಮಿಕರಿಗೆ ಯೋಜನೆಗಳನ್ನು ರೂಪಿಸಲಾಗುವುದು ಎಂದು ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಈ ಸಂದರ್ಭದಲ್ಲಿ ತಿಳಿಸಿದರು.

ಪೊಲೀಸ್ ಇಲಾಖೆಯ 1700ಕ್ಕೂ ಅಧಿಕ ವಾಹನ ಸ್ಕ್ರ್ಯಾಪ್



ಬೆಂಗಳೂರು, ಡಿ.5(ಕೆಎಂಶಿ)– ಪೊಲೀಸ್ ಇಲಾಖೆಯಲ್ಲಿ 1700ಕ್ಕೂ ಹೆಚ್ಚು ವಾಹನಗಳನ್ನು ಸ್ಕ್ರ್ಯಾಪ್ (ನಿರುಪಯುಕ್ತ) ಗೊಳಿಸಲು ತೀರ್ಮಾನಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಜೆ.ಎಚ್. ಶ್ರೀನಿವಾಸ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಹಂತಹಂತವಾಗಿ ಅವುಗಳನ್ನು ನಿರುಪಯುಕ್ತಗೊಳಿಸಲಾಗುವುದು. 100 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ ವಾಹನಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ ಎಂದರು. ಅಗ್ನಿಶಾಮಕ ಠಾಣೆ ಮತ್ತು ತುರ್ತು ಸೇವಾ ಇಲಾಖೆಯಲ್ಲಿ 15 ವರ್ಷಗಳ ಹಳೆಯ ವಾಹನಗಳನ್ನು ಅನುಪಯುಕ್ತಗೊಳಿಸುವ ಹಾಗೂ ಬದಲಿಗೆ ಹೊಸ ವಾಹನಗಳನ್ನು ಖರೀದಿಸಲು ಅನುಮತಿ ನೀಡುವ ಸಂಬಂಧ ಸರಕಾರದ ಪ್ರಧಾನಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ ಎಂದರು.

ಅವಧಿ ಮೀರಿದ ಮತ್ತು ಸುಸ್ಥಿತಿಯಲ್ಲಿರುವ ವಾಹನಗಳನ್ನು ನಿರುಪಯುಕ್ತಗೊಳಿಸಿದಲ್ಲಿ ಇಲಾಖೆಯ ಮೂಲ ಚಟುವಟಿಕೆಗಳಿಗೆ ತೊಂದರೆಯಾಗುವುದರಿಂದ ವಾಹನಗಳ ನೋಂದಣಿ ಪತ್ರವನ್ನು ನವೀಕರಿಸಲು ಕೇಂದ್ರ ಸರಕಾರದ ಅನುಮತಿ ಪಡೆಯಲು ನಿರ್ಣಯ ಕೈಗೊಳ್ಳಲಾಗಿದ್ದು, ಅನುಮತಿ ಕೋರಿ ಕೇಂದ್ರ ಸರಕಾರಕ್ಕೆ ಪತ್ರ ಬರೆಯಲಾಗಿದೆ. ಅನುಮತಿ ನಿರೀಕ್ಷಣೆಯಲ್ಲಿದ್ದೇವೆ ಎಂದರು.

ನಾಡಪ್ರಭು ಕೆಂಪೇಗೌಡ ಬಡಾವಣೆಗೆ ವರ್ಷದಲ್ಲಿ ಮೂಲಸೌಕರ್ಯ

ಡಿಸಿಎಂ ಪರವಾಗಿ ಸಚಿವ ರಾಮಲಿಂಗಾ ರೆಡ್ಡಿ ಭರವಸೆ

ಬೆಂಗಳೂರು, ಡಿ.5(ಕೆಎಂಶಿ)– ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಒಂದು ವರ್ಷದೊಳಗೆ ಅಗತ್ಯ ಮೂಲ ಸೌಕರ್ಯಗಳನ್ನು ಸರಕಾರ ಕಲ್ಪಿಸಿಕೊಡಲಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸುರೇಶ ಕುಮಾರ್ ಅವರ ಪ್ರಸ್ತಾವಕ್ಕೆ ಉಪ ಮುಖ್ಯಮಂತ್ರಿಗಳ ಪರವಾಗಿ ಉತ್ತರ ನೀಡಿದ ಅವರು, ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯಗಳ ಕೊರತೆ ಇರುವುದರಿಂದ ಜನರು ಸಮಸ್ಯೆ ಅನುಭವಿಸುತ್ತಿರುವುದು ಗಮನದಲ್ಲಿದ್ದು, ಅದನ್ನು ವರ್ಷದೊಳಗೆ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ, ರೆವಿನ್ಯೂ ನಿವೇಶನಗಳನ್ನು ರಚಿಸಿ ಮಾರಾಟ ಮಾಡಿರುವುದು, ಹೈಕೋರ್ಟ್‌ನಲ್ಲಿ ಪ್ರಕರಣಗಳು ದಾಖಲಾಗಿರುವುದರಿಂದ ಬಡಾವಣೆ ನಿರ್ಮಾಣಕ್ಕಾಗಿ 1,400 ಎಕರೆ ಭೂಸ್ವಾಧೀನ ಮಾಡುವುದಕ್ಕೆ ಸರಕಾರಕ್ಕೆ ಸಮಸ್ಯೆಯಾಗಿದೆ



ಎಂದು ವಿವರಿಸಿದ ಅವರು, ನ್ಯಾಯಾಲಯಗಳಲ್ಲಿ ಬಾಕಿ ಇರುವ ರಿಟ್ ಅರ್ಜಿಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಪಡಿಸಲು ಕ್ರಮ ವಹಿಸಲಾಗುತ್ತಿದ್ದು, ಇತ್ಯರ್ಥಪಡಿಸಿದ ನಂತರ ಭೂಸ್ವಾಧೀನತೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದರು. ಹಂಚಿಕೆದಾರರು ತಮ್ಮ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು ಆನ್‌ಲೈನ್ ಅನುಮೋದನೆ ಪಡೆಯಲು ಸೆಂಟರ್ ಫಾರ್ ಇ–ಗವರ್ನೆನ್ಸ್ ರವರು ಅಗತ್ಯ ತಾಂತ್ರಿಕ ಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ಆರು ತಿಂಗಳ ಕಾಲಾವಧಿಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಯೋಜಿಸಲಾಗಿದೆ ಎಂದರು.

ನೆಸ್ಲೆ ಇಂಡಿಯಾಗೆ ಅತ್ಯುತ್ತಮ ಉದ್ಯಮ ಪ್ರಶಸ್ತಿ

ಮೈಸೂರು, ಡಿ. 5–ಮೈಸೂರಿನ ನೆಸ್ಲೆ ಇಂಡಿಯಾಗೆ IIMR-ICAR ನ ನ್ಯೂಟ್ರಿ ಹಬ್ ಆಯೋಜಿಸಿದ್ದ ಇಂಟರ್‌ನ್ಯಾಷನಲ್ ನ್ಯೂಟ್ರಿ–ಸೀರಿಯಲ್ ಕನ್ವೆನ್ಷನ್ 5.0 ರಲ್ಲಿ "ಅತ್ಯುತ್ತಮ ಉದ್ಯಮ– ಮುಖ್ಯವಾಹಿನಿಯ ಉತ್ಪನ್ನಗಳ ಆವಿಷ್ಕಾರ" ಪ್ರಶಸ್ತಿ ಲಭಿಸಿದೆ. ಸಮಾವೇಶದಲ್ಲಿ ನೀತಿನಿರೂಪಕರು, ಉತ್ಪಾದಕರು, ಉತ್ಪನ್ನಗಳ ಸಂಸ್ಕರಣಾಕಾರರು, ಸಂಶೋಧಕರು, ಶಿಕ್ಷಣ ತಜ್ಞರು, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು, ಇನ್‌ಕ್ಯುಬೇಟರ್‌ಗಳು, ಸ್ಟಾರ್ಟಪ್‌ಗಳು, ಮೈಕ್ರೋ–ಉದ್ಯಮಿಗಳು ಹಾಗೂ ಮಿಲೆಟ್ಸ್ ಪರಿಸರ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿರುವ ಎನ್‌ಜಿಒಗಳು ಸೇರಿದಂತೆ ಹಲವಾರು ಕ್ಷೇತ್ರಗಳ ಪರಿಣತರು ಪಾಲ್ಗೊಂಡಿದ್ದರು. ನೆಸ್ಲೆ ಇಂಡಿಯಾಗೆ ಲಭಿಸಿರುವ ಈ ಪ್ರಶಸ್ತಿಯು ಆಹಾರ ಉದ್ಯಮದಲ್ಲಿ ಉತ್ಕೃಷ್ಟತೆ ಮತ್ತು ನಾವೀನ್ಯತೆಯಲ್ಲಿನ ಸಂಸ್ಥೆಯ ಬದ್ಧತೆಗೆ ಹಿಡಿದ ಕನ್ನಡಿಯಾಗಿದೆ. ಈ ಬಗ್ಗೆ ಮಾತನಾಡಿದ ನೆಸ್ಲೆ ಇಂಡಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾರಾಯಣ್, ಅತ್ಯುತ್ತಮ ಉದ್ಯಮ–ಪ್ರಾಡಕ್ಟ್ ಇನ್ನೋವೇಶನ್ ಫಾರ್ ಮೇನ್ ಸ್ಟ್ರೀಮಿಂಗ್ ಮಿಲ್ಲೆಟ್ಸ್ ಅವಾರ್ಡ್' ಅನ್ನು ಪಡೆಯುತ್ತಿರುವುದಕ್ಕೆ ನೆಸ್ಲೆ ಇಂಡಿಯಾಗೆ ಹೆಮ್ಮೆ ಎನ್ನಿಸುತ್ತಿದೆ ಎಂದರು.

ರಾಷ್ಟ್ರೀಯ ಗ್ರಾಹಕ ದಿನಾಚರಣೆ ಹಿನ್ನೆಲೆ; ಡಿ.10ರಂದು ಎಂಜಿಪಿ ಮಾಸಿಕ ಸಭೆ

ಮೈಸೂರು, ಡಿ. 5–ಗ್ರಾಹಕ ಸಂರಕ್ಷಣಾ ಕಾಯ್ದೆ ಕುರಿತಾಗಿ ಚರ್ಚಿಸಲು, ಗ್ರಾಹಕರನ್ನು ಖಾಸಗಿ ವಲಯದಲ್ಲಿ ರಾಜರಂತೆ ಮತ್ತು ಸಾರ್ವಜನಿಕ ವಲಯದಲ್ಲಿ ಯಜಮಾನರಂತೆ ಪರಿಗಣಿಸಬೇಕು ಎಂದು ಪ್ರತಿಪಾದಿಸುವ ನಿಟ್ಟಿನಲ್ಲಿ ಈ ಹಿಂದೆ ಗ್ರಾಹಕರ ದಿನಾಚರಣೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿತ್ತು.

ಈ ವರ್ಷ ಎಂಜಿಪಿ ಶಾಲಾ, ಕಾಲೇಜುಗಳು, ಟ್ರೇಡ್ ಅಸೋಸಿಯೇಷನ್‌ಗಳು, ಸರ್ಕಾರಿ ಕಚೇರಿಗಳನ್ನು ಒಳಗೊಂಡಂತೆ ಅರ್ಥಪೂರ್ಣ ಆಚರಣೆಗೆ ಚಿಂತನೆ ನಡೆಸಿದೆ. ಈಗಾಗಲೇ ಹಲವಾರು ಸಂಸ್ಥೆಗಳನ್ನು ಸಂಪರ್ಕಿಸಿದ್ದು, ಜವಾಬ್ದಾರಿಯುತ ಪೌರತ್ವವನ್ನು ಉತ್ತೇಜಿಸಲು ಪೋಸ್ಟರ್‌ಗಳನ್ನು ಮುದ್ರಿಸಿದೆ. ಅವರಲ್ಲಿ ಕೆಲವರು ಈಗಾಗಲೇ ಕೆಲವು ಉತ್ತಮ ಸಲಹೆ ಸೂಚನೆಗಳನ್ನು ಮಂಡಿಸಿದ್ದಾರೆ.

ಡಿಸೆಂಬರ್ ಮಾಸಿಕ ಸಭೆಯಲ್ಲಿ ಭಾಗವಹಿಸುವವರು ರಾಷ್ಟ್ರೀಯ ಗ್ರಾಹಕರ ದಿನವನ್ನು ಹೆಚ್ಚು ಅರ್ಥಪೂರ್ಣ ರೀತಿಯಲ್ಲಿ ಆಚರಿಸಲು ತಮ್ಮದೇ ಉಪಯುಕ್ತ ವಿಚಾರಧಾರೆ ಮಂಡಿಸಲಿದ್ದಾರೆ.

ಸಭೆಯು ಡಿ.10 ರಂದು ಸಂಜೆ 4 ಗಂಟೆಗೆ #6/1 ವಿವೇಕಾನಂದ ರಸ್ತೆ, ಯಾದವಗಿರಿ ಇಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ. 0821–2515150 ಸಂಪರ್ಕಿಸಬಹುದು.

ಕಗ್ಗಲೀಪುರದಲ್ಲಿ ಶಿವಾನುಭೂತಿ ಭವನ ಲೋಕಾರ್ಪಣೆ




ಮೈಸೂರು, ಡಿ.5– ಅಂತಾರಾಷ್ಟ್ರೀಯ ಅಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಟಿ.ನರಸೀಪುರ ತಾಲೂಕಿನ ಕಗ್ಗಲೀಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶಿವಾನುಭೂತಿ ಭವನವನ್ನು ಇತ್ತೀಚೆಗೆ ಲೋಕಾರ್ಪಣೆ ಮಾಡಲಾಯಿತು.


ಭವನವನ್ನು ಉದ್ಘಾಟಿಸಿ ಮಾತನಾಡಿದ ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ, ಭವನಗಳು ಮನುಷ್ಯನ ಆತ್ಮ ಉನ್ನತಿ ಸಾಧನೆಗಾಗಿಯೇ ಹೊರತು ವಿಶ್ರಾಂತಿಗಾಗಿ ಅಲ್ಲ. ವರ್ತಮಾನ ಸಮಯದ ಮನುಷ್ಯನ ಬದುಕು ಒತ್ತಡದಿಂದ ಕೂಡಿದ್ದು ಅನೇಕರು ಧೂಮಪಾನ, ಮದ್ಯಪಾನ, ಗಾಂಜಾ ಚಟಕ್ಕೆ ದಾಸರಾಗಿ ಆರೋಗ್ಯ, ಆಯಸ್ಸನ್ನು ಕಳೆದುಕೊಂಡಿದ್ದಾರೆ. ಸಮಾಜಿಕ ಪಿಡುಗು, ಮೌಢ್ಯಗಳಿಗೆ ಬಲಿಯಾಗಿ ಕಂಟಕ ಪ್ರಾಯರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಈಶ್ವರೀಯ ವಿದ್ಯಾಲಯವು ಗ್ರಾಮವನ್ನು ನಂದಗೋಕುಲವನ್ನಾಗಿ ಮಾಡಲು ಉಚಿತ ರಾಜಯೋಗ ಶಿಕ್ಷಣದ ಮೂಲಕ ಮೌಲ್ಯಗಳನ್ನು ಜಾಗೃತಗೊಳಿಸಲು ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ 6 ರಿಂದ 8ರವರೆಗೆ ರಾಜಯೋಗ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಪಿಎಲ್‌ಡಿ ಬ್ಯಾಂಕ್‌ನ ವಜ್ರೇಗೌಡ ಮಾತನಾಡಿ, ಈ ಸಂಸ್ಥೆಗೆ ಯಾರೇ ಬಂದು ನಾಲ್ಕಾರು ವಿಚಾರಗಳನ್ನು ಕೇಳಿದರೆ ಮನಸ್ಸಿಗೆ ಶಾಂತಿ ಸಮಾಧಾನ ಸಿಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸಾಧಕರು ಹಾಗೂ ಭವನಕ್ಕೆ ಸಹಕರಿಸಿದ ಎಲ್ಲರನ್ನು ಸನ್ಮಾನಿಸಲಾಯಿತು. ಬೆಂಗಳೂರು ಚಾಮರಾಜಪೇಟೆ ಈವಿವಿಯ ನಿರ್ದೇಶಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಆಶೀರ್ವದಿಸಿದರು. ಓಂ ಶಾಂತಿ ನ್ಯೂಸ್ ಸರ್ವಿಸಸ್‌ನ ಬಿ.ಕೆ. ಆರಾಧ್ಯ, ಗೀತಾ, ಮಹೇಶ್, ನಾಗಣ್ಣ, ಚಿನ್ನಸ್ವಾಮಿ, ಪುಟ್ಟಸಿದ್ಧಯ್ಯ, ಪವಿತ್ರ, ಹನುಮಂತಪ್ಪ, ರಾಜಣ್ಣ ಹಾಜರಿದ್ದರು.

ರಾಜ್ಯಾದ್ಯಂತ ಭ್ರಷ್ಟ ಅಧಿಕಾರಿಗಳಿಗೆ ಲೋಕಾಯುಕ್ತ ಶಾಕ್

ನಂಜನಗೂಡು ಸರ್ಕಾರಿ ಪದವಿ ಕಾಲೇಜು ಸಹ ಪ್ರಾಧ್ಯಾಪಕ ಡಾ.ಎಂ.ಎಸ್.ಮಹದೇವಸ್ವಾಮಿ ಮನೆ, ಕಾಲೇಜು, ಕಬ್ಬಿಣದ ಅಂಗಡಿ, ಸಂಸ್ಥೆಗಳೂ ಸೇರಿ 10 ಕಡೆ ದಾಳಿ







8.42 ಕೋಟಿ ರೂ. ಆಸ್ತಿ ಒಡೆಯ ಈ ಉಪನ್ಯಾಸಕ

ಮೈಸೂರು, ಡಿ.5(ಆರ್‌ಕೆ)–ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ವೇಳೆ ಕಾಲೇಜು ಉಪನ್ಯಾಸಕ ಡಾ. ಎಂ.ಎಸ್.ಮಹದೇವಸ್ವಾಮಿ ಅಂದಾಜು 8,42,27,150 ರೂ. ಮೌಲ್ಯದ ಆಸ್ತಿ ಹೊಂದಿರುವುದು ಪತ್ತೆಯಾಗಿದೆ. ಅವರಿಗೆ ಸೇರಿದ ಮನೆ, ಕಚೇರಿ, ಅಂಗಡಿಗಳು ಸೇರಿ ಒಟ್ಟು 12 ಕಡೆ ಲೋಕಾಯುಕ್ತ ಪೊಲೀಸರು, ಶೋಧ ನಡೆಸಿದಾಗ ಸುಮಾರು 6.08 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ, 2.34 ಕೋಟಿ ರೂ. ಚರಾಸ್ತಿ ಸೇರಿ ಒಟ್ಟು 8,42,27,150 ರೂ. ಬೆಲೆ ಬಾಳುವ ಆಸ್ತಿಗೆ ಡಾ. ಮಹದೇವಸ್ವಾಮಿ ಒಡೆಯ ಎಂಬುದು ದೃಢಪಟ್ಟಿದೆ. ಅವರ ಒಟ್ಟು ಆದಾಯ 1.4 ಕೋಟಿ ರೂ.ಗಳಾಗಿದ್ದು, 7,01,27,150 ಕೋಟಿ ರೂ. ಅಧಿಕ ಆಸ್ತಿ ಗಳಿಸಿದ್ದಾರೆ ಎಂದು ತಿಳಿದು ಬಂದಿದೆ. ಪತ್ತೆಯಾಗಿರುವ ಆಸ್ತಿ ಮೌಲ್ಯ ದಾಖಲೆ ಪತ್ರದಲ್ಲಿ ನಮೂದಾಗಿರುವುದಾಗಿದ್ದು, ಮಾರುಕಟ್ಟೆ ಮೌಲ್ಯ ಲೆಕ್ಕಾಚಾರ ಮಾಡಿದರೆ ಅತ್ಯಧಿಕವಾಗಲಿದೆ ಎಂದು ಹೇಳಲಾಗುತ್ತಿದೆ.



ಮೈಸೂರು, ಡಿ.5(ಆರ್‌ಕೆ)–ರಾಜ್ಯಾದ್ಯಂತ ಭ್ರಷ್ಟ ಅಧಿಕಾರಿಗಳಿಗೆ ಶಾಕ್ ನೀಡಿರುವ ಲೋಕಾಯುಕ್ತ ಪೊಲೀಸರು, ಏಕ ಕಾಲದಲ್ಲಿ 63 ಕಡೆ ದಾಳಿ ನಡೆಸಿದ್ದಾರೆ.

ಮೈಸೂರು ಜಿಲ್ಲೆ ನಂಜನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕ ಡಾ.ಎಂ.ಎಸ್.ಮಹದೇವಸ್ವಾಮಿಯ ಮೈಸೂರಿನ ಜೆ.ಪಿ.ನಗರದ ಮನೆ, ಕಬ್ಬಿಣದ ಅಂಗಡಿಗಳು, ಗುರುಕುಲ ವಿದ್ಯಾ ಸಂಸ್ಥೆ, ಎಂ.ಎಸ್.ಪ್ರಾಪರ್ಟೀಸ್, ಎಂ.ಎಸ್.ಗೃಹ ನಿರ್ಮಾಣ ಸಹಕಾರ ಸಂಘದ ಕಚೇರಿ ಸೇರಿದಂತೆ ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ 10 ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಕೋಟ್ಯಾಂತರ ರೂ. ಮೌಲ್ಯದ ಸ್ಥಿರ ಹಾಗೂ ಚರಾಸ್ತಿ, ನಗದು, ಚಿನ್ನಾಭರಣಗಳು, ದಾಖಲೆಗಳನ್ನು ಪತ್ತೆ ಹಚ್ಚಿದ್ದಾರೆ.

ಲೋಕಾಯುಕ್ತ ಮೈಸೂರು ಎಸ್ಪಿ ಸುರೇಶ್ ಬಾಬು ಅವರ ನಿರ್ದೇಶನದಂತೆ ಡಿವೈಎಸ್ಪಿಗಳಾದ ಕೃಷ್ಣಯ್ಯ, ಮಾಲತೇಶ್, ಪವನ್ ಕುಮಾರ್, ಮ್ಯಾಥ್ಯೂ ಥಾಮಸ್, ಸುನಿಲ್, ಇನ್ಸ್‌ಪೆಕ್ಟರ್‌ಗಳಾದ ಲೋಕೇಶ್, ಉಮೇಶ್, ಜಯರತ್ನ, ರೂಪಶ್ರೀ, ರವಿಕುಮಾರ್, ಶಶಿಧರ್, ಲೋಹಿತ್, ಬ್ಯಾಟರೇಗೌಡ ಹಾಗೂ ಸಿಬ್ಬಂದಿಗಳು ಇಂದು ಬೆಳಗ್ಗೆ 6 ಗಂಟೆಯಿಂದ ಡಾ. ಮಹದೇವಸ್ವಾಮಿ ಅವರಿಗೆ ಸೇರಿದ ಮನೆ, ಕಚೇರಿ, ಸ್ಟೀಲ್ ಅಂಗಡಿಗಳು ಸೇರಿ 10 ಕಡೆ ಏಕಕಾಲದಲ್ಲಿ ದಾಳಿ ನಡೆಸಿದರು.

ಮೈಸೂರಿನ ಜೆ.ಪಿ.ನಗರದ ಗುರುಕುಲ ಬಡಾವಣೆಯಲ್ಲಿರುವ ಮನೆಗೆ ಬೆಳ್ಳಂಬೆಳಗ್ಗೆ ದಾಳಿ ನಡೆಸಿದ ಪೊಲೀಸರನ್ನು ಕಂಡ ಡಾ.ಮಹದೇವಸ್ವಾಮಿ ದಿಗ್ಭ್ರಾಂತರಾದರು. ಸರ್ಚ್ ವಾರೆಂಟ್‌ನೊಂದಿಗೆ ದಾಳಿ ನಡೆಸಿದ ಅಧಿಕಾರಿಗಳು, ಮನೆಯ ಅಲ್ಮೇರಾ, ಗೋದ್ರೆಜ್ ಬೀರುಗಳು, ತಿಜೋರಿಯನ್ನು ತಲಾಶ್ ಮಾಡಿದಾಗ ಅಪಾರ ಪ್ರಮಾಣದ ಆಸ್ತಿಗಳ ದಾಖಲೆ ಪತ್ರಗಳು, ಆಭರಣ, ಸಂಸ್ಥೆಗಳಿಗೆ ಸಂಬಂಧಿಸಿದ ದಾಖಲೆಗಳು ಪತ್ತೆಯಾದವು.

ಜೆ.ಪಿ.ನಗರದ ನಾಲ್ಕು ಅಂತಸ್ತು ಮನೆ, ವಿಜಯನಗರ 2ನೇ ಹಂತ, ಹೆಬ್ಬಾಳು, ಜೆ.ಪಿ.ನಗರದ ಕಬ್ಬಿಣದಂಗಡಿಗಳು, ಗುರುಕುಲ ವಿದ್ಯಾಸಂಸ್ಥೆ, ಎಂ.ಎಸ್. ಇನ್‌ಫ್ರಾಟೆಕ್, ಶ್ರೀ ಮಹದೇವಸ್ವಾಮಿ ಗೃಹ ನಿರ್ಮಾಣ ಪ್ರೈವೇಟ್ ಲಿಮಿಟೆಡ್, ಕೆ.ಆರ್.ನಗರದಲ್ಲಿ ಕಬ್ಬಿಣದ ಅಂಗಡಿ, ಶ್ರೀರಂಗಪಟ್ಟಣ ತಾಲೂಕು ಅರಕೆರೆಯಲ್ಲಿ ಸ್ಟೀಲ್ ಅಂಗಡಿಗಳು, ನಂಜನಗೂಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಾಳಿ ಮಾಡಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಪರಿಶೀಲಿಸಿದರು.

ನಂಜನಗೂಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕನಾಗಿದ್ದು, ಡಾ. ಮಹದೇವಸ್ವಾಮಿ, ತಮ್ಮ ಖಾಸಗಿ ವಿದ್ಯಾಸಂಸ್ಥೆ, ಕಟ್ಟಡ ನಿರ್ಮಾಣ, ಬಡಾವಣೆಗಳ ಅಭಿವೃದ್ಧಿ, ರಿಯಲ್ ಎಸ್ಟೇಟ್, ಕಟ್ಟಡ ಸಾಮಗ್ರಿಗಳ ಅಂಗಡಿ ನಡೆಸುವಲ್ಲಿ ಆಸಕ್ತಿ ವಹಿಸಿ ಹೆಚ್ಚು ಸಮಯವನ್ನು ವ್ಯವಹಾರಕ್ಕೆ ವಿನಿಯೋಗಿಸುತ್ತಿದ್ದು, ನಿವೇಶನ ಮಾರಾಟ ಮಾಡುತ್ತಿದ್ದಾರೆಂಬ ದೂರುಗಳು ಲೋಕಾಯುಕ್ತ ಕಚೇರಿಗೆ ಸಲ್ಲಿಕೆಯಾಗಿದ್ದವು ಎಂದು ಹೇಳಲಾಗಿದೆ. ಅವರು ಕೆಲಸ ಮಾಡುವ ಕಾಲೇಜಿನಲ್ಲಿ ಒದಗಿಸಲಾಗಿದ್ದ ಲಾಕರ್ ಅನ್ನು ಶೋಧಿಸಲಾಗಿ, ಕೆಲ ಉಪನ್ಯಾಸಕರ ವರ್ಗಾವಣೆಗೆ ಸಂಬಂಧಿಸಿದ ಅರ್ಜಿಗಳು, ಶಿಫಾರಸು ಪತ್ರಗಳು, ಚೆಕ್‌ಗಳ ಜೆರಾಕ್ಸ್ ಪ್ರತಿಗಳು ಲಭ್ಯವಾಗಿರುವುದರಿಂದ ಡಾ.ಮಹದೇವಸ್ವಾಮಿ ವರ್ಗಾವಣೆ ದಂಧೆಯಲ್ಲೂ ತೊಡಗಿದ್ದರು ಎಂಬುದು ಲೋಕಾಯುಕ್ತ ಪೊಲೀಸರಿಗೆ ತಿಳಿದು ಬಂದಿದೆ. ಐಷಾರಾಮಿ ಕಾರುಗಳು, ಮನೆ ಪೀಠೋಪಕರಣಗಳು, ಬೆಲೆ ಬಾಳುವ ಕೈಗಡಿಯಾರಗಳು, ತಪಾಸಣೆ ವೇಳೆ ಪತ್ತೆಯಾಗಿದ್ದು, ಬ್ಯಾಂಕ್ ಪಾಸ್‌ಬುಕ್, ಸ್ಥಿರಾಸ್ತಿಗಳ ದಾಖಲೆ ಪತ್ರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಬೆಳಗ್ಗೆ 6 ಗಂಟೆಗೆ ಆರಂಭವಾದ ಕಾರ್ಯಾಚರಣೆಯು ರಾತ್ರಿವರೆಗೂ ನಡೆಯಿತು. ದಾಳಿಗೆ ವಿದ್ಯಾರಣ್ಯಪುರಂ, ವಿಜಯನಗರ, ನಂಜನಗೂಡು ಟೌನ್ ಪೊಲೀಸ್ ಠಾಣೆ, ಅರಕೆರೆ ಠಾಣೆ ಪೊಲೀಸರು ಬಂದೋಬಸ್ತ್ ವ್ಯವಸ್ಥೆ ಮಾಡಿ ಲೋಕಾಯುಕ್ತ ಪೊಲೀಸರಿಗೆ ಸಾಥ್ ನೀಡಿದರು. ಮಹಜರು ನಡೆಸಿ ಎಲ್ಲಾ ಪ್ರಕ್ರಿಯೆಯನ್ನು ವಿಡಿಯೋ ರೆಕಾರ್ಡಿಂಗ್ ಮಾಡಲಾಯಿತು.

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪತ್ನಿ ಸಹೋದರ ಸೇರಿದಂತೆ ಹಲವರ ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಅಪಾರ ಪ್ರಮಾಣದ ಆಸ್ತಿ–ಪಾಸ್ತಿ, ದಾಖಲೆಗಳು ವಶಕ್ಕೆ

ಬೆಂಗಳೂರು, ಡಿ.5(ಕೆಎಂಶಿ)– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಪತ್ನಿಯ ಸಹೋದರ ಡಾ. ಪ್ರಭುಲಿಂಗ ಮಾನಕರ ಸೇರಿದಂತೆ ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ದಾಳಿ ನಡೆಸಿ ಕೋಟ್ಯಾಂತರ ರೂ. ನಗದು ಹಾಗೂ ಆಸ್ತಿ–ಪಾಸ್ತಿಗಳನ್ನು ವಶಪಡಿಸಿಕೊಂಡಿದೆ.

ಇಂದು ಬೆಳ್ಳಂಬೆಳಗ್ಗೆ ರಾಜ್ಯದ 13 ಅಧಿಕಾರಿಗಳಿಗೆ ಸೇರಿದ 63 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ಅಕ್ರಮ ಆಸ್ತಿ ಗಳಿಕೆ, ಲಂಚಕ್ಕೆ ಬೇಡಿಕೆ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ದಾಳಿ ಮಾಡಿದ್ದಾರೆ.

ಯಾದಗಿರಿಯ ಡಿಎಚ್‌ಓ ಆಗಿರುವ ಪ್ರಭುಲಿಂಗ ಅವರ ಕಲುಬುರಗಿಯ ಮನೆ, ತೋಟ, ಕಚೇರಿಗಳ ಮೇಲೆ ದಾಳಿ ನಡೆಸಿ ಅಪಾರ ಆಸ್ತಿ–ಪಾಸ್ತಿ ಮತ್ತು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬೆಂಗಳೂರಿನ ಬೆಸ್ಕಾಂ ಜಾಗೃತ ದಳದ ಟಿ.ಎನ್.ಸುಧಾಕರ ರೆಡ್ಡಿ, ಹಾಲು ಉತ್ಪಾದಕ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಎಸ್. ಕೃಷ್ಣಮೂರ್ತಿ, ಕ್ರೆಡೆಲ್ ಸೂಪರಿಂಟೆಂಡಿಂಗ್ ಇಂಜಿನಿಯರ್ ತಿಮ್ಮರಾಯಪ್ಪ, ನಂಜನಗೂಡು ಪ್ರಥಮ ದರ್ಜೆ ಸರ್ಕಾರಿ ಕಾಲೇಜು ಉಪನ್ಯಾಸಕ ಮಹದೇವಸ್ವಾಮಿ, ಬಳ್ಳಾರಿಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಚಂದ್ರಶೇಖರ್ ಲೋಕಾಯುಕ್ತ ದಾಳಿ ನಡೆದ ಅಧಿಕಾರಿಗಳ ಪಟ್ಟಿಯಲ್ಲಿ ಸೇರಿದ್ದಾರೆ.

ಪ್ರಮುಖ ನಾಯಕರ ಗೈರು ಸಾಧ್ಯತೆ: INDIA ಮೈತ್ರಿಕೂಟ ಸಭೆ ಮುಂದೂಡಿದ ಕಾಂಗ್ರೆಸ್

ನವದೆಹಲಿ, ಡಿ.5– ಪ್ರಮುಖ ಪ್ರತಿಪಕ್ಷದ ನಾಯಕರ ಅಲಭ್ಯತೆ ಹಿನ್ನೆಲೆಯಲ್ಲಿ ನಾಳೆ (ಬುಧವಾರ) ನಡೆಯಬೇಕಿದ್ದ INDIA ಮಿತ್ರಕೂಟದ ಸಭೆಯನ್ನು ಮುಂದೂಡಲಾಗಿದೆ.



ಪಂಚರಾಜ್ಯಗಳ ಚುನಾವಣೆ ಹಿನ್ನೆಲೆ INDIA ಒಕ್ಕೂಟದ ಸಭೆ ನಡೆಸಲು ಸಾಧ್ಯವಾಗಿರಲಿಲ್ಲ. ಫಲಿತಾಂಶ ಪ್ರಕಟವಾದ ಬಳಿಕ ಲೋಕಸಭೆ ಚುನಾವಣೆ ಬಗ್ಗೆ ಚರ್ಚಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೆಹಲಿಯಲ್ಲಿ ಸಭೆ ನಡೆಸಲು ನಿರ್ಧರಿಸಿದ್ದರು. ಆದರೆ ಮಿಚಾಂಗ್ ಚಂಡಮಾರುತದಿಂದ ತಮಿಳುನಾಡಿನಲ್ಲಿ ಭಾರಿ ಮಳೆ ಮತ್ತು ಮಳೆ ಸಂಬಂಧಿತ ಅವಘಡಗಳು ಸಂಭವಿಸಿರುವುದರಿಂದ ಮತ್ತು ರಾಜಧಾನಿ ಚೆನ್ನೈ ವಿಮಾನ ನಿಲ್ದಾಣವನ್ನು ಮುಚ್ಚಿದ್ದು ತಮಿಳುನಾಡು ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಅವರು ದೆಹಲಿಗೆ ಭೇಟಿ ನೀಡಲು, ಸಭೆಗೆ ಬರಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ್ದಾರೆ. ಇತ್ತ ಬಿಹಾರದ ಜೆಡಿಯು ಅಧ್ಯಕ್ಷ ಹಾಗೂ ಬಿಹಾರ ಸಿಎಂ ನಿತೀಶ್ ಕುಮಾರ್ ಅಸ್ವಸ್ಥರಾಗಿದ್ದು, ಅವರೂ ಸಭೆಗೆ ಗೈರಾಗಲಿದ್ದಾರೆ ಎಂದು ಹೇಳಲಾಗಿತ್ತು ಅಂತೆಯೇ ಪಶ್ಚಿಮಬಂಗಾಳದ ಸಿಎಂ ಮಮತಾ ಬ್ಯಾನರ್ಜಿ ಮತ್ತು ಅಖಿಲೇಶ್ ಯಾದವ್ ಸಭೆಗೆ ಗೈರಾಗುವ ಬಗ್ಗೆ ಮೊದಲೇ ಮಾಹಿತಿ ನೀಡಿದ್ದರು. ಇದಲ್ಲದೆ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೆನ್ ಕೂಡಾ ಸಭೆಯಲ್ಲಿ ಭಾಗಿಯಾಗದಿರುವ ಕುರಿತು ಖಚಿತಪಡಿಸಿದ್ದರು. ಆಮ್ ಆದ್ಮಿ ಪಕ್ಷವು ಸಭೆಯಲ್ಲಿ ಭಾಗಿಯಾಗುವ ಬಗ್ಗೆ ಯಾವುದೇ ದೃಢೀಕರಣ ನೀಡಿರಲಿಲ್ಲ. ಹೀಗಾಗಿ ಅಂತಿಮವಾಗಿ ಕಾಂಗ್ರೆಸ್ ಪಕ್ಷ ನಾಳೆ ನಡೆಯಬೇಕಿದ್ದ INDIA ಮೈತ್ರಿಕೂಟದ ಸಭೆಯನ್ನು ಮುಂದೂಡಿದೆ.

ಮುಂದಿನ ಎರಡು ವಾರಗಳಲ್ಲಿ ಮತ್ತೆ ಸಭೆಗೆ ದಿನಾಂಕ ನಿಗದಿ ಮಾಡಲು ಕಾಂಗ್ರೆಸ್ ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ. ಸಭೆ ರದ್ದಾದ ಹಿನ್ನೆಲೆಯಲ್ಲಿ ಶಿವಸೇನೆ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ತಮ್ಮ ವಿಮಾನ ಟಿಕೆಟ್‌ಗಳನ್ನು ರದ್ದುಗೊಳಿಸಿದ್ದಾರೆ ಎಂದು ಶಿವಸೇನೆ ಪಕ್ಷದ ಮೂಲಗಳು ತಿಳಿಸಿವೆ. ಈ ಹಿಂದೆ ಅಂದರೆ INDIA ಒಕ್ಕೂಟದ ಕೊನೆಯ ಸಭೆಯನ್ನು ಮುಂಬೈನಲ್ಲಿ ಶಿವಸೇನಾ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ ಆಯೋಜಿಸಿದ್ದರು. ಈ ಸಭೆಗೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಐದು ರಾಜ್ಯಗಳ ಮುಖ್ಯಮಂತ್ರಿಗಳು ಹಾಜರಿದ್ದರು.

ಖಾಸಗಿ ಸಹಭಾಗಿತ್ವದಲ್ಲಿ 25 ಸಾವಿರಕ್ಕೂ ಅಧಿಕ ಸ್ಮಾರಕ ರಕ್ಷಣೆ

- ವಿಧಾನಸಭೆಯಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಮಾಹಿತಿ
- ಸ್ಮಾರಕಗಳ ದತ್ತು ಜಾರಿ; ಪ್ರವಾಸಿ ತಾಣದಲ್ಲಿ ಮೂಲ ಸೌಲಭ್ಯಕ್ಕೆ ಆದ್ಯತೆ



ಬೆಂಗಳೂರು, ಡಿ.5(ಕೆಎಂಶಿ)– ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯದ 25 ಸಾವಿರಕ್ಕೂ ಹೆಚ್ಚಿನ ಸ್ಮಾರಕಗಳ ರಕ್ಷಣೆಗೆ ಸರ್ಕಾರ ಮುಂದಾಗಿದೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಉಮಾನಾಥ ಕೋಟ್ಯಾನ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಸ್ಮಾರಕಗಳ ದತ್ತು ತೆಗೆದುಕೊಳ್ಳುವ ಯೋಜನೆ ಜಾರಿಯಲ್ಲಿದೆ. ಪ್ರವಾಸಿ ತಾಣಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು. ಕರ್ನಾಟಕ ಪ್ರವಾಸೋದ್ಯಮ ನೀತಿ 2020–26 ರಡಿ ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡದಲ್ಲಿ ಸಾಹಸ, ಕೃಷಿ, ಮನರಂಜನಾ, ಕ್ಯಾರವಾನ್, ಸಾಂಸ್ಕೃತಿಕ ಪ್ರವಾಸೋದ್ಯಮ, ಸಾಂಸ್ಕೃತಿಕ ಗ್ರಾಮ, ಪರಿಸರ, ಪಾರಂಪರಿಕ, ಹೋಂ ಸ್ಟೇ, ಹೋಟೆಲ್, ಹೌಸ್ ಬೋಟ್, ವಸ್ತು ಸಂಗ್ರಹಾಲಯ, ಗ್ಯಾಲರಿ, ರೋಪ್ ವೇ, ಧ್ವನಿ ಮತ್ತು ಬೆಳಕು, ಥೀಮ್ ಪಾರ್ಕ್ ಸೇರಿದಂತೆ 26 ರೀತಿಯ ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗೀ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಪಿ.ಎಂ. ನರೇಂದ್ರಸ್ವಾಮಿ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಯಲ್ಲಮ್ಮನಗುಡ್ಡ, ಮಧುಗಿರಿ, ಅಂಜನಾದ್ರಿ, ನಂದಿಬೆಟ್ಟ ಹಾಗೂ ಗಗನಚುಕ್ಕಿಯಲ್ಲಿ ಕೇಬಲ್ ಕಾರ್ ಪ್ರಾರಂಭಿಸುವುದಕ್ಕೆ ಪರಿಶೀಲನೆ ಕಾರ್ಯ ನಡೆಸಲಾಗುತ್ತಿದೆ ಎಂದರು. 2023–24ನೇ ಸಾಲಿನ ಆಯವ್ಯಯದಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸರ್ಕಾರದಿಂದ ರೂ.339.54 ಕೋಟಿ ಮೀಸಲಿರಿಸಲಾಗಿದೆ. ಈ ಪೈಕಿ ರೂ.90 ಕೋಟಿಯನ್ನು ಬಂಡವಾಳ ವೆಚ್ಚಗಳ ಲೆಕ್ಕ ಶೀರ್ಷಿಕೆಗಳಡಿ ಈಗಾಗಲೇ ಒದಗಿಸಲಾಗಿದೆ ಎಂದರು.

ತಡವಾಗಿ ಶುರುವಾದ ಅಧಿವೇಶನ, ಸದಸ್ಯರ ಆಕ್ಷೇಪ

ಬೆಳಗಾವಿ, ಡಿ.5– ಚಳಿಗಾಲದ ಅಧಿವೇಶನದ ಮೊದಲ ದಿನವೇ ಒಂದು ಗಂಟೆ ತಡವಾಗಿ ಕಲಾಪ ಆರಂಭಿಸಿದ್ದಕ್ಕೆ ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಘಟನೆ ನಡೆಯಿತು.



ಕಲಾಪವನ್ನು ತಡವಾಗಿ ಆರಂಭಿಸಿದ್ದಕ್ಕೆ ಸ್ಪೀಕರ್ ಯು.ಟಿ.ಖಾದರ್ ಅವರನ್ನು ಪ್ರಶ್ನಿಸಿದ ಸದಸ್ಯರು, ಸದನದ ನಿಯಮಗಳ ಬಗ್ಗೆ ಪಾಠ ಮಾಡಿದರು.

ಅಧಿವೇಶನ ಆರಂಭಗೊಳ್ಳುತ್ತಿದ್ದಂತೆ ಮಾತನಾಡಿದ ಮಾಜಿ ಸಚಿವ ಸುರೇಶ್ ಕುಮಾರ್ ಅವರು, ಮೊದಲ ದಿನವೇ ಕಲಾಪ ಒಂದು ಗಂಟೆ ವಿಳಂಬವಾದರೆ ಹೇಗೆ? ಇದರಿಂದ ರಾಜ್ಯಕ್ಕೆ ನಾವು ಯಾವ ಸಂದೇಶ ಕಳುಹಿಸುತ್ತಾ ಇದ್ದೇವೆ? ಏನೂ ಕಾರಣವಿಲ್ಲದೆ ಇಷ್ಟು ವಿಳಂಬ ಮಾಡುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ನಾವೆಲ್ಲ ಬೆಳಿಗ್ಗೆ 11ಕ್ಕೆ ಸರಿಯಾಗಿ ಬಂದು ಕೂತಿದ್ದೆವು. ಆದರೆ ಒಂದು ಗಂಟೆ ತಡವಾಗಿ ಆರಂಭಿಸಲಾಗಿದೆ. ಕಲಾಪದ ಆರಂಭಕ್ಕೆ ನಾವು ಕಾದು ಕೂರುವಂತಾದದ್ದು ಸರಿಯಲ್ಲ. ಇದು ಸದನಕ್ಕೆ ನೀವು ತೋರಿಸುವ ಗೌರವವೇ? ಎಂದು ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್ ಶಾಸಕ ಬಸವರಾಜ ರಾಯರೆಡ್ಡಿ ಅವರು, 'ಸದನಕ್ಕೆ ಯಾರು ಬರುತ್ತಾರೋ ಬಿಡುತ್ತಾರೋ, ಅವರಿಗಾಗಿ ಕಾಯುತ್ತಾ ಸಮಯ ವ್ಯರ್ಥ ಮಾಡುವುದು ಸರಿಯಲ್ಲ. ನೀವಂತೂ ಬಂದು ಕುಳಿತು ಕಲಾಪವನ್ನು ಸರಿಯಾದ ಸಮಯಕ್ಕೆ ಆರಂಭಿಸಬೇಕು' ಎಂದು ಸ್ಪೀಕರ್ ಅವರನ್ನು ಉದ್ದೇಶಿಸಿ ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರಂಭವೊಂದರಲ್ಲಿ ಭಾಗವಹಿಸಿ ಹುಬ್ಬಳ್ಳಿಯಿಂದ ರಸ್ತೆ ಮಾರ್ಗವಾಗಿ ಬರಬೇಕಿದ್ದ ಕಾರಣ, ಸದನಕ್ಕೆ ತಡವಾಗಿ ಬಂದಿದ್ದರು. ಇದೇ ಕಾರಣಕ್ಕೆ ಕಲಾಪ ಆರಂಭ ತಡವಾಯಿತು ಎಂದು ಮೂಲಗಳು ತಿಳಿಸಿವೆ. ಸೋಮವಾರದಿಂದ ಆರಂಭವಾದ ಚಳಿಗಾಲದ ಅಧಿವೇಶನದಲ್ಲಿ ಶಾಸಕರು ಮತ್ತು ಸಚಿವರ ಗೈರು ಹಾಜರಿ ಕಂಡು ಬಂದಿತ್ತು.

ಅಧಿವೇಶನದಲ್ಲಿ 80 ಕಾಂಗ್ರೆಸ್ ಶಾಸಕರು, 45 ಬಿಜೆಪಿ ಮತ್ತು 10 ಜೆಡಿಎಸ್ ಶಾಸಕರು ಮಾತ್ರ ಹಾಜರಿರುವುದು ಕಂಡು ಬಂದಿತ್ತು. ಸಿಎಂ ಸಿದ್ದರಾಮಯ್ಯ, ಸಚಿವರಾದ ಎಚ್‌ಕೆ ಪಾಟೀಲ್, ಎಂ.ಬಿ.ಪಾಟೀಲ್, ಸತೀಶ್ ಜಾರಕಿಹೊಳಿ, ಜಿ.ಪರಮೇಶ್ವರ, ಪ್ರಿಯಾಂಕ್ ಖರ್ಗೆ, ಕೃಷ್ಣ ಬೈರೇಗೌಡ ಸೇರಿದಂತೆ ವಿಪಕ್ಷ ನಾಯಕ ಆರ್.ಅಶೋಕ ಮತ್ತಿತರರು ಉಪಸ್ಥಿತರಿದ್ದರು. ಡಿಸಿಎಂ ಡಿಕೆ ಶಿವಕುಮಾರ್ ಮತ್ತು ಸಚಿವ ಜಮೀರ್ ಅಹಮದ್ ಖಾನ್ ತೆಲಂಗಾಣದಲ್ಲಿ ಉಳಿದುಕೊಂಡಿರುವುದರಿಂದ ಅಧಿವೇಶನಕ್ಕೆ ಗೈರು ಹಾಜರಾಗಿದ್ದರು.

ಮೈಸೂರು ಮಿತ್ರ ಬುಧವಾರ 6 ಡಿಸೆಂಬರ್ 2023

ಜ.3ರಿಂದ ರಾಷ್ಟ್ರಮಟ್ಟದ ಬಾಲಕಿಯರ ಹಾಕಿ ಪಂದ್ಯಾವಳಿ

ಸಭೆಯಲ್ಲಿ ಅಗತ್ಯ ಸಿದ್ಧತೆಗೆ ಡಿಸಿ ವೆಂಕಟ್ ರಾಜಾ ಸೂಚನೆ



ಮಡಿಕೇರಿ, ಡಿ.5– 67ನೇ ರಾಷ್ಟ್ರಮಟ್ಟದ ಬಾಲಕಿಯರ ಹಾಕಿ ಪಂದ್ಯಾವಳಿ ಜ.3 ರಿಂದ 8ರ ವರೆಗೆ ಮಡಿಕೇರಿ, ಕೂಡಿಗೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆಯ ಟರ್ಫ್ ಮೈದಾನದಲ್ಲಿ ನಡೆಯಲಿದ್ದು, ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯಾವಳಿಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ ಅವರು, ಕ್ರೀಡಾಪಟುಗಳಿಗೆ, ತೀರ್ಪುಗಾರರು ಹಾಗೂ ತರಬೇತುದಾರರಿಗೆ ವಸತಿ, ಉಪಾಹಾರ, ಊಟ, ಬಿಸಿನೀರು, ಶೌಚಾಲಯ ಸೇರಿದಂತೆ ಎಲ್ಲಾ ಸೌಕರ್ಯ ಕಲ್ಪಿಸಬೇಕು. ಪಂದ್ಯಾವಳಿಗೆ ಯಾವುದೇ ವ್ಯತ್ಯಾಸ ಆಗದಂತೆ ಪೂರ್ವ ತಯಾರಿ ಮಾಡಿಕೊಳ್ಳುವಂತೆ ಆದೇಶಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯೊಂದಿಗೆ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಯುವ ಸಬಲೀಕರಣ ಮತ್ತು ಕ್ರೀಡಾ, ಕೃಷಿ, ತೋಟಗಾರಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಸೆಸ್ಕ್ ಅಧಿಕಾರಿಗಳು ಸಮನ್ವಯತೆಯಿಂದ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಜಿಪಂ ಸಿಇಒ ವರ್ಣಿತ್ ನೇಗಿ ಮಾತನಾಡಿ, ಸ್ಥಳೀಯ ಆಡಳಿತಗಳಿಂದ ಸ್ವಯಂ ಸೇವಕರನ್ನು ನಿಯೋಜಿಸಬೇಕು. ಎಲ್ಲಾ ಇಲಾಖೆಯ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಹಾಕಿ ಪಂದ್ಯಾವಳಿಯ ಯಶಸ್ಸಿಗೆ ಎಲ್ಲರೂ ಕೈಜೋಡಿಸಬೇಕು ಎಂದು ತಿಳಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕರಾದ ಎಂ.ಚಂದ್ರಕಾಂತ್ ಮಾತನಾಡಿ, ಜ.3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಕಿ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಜಿಲ್ಲೆಯ ಬಸವನಹಳ್ಳಿ, ಕೂಡಿಗೆ, ಕುಶಾಲನಗರ, ತೊರೆನೂರು ಶೆಟ್ಟಿಹಳ್ಳಿ, ತಿತಿಮತಿ, ಪೊನ್ನಂಪೇಟೆ, ಮಡಿಕೇರಿಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳು ಸೇರಿದಂತೆ ವಿವಿಧೆಡೆ ವಿದ್ಯಾರ್ಥಿನಿಲಯಗಳಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಪರ್ಣೇಶ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಶಿಕ್ಷಣಾಧಿಕಾರಿ ಮಹದೇವ ಸ್ವಾಮಿ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟರಾಜು, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ ನಾಯಕ್, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕ ಬಸಪ್ಪ, ಜಿಪಂ ಇಂಜಿನಿಯರ್ ಸುರೇಶ್ ಕುಮಾರ್, ಜಿಲ್ಲಾ ಕಾರ್ಮಿಕ ಅಧಿಕಾರಿ ಹರ್ಷವರ್ಧನ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಅನಿತಾ ಭಾಸ್ಕರ್, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ದಿವಾಕರ, ಪ್ರಾದೇಶಿಕ ಸಾರಿಗೆ ಕಚೇರಿಯ ರೀಟಾ ಇತರರು ಇದ್ದರು.

ವಿವಿಧ ರಾಜ್ಯಗಳ 40 ತಂಡಗಳು ಭಾಗಿ

ಪಂದ್ಯಾವಳಿಗೆ ವಿವಿಧ ರಾಜ್ಯಗಳಿಂದ ಹಾಕಿ ತಂಡಗಳು ಆಗಮಿಸಲಿದ್ದು, 38 ರಿಂದ 40 ತಂಡಗಳು ಭಾಗವಹಿಸುವ ಸಾಧ್ಯತೆ ಇದೆ ಎಂದು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಸದಾಶಿವ ಪಲ್ಲೇದ್ ಸಭೆಯಲ್ಲಿ ತಿಳಿಸಿದರು. ಒಂದು ತಂಡದಲ್ಲಿ 18 ಆಟಗಾರರು, ಒಬ್ಬ ತರಬೇತುದಾರ, ಒಬ್ಬ ವ್ಯವಸ್ಥಾಪಕರು, ಒಬ್ಬ ಜನರಲ್ ಮ್ಯಾನೇಜರ್ ಭಾಗವಹಿಸಲಿದ್ದು, ಒಟ್ಟು 840 ಆಟಗಾರರು, 40 ರಿಂದ 50 ತೀರ್ಪುಗಾರರು, ರಾಜ್ಯಮಟ್ಟದ 20 ಅಧಿಕಾರಿಗಳು ಮತ್ತು ಆತಿಥೀಗಳನ್ನೊಳಗೊಂಡಂತೆ ಒಟ್ಟು 950 ಜನರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮಾಹಿತಿ ನೀಡಿದರು.

ದಾಖಲೆ ಪಡೆಯಲು ಕೊಡವರಿಗೆ ಅನ್ಯಾಯ

ಜಿಲ್ಲಾಧಿಕಾರಿಗೆ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮನವಿ ಸಲ್ಲಿಕೆ

ಮಡಿಕೇರಿ, ಡಿ.5–ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮಂಡಿಸಿದ ಹಕ್ಕೊತ್ತಾಯದ ಹಿನ್ನೆಲೆಯಲ್ಲಿ ಡಾ.ದ್ವಾರಕನಾಥ್ ಆಯೋಗದ ವರದಿ ಮತ್ತು ಹೈಕೋರ್ಟ್‌ನ ಸ್ಪಷ್ಟ ನಿರ್ದೇಶನವಿದ್ದರೂ ಸರ್ಕಾರಿ ದಾಖಲೆಗಳಲ್ಲಿ ಕೊಡವರನ್ನು 'ಕೊಡವ' ಎಂದು ನಮೂದಿಸುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿ 2 ತಿಂಗಳೇ ಕಳೆದಿದೆ. ಆದರೂ ಸರ್ಕಾರದ ಸಾಫ್ಟ್‌ವೇರ್‌ನಲ್ಲಿ ಈ ಬದಲಾವಣೆಯನ್ನು ಅಪ್‌ಲೋಡ್ ಮಾಡಿಲ್ಲ. ಇದರಿಂದ ಕೊಡವರಿಗೆ ದಾಖಲೆಗಳನ್ನು ಪಡೆಯಲು ಅನ್ಯಾಯವಾಗುತ್ತಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಈ ವಿಚಾರದಲ್ಲಿ ಆಡಳಿತಾಂಗ ದಿವ್ಯ ನಿರ್ಲಕ್ಷ್ಯ ವಹಿಸುತ್ತಿದೆ. ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಸಮಾಜ ವಿಜ್ಞಾನಿ ಡಾ.ಸಿ.ಎಸ್.ದ್ವಾರಕನಾಥ್ ಅವರನ್ನು ಸಿಎನ್‌ಸಿ ಕೊಡಗಿಗೆ ಆಹ್ವಾನಿಸಿ, ಕೊಡವರ ಸಮಗ್ರ ಸಾಮಾಜಿಕ, ಚಾರಿತ್ರಿಕ ಹಿನ್ನೆಲೆ ಮತ್ತು ದಾಖಲೆಗಳನ್ನು ಒದಗಿಸುವುದರೊಂದಿಗೆ ಆಯೋಗದ ಕರೆಯಂತೆ ಬೆಂಗಳೂರಿನ ಆಯೋಗದ ನ್ಯಾಯಾಲಯದಲ್ಲಿ ಈ ಸಂಬಂಧ ಸುದೀರ್ಘ ಜ್ಞಾಪನ ಪತ್ರ ಸಲ್ಲಿಸಲಾಗಿದೆ. ಅದರಂತೆ ಆಯೋಗ 'ಕೊಡಗರು' ಬದಲು 'ಕೊಡವ' ಎಂದು ಅದರ ಶಾಸ್ತ್ರೀಯ ನಾಮವನ್ನು ಸರ್ಕಾರಿ ದಾಖಲೆಗಳಲ್ಲಿ ಅಳವಡಿಸಲು ಶಿಫಾರಸ್ಸು ಮಾಡಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.



ಸದರಿ ಶಿಫಾರಸ್ಸನ್ನು ಒಪ್ಪಿದ ಸರ್ಕಾರ ನಂತರ ಬದಲಾದ ಅಧಿಕಾರ ವ್ಯವಸ್ಥೆಯಲ್ಲಿ ತಾನೇ ಒಪ್ಪಿದ ಆದೇಶವನ್ನು ಕಸದ ಬುಟ್ಟಿ ಸೇರಿಸಿತು. ಈ ಸಂಬಂಧ ಸಿಎನ್‌ಸಿ ಹೈಕೋರ್ಟ್ ಮೊರೆ ಹೋಯಿತು. ಕಳೆದ 14 ವರ್ಷಗಳಿಂದ ಸಿಎನ್‌ಸಿ ಸಂಘಟನೆ ನಡೆಸಿದ ಹೋರಾಟದ ಫಲವಾಗಿ ನ್ಯಾಯಾಲಯ ನೀಡಿದ ಆದೇಶದ ಹಿನ್ನೆಲೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ದಾಖಲೆಗಳಲ್ಲಿ ಕೊಡವರನ್ನು 'ಕೊಡವ' ಎಂದು ನಮೂದಿಸಲು ಅಧಿಕೃತ ಸೂಚನೆಯನ್ನು ನೀಡಿದೆ. ಆದರೆ, ಇದುವರೆಗೂ ಈ ಪ್ರಕ್ರಿಯೆ ಜಾರಿಯಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇದು ಸಾಂವಿಧಾನಿಕ ಮತ್ತು ಆಡಳಿತಾತ್ಮಕ ಹಕ್ಕಿನ ಉಲ್ಲಂಘನೆಯಾಗಿದೆ. ಆಡಳಿತಾತ್ಮಕ ಅಧಿಕಾರಿಗಳು ಅಸಡ್ಡೆ ತೋರುತ್ತಿರುವುದರಿಂದ ಕೊಡವರು ಇಂದು ಅತಂತ್ರ ಪರಿಸ್ಥಿತಿ ಅನುಭವಿಸುತ್ತಿದ್ದು, ಸರ್ಕಾರದ ಕಲ್ಯಾಣ ರಾಜ್ಯ ವ್ಯವಸ್ಥೆಯ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಕೊಡವರು 'ಕೊಡವ' ನಾಮಕರಣದಡಿಯಲ್ಲಿ ಜಾತಿ ಪ್ರಮಾಣಪತ್ರ ಪಡೆಯುವುದರಿಂದ ವಂಚಿತರಾಗುತ್ತಿದ್ದಾರೆ. ಈ ಅನ್ಯಾಯ ಪ್ರಜಾಪ್ರಭುತ್ವ ಭಾರತದಲ್ಲಿ 21ನೇ ಶತಮಾನದ ಅತ್ಯಂತ ದೊಡ್ಡ ದುರಂತವಾಗಿದೆ ಎಂದು ಆರೋಪಿಸಿದರು.

ನ್ಯಾಯಾಲಯದ ತೀರ್ಪು, ಆಯೋಗದ ಶಿಫಾರಸ್ಸಿಗೆ ಮತ್ತು ಸರ್ಕಾರಿ ಆದೇಶಕ್ಕೆ ಗೌರವ ನೀಡುವ ಕೆಲಸ ಆಗಬೇಕು. 'ಕೊಡವ' ನಾಮಕರಣವನ್ನು ಸಾಫ್ಟ್‌ವೇರ್‌ಗೆ ಅಪ್‌ಲೋಡ್ ಮಾಡಿ 'ಕೊಡಗರು' ಪದ ಬಳಕೆಯನ್ನು ಕೈಬಿಟ್ಟು ಆಡಳಿತ ಲೋಪ ಸರಿಪಡಿಸಬೇಕು. ಮತ್ತಷ್ಟು ವಿಳಂಬವಿಲ್ಲದೆ 'ಕೊಡವ' ಶಾಸ್ತ್ರೀಯ ನಾಮಕರಣವನ್ನು ಸಾಫ್ಟ್‌ವೇರ್‌ಗೆ ಅಪ್‌ಲೋಡ್ ಮಾಡುವ ಮೂಲಕ ಡಾ.ದ್ವಾರಕನಾಥ್ ಆಯೋಗದ ವರದಿಯನ್ನು ಜಾರಿಗೊಳಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಕಾಯಂಗೆ ಆಗ್ರಹಿಸಿ ಅತಿಥಿ ಉಪನ್ಯಾಸಕರ ಪ್ರತಿಭಟನೆ



ಮಡಿಕೇರಿ, ಡಿ.5–ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವಂತೆ ಆಗ್ರಹಿಸಿ ಕೊಡಗು ಜಿಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದಿಂದ ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಯಿತು.

ಸಂಘದ ರಾಜ್ಯಾಧ್ಯಕ್ಷ ಹನುಮಂತಗೌಡ ಕಲ್ಮಣಿ ಹಾಗೂ ಜಿಲ್ಲಾಧ್ಯಕ್ಷ ಎಂ.ಎ.ಶ್ಯಾಮ್ ಪ್ರಸಾದ್ ನೇತೃತ್ವದಲ್ಲಿ ನಗರದ ಜನರಲ್ ತಿಮ್ಮಯ್ಯ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಅತಿಥಿ ಉಪನ್ಯಾಸಕರು ಘೋಷಣೆಯೊಂದಿಗೆ ಮೆರವಣಿಗೆ ನಡೆಸಿದರು. ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 9 ಸಾವಿರ ಅತಿಥಿ ಉಪನ್ಯಾಸಕರು ಸೇವಾ ಭದ್ರತೆ ಇಲ್ಲದೆ ಸಂಕಷ್ಟದಲ್ಲಿದ್ದಾರೆ. ಸರ್ಕಾರ ಇವರನ್ನು ಜೀತದಂತೆ ನಡೆಸಿಕೊಳ್ಳುತ್ತಿದೆ. ಆದ್ದರಿಂದ ಕಾಯಂಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಐಟಿಯುಸಿ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಎಂ.ಸೋಮಪ್ಪ, ಮಂಗಳೂರು ವಿವಿಯ ಮಾಜಿ ಸೆನೆಟರ್ ಹರೀಶ್ ಆಚಾರ್ಯ, ಸಂಘದ ರಾಜ್ಯ ಕಾರ್ಯದರ್ಶಿ ಪೀಟರ್ ವಿನೋದ್ ಚಂದ್, ಹಾವೇರಿ ಜಿಲ್ಲಾಧ್ಯಕ್ಷ ಕಾಂತೇಶ್ ರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಮಾದಪ್ಪ, ಖಜಾಂಚಿ ಮೋಹನ್, ಮಹಿಳಾ ಘಟಕದ ಡೀನಾ, ಸದಸ್ಯರಾದ ಸುನಿಲ್, ಕೆ.ಜಿ.ಧನ್ಯ ಪಾಲ್ಗೊಂಡಿದ್ದರು.

ಕಳ್ಳನ ಬಂಧನ, ನಗದು, ಚಿನ್ನಾಭರಣ ವಶ

ಕುಶಾಲನಗರ, ಡಿ.5–ಸಮೀಪದ ಬಾಳುಗೋಡು ಗ್ರಾಮದಲ್ಲಿ ಮನೆಗೆ ನುಗ್ಗಿ ನಗದು ಹಾಗೂ ಚಿನ್ನಾಭರಣ ದೋಚಿದ್ದ ಕಳ್ಳನನ್ನು ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ರಂಗಸಮುದ್ರ ಗ್ರಾಮದಲ್ಲಿ ವಾಸವಿದ್ದ ಅಸ್ಸಾಂ ಮೂಲದ ಸೈಫುಲ್ ಇಸ್ಲಾಂ (33) ಬಂಧಿತ ಆರೋಪಿ. ಈತ ಡಿ.2ರಂದು ರಾತ್ರಿ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಬಾಳಗೋಡು ಗ್ರಾಮದ ಶರೀಫ್ ಎಂಬುವರ ಮನೆಗೆ ನುಗ್ಗಿ ಬೀರುವಿನಲ್ಲಿದ್ದ 5 ಸಾವಿರ ರೂ. ನಗದು, 47 ಗ್ರಾಂ ಚಿನ್ನಾಭರಣ ಹಾಗೂ 200 ಗ್ರಾಂ ಬೆಳ್ಳಿ ವಸ್ತುಗಳನ್ನು ಕಳವು ಮಾಡಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಈತನನ್ನು ಪತ್ತೆಹಚ್ಚಿ ಬಂಧಿಸಿ, 1 ಸಾವಿರ ರೂ. ನಗದು, 47 ಗ್ರಾಂ ಚಿನ್ನಾಭರಣ ಹಾಗೂ 200 ಗ್ರಾಂ ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಡಿವೈಎಸ್ಪಿ ಆರ್.ವಿ.ಗಂಗಾಧರಪ್ಪ, ವೃತ್ತ ನಿರೀಕ್ಷಕ ಕೆ.ರಾಜೇಶ್, ಗ್ರಾಮಾಂತರ ಠಾಣಾಧಿಕಾರಿ ಮೋಹನ್ ರಾಜು, ಕೆ.ಹೆಚ್.ಭಾರತಿ, ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಪೊಲೀಸರ ಸೂಚನೆ: ಹೊರರಾಜ್ಯ ಅಥವಾ ಹೊರ ಜಿಲ್ಲೆಗಳಿಂದ ಕೂಲಿಗೆ ಬರುವವರ ಹಿನ್ನೆಲೆಯಲ್ಲಿ ಪರಿಶೀಲಿಸಿಕೊಳ್ಳಬೇಕು. ಕೆಲಸಕ್ಕೆ ಸೇರಿಸಿಕೊಂಡ ವ್ಯಕ್ತಿಗಳ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು. ಯಾವುದೇ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಅಥವಾ ಸಹಾಯವಾಣಿ 112ಕ್ಕೆ ಕರೆ ಮಾಡುವಂತೆ ಪೊಲೀಸರು ತಿಳಿಸಿದ್ದಾರೆ.

ಗಾಂಜಾ ಮಾರುತ್ತಿದ್ದವನ ಬಂಧನ

ವಿರಾಜಪೇಟೆ, ಡಿ.5– ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ವಿರಾಜಪೇಟೆ ಪೊಲೀಸರು ಮಾಲು ಸಹಿತ ಬಂಧಿಸಿದ್ದಾರೆ.



ವಿರಾಜಪೇಟೆಯ ಕಡಂಗ ಮರೂರು ಗ್ರಾಮದ ನಿವಾಸಿಯಾದ ಅಸ್ಸಾಂ ಮೂಲದ ಅಬ್ದುಲ್ ಮಜೀದ್ (31) ಬಂಧಿತ ಆರೋಪಿ. ಈತ ಕಡಂಗಮರೂರು–ಬೊಳ್ಳುಮಾಡು ಜಂಕ್ಷನ್ ಬಳಿ ಸೋಮವಾರ ನಿಷೇಧಿತ ಮಾದಕ ವಸ್ತು ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು, ಆರೋಪಿ ಅಬ್ದುಲ್ ಮಜೀದ್‌ನನ್ನು ಬಂಧಿಸಿದರು. ಈತನ ಬಳಿಯಿಂದ 300 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ವಿರಾಜಪೇಟೆ ಉಪವಿಭಾಗದ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ಸಿಪಿಐ ಬಿ.ಎಸ್.ಶಿವರುದ್ರ, ಪಿಎಸ್‌ಐ ಸಿ.ಸಿ.ಮಂಜುನಾಥ, ಬಿ.ಎಸ್.ವಾಣಿಶ್ರೀ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಬಸ್ ಡಿಕ್ಕಿ: ಕಾರು ಚಾಲಕನಿಗೆ ತೀವ್ರ ಗಾಯ

ನಾಪೋಕ್ಲು, ಡಿ.5–ಖಾಸಗಿ ಬಸ್ ಮತ್ತು ಕಾರು ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಕಾರು ಚಾಲಕ ಗಂಭೀರವಾಗಿ ಗಾಯಗೊಂಡ



ಘಟನೆ ಸಮೀಪದ ಮುತ್ತರ್ಮುಡಿಯ ಮಡಿಕೇರಿ–ಮೂರ್ನಾಡು ರಸ್ತೆಯಲ್ಲಿ ಮಂಗಳವಾರ ನಡೆದಿದೆ.

ಎಮ್ಮೆಮಾಡಿನ ನಿವಾಸಿ ಹಾಗೂ ಎಸ್‌ಎಸ್‌ಎಫ್ ಮಡಿಕೇರಿ ವಲಯದ ಉಪಾಧ್ಯಕ್ಷ ಉಸ್ತಾದ್ ಇಬ್ರಾಹಿಂ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈತ ಕಾರಿನಲ್ಲಿ ಮೂರ್ನಾಡು ಕಡೆಯಿಂದ ಮಡಿಕೇರಿಗೆ ಹೋಗುತ್ತಿದ್ದು, ಇದೇ ವೇಳೆ ಮಡಿಕೇರಿ ಕಡೆಯಿಂದ ಮೂರ್ನಾಡು ಮಾರ್ಗವಾಗಿ ವಿರಾಜಪೇಟೆಗೆ ಹೋಗುತ್ತಿದ್ದ ಬಸ್ ನಡುವೆ ಡಿಕ್ಕಿ ಸಂಭವಿಸಿದೆ. ಕಾರು ಸಂಪೂರ್ಣವಾಗಿ ಜಖಂಗೊಂಡಿದ್ದು, ಉಸ್ತಾದ್ ಇಬ್ರಾಹಿಂ ಅವರ ತಲೆ ಹಾಗೂ ಕಾಲಿಗೆ ತೀವ್ರ ಗಾಯವಾಗಿದೆ. ತಕ್ಷಣ ಈತನನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಸಾಗಿಸಿ, ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಮಂಗಳೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬ್ಲಾಕ್ ಬೆಲ್ಟ್‌ನಲ್ಲಿ ಪಿ.ಡಿ.ಶ್ರಾವ್ಯ ಪ್ರಥಮ



ನಾಪೋಕ್ಲು, ಡಿ.5– ಮೈಸೂರಿನಲ್ಲಿ ಭಾನುವಾರ ನಡೆದ ನ್ಯಾಷನಲ್ ಓಪನ್ ಕರಾಟೆ ಚಾಂಪಿಯನ್‌ಶಿಪ್‌ನ ಬ್ಲಾಕ್‌ಬೆಲ್ಟ್ ವಿಭಾಗದಲ್ಲಿ ಮಡಿಕೇರಿ ಕ್ರೀಡಾ ಶಾಲೆಯ ವಿದ್ಯಾರ್ಥಿನಿ ಪಿ.ಡಿ.ಶ್ರಾವ್ಯ ಪ್ರಥಮ ಮತ್ತು ತೃತೀಯ ಸ್ಥಾನ ಪಡೆದಿರುತ್ತಾರೆ. ಈಕೆ ಕರಾಟೆ ತರಬೇತುದಾರ ಸೆನ್ ಸೈ ಚಂದನ್ ಅವರ ಶಿಷ್ಯೆ. ಮಡಿಕೇರಿ ಜೂನಿಯರ್ ಕಾಲೇಜಿನ ವಿದ್ಯಾರ್ಥಿಯಾಗಿದ್ದು, ಸಮೀಪದ ಕುಂಜಿಲ ಗ್ರಾಮದ ದೇವಯ್ಯ ಮತ್ತು ಚಿತ್ರ ದಂಪತಿಯ ಪುತ್ರಿ.

ಯುವಜನತೆಗೆ ದೇಶ ಕಟ್ಟುವ ಶಕ್ತಿ ಇದೆ

• ಎಡಿಸಿ ಗೀತಾ ಹುಡೇದ ಅಭಿಮತ • ಚಾ.ನಗರದಲ್ಲಿ ಜಿಲ್ಲಾಮಟ್ಟದ ಯುವಜನೋತ್ಸವ





ಚಾಮರಾಜನಗರ, ಡಿ.5–ಭಾರತ ಅಪಾರ ಯುವಶಕ್ತಿ ಹಾಗೂ ಸಂಪನ್ಮೂಲಗಳನ್ನು ಹೊಂದಿದ್ದು, ಯುವಜನತೆಗೆ ದೇಶ ಕಟ್ಟುವ ಶಕ್ತಿ ಇದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನೆಹರು ಯುವ ಕೇಂದ್ರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಯುವಜನೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಯುವಶಕ್ತಿ ರಾಷ್ಟ್ರದ ಸಂಪತ್ತು. ಸ್ವಾಮಿವಿವೇಕಾನಂದರು ಯುವಶಕ್ತಿಯನ್ನು ಎಚ್ಚರಿಸಿ ಜಾಗೃತಗೊಳಿಸಿದ್ದರು. ಸ್ವಾಮಿವಿವೇಕಾನಂದರ ಜನ್ಮದಿನದ ಅಂಗವಾಗಿ ನಡೆಯುತ್ತಿರುವ ಯುವಜನೋತ್ಸವದ ಹಬ್ಬದಲ್ಲಿ ಎಲ್ಲಾ ಯುವಕ, ಯುವತಿಯರು ಉತ್ಸಾಹದಿಂದ ಪಾಲ್ಗೊಳ್ಳಬೇಕು ಎಂದರು.

ಯುವಜನೋತ್ಸವದಲ್ಲಿ ಕಲಾವಿದರು ಜಾನಪದ ಗೀತೆ, ನೃತ್ಯ, ಚರ್ಚಾಸ್ಪರ್ಧೆ, ಛಾಯಾಚಿತ್ರ ಸ್ಪರ್ಧೆ ಸೇರಿದಂತೆ 8 ಬಗೆಯ ಕಲೆಗಳನ್ನು ಅನಾವರಣಗೊಳಿಸಲಿದ್ದಾರೆ. ಯುವಜನರು ತಮ್ಮಲ್ಲಿರುವ ಕಲಾ ಪ್ರತಿಭೆಗಳನ್ನು ಪ್ರದರ್ಶಿಸಿ ಜಿಲ್ಲೆಗೆ ರಾಷ್ಟ್ರಮಟ್ಟದಲ್ಲಿ ಉತ್ತಮ ಕೀರ್ತಿ ತರಬೇಕು ಎಂದು ತಿಳಿಸಿದರು.

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಸುರೇಶ್ ಋಗ್ವೇದಿ ಮಾತನಾಡಿ, ಯುವಜನೋತ್ಸವ ಪ್ರತಿಭೆಗಳನ್ನು ಹೊರತರಲು ಸಹಕಾರಿಯಾಗಲಿದೆ. ಕಲೆ, ವಾಸ್ತುಶಿಲ್ಪ, ಸಂಗೀತ, ನೃತ್ಯ, ನಂದಿಧ್ವಜ ಕುಣಿತ, ಗೊರಕನ ಕುಣಿತ, ವೀರಗಾಸೆ, ಲಂಬಾಣಿ ಕಲೆಗಳು ಭಾರತದ ಸಾಂಸ್ಕೃತಿಕ ಶ್ರೇಷ್ಠತೆಯ ಮೌಲ್ಯಗಳಾಗಿವೆ. ದೇಶದ ಸಾಂಸ್ಕೃತಿಕ ಶ್ರೇಷ್ಠತೆಗೆ ಯುವಕರು ಶಕ್ತಿ ತುಂಬಬೇಕು. ಸ್ವಾಮಿ ವಿವೇಕಾನಂದರು ರಾಷ್ಟ್ರದ ಯುವಜನರ ಸ್ಫೂರ್ತಿ, ಶಕ್ತಿಯಾಗಿದ್ದು, ಅವರ ಆದರ್ಶ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ಸಮಿತಿ ಸದಸ್ಯ ಶ್ರೀನಿವಾಸ ಪ್ರಸಾದ್ ಮಾತನಾಡಿ, ಚಾಮರಾಜನಗರ ಸಂಪದ್ಭರಿತ ಜನಪದ ಕಲೆಗಳ ಬೀಡಾಗಿದೆ. ತಮ್ಮಲ್ಲಿರುವ ಅಪಾರ ಪ್ರತಿಭೆಗಳನ್ನು ಅನಾವರಣಗೊಳಿಸಲು ಯುವಜನೋತ್ಸವ ಉತ್ತಮ ವೇದಿಕೆಯಾಗಿದೆ. ಜಿಲ್ಲೆಯ ಪ್ರತಿಭೆಗಳು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಬೇಕು ಎಂದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶಿವಸ್ವಾಮಿ, ಕ್ರೀಡಾ ತರಬೇತುದಾರರಾದ ಗಣೇಶ್ ಇತರರು ಕಾರ್ಯಕ್ರಮದಲ್ಲಿ ಇದ್ದರು. ಇದೇ ವೇಳೆ ಜಿಲ್ಲೆಯ ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಯುವಜನತೆ ಮೊಬೈಲ್ ಮೋಡಿಗೆ

ಚಾಮರಾಜನಗರ ಜಿಲ್ಲೆ ಜಾನಪದ ಕಲೆಗಳ ತವರೂರು. ಯುವಜನೋತ್ಸವದಲ್ಲಿ ಯುವಜನರು ಹೆಚ್ಚಾಗಿ ಭಾಗವಹಿಸಬೇಕು. ಇತ್ತೀಚಿನ ದಿನಗಳಲ್ಲಿ ಯುವಜನತೆ ಮೊಬೈಲ್ ಮೋಡಿಗೆ ಒಳಗಾಗಿದ್ದು, ಯುವಜನೋತ್ಸವದಂತಹ ದೊಡ್ಡ ಉತ್ಸವಗಳಲ್ಲಿ ಸ್ಪರ್ಧಾಳುಗಳ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ಜಾನಪದ ಕಲಾವಿದ ಹಾಗೂ ರಂಗಕರ್ಮಿ ಸಿ.ಎಂ.ನರಸಿಂಹಮೂರ್ತಿ ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಬುಡಕಟ್ಟು ಜನಜೀವನ ಕುರಿತ ಸಂಶೋಧನಾ ಅಧ್ಯಯನಕ್ಕಾಗಿ ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯ ಭವನ ನಿರ್ಮಾಣವಾಗಬೇಕು ಎಂದು ಮನವಿ ಮಾಡಿದರು. ಜಿಲ್ಲಾ ಯುವಪ್ರಶಸ್ತಿ ಪುರಸ್ಕೃತ ಜಿ. ಬಂಗಾರು, ಯುವಜನೋತ್ಸವದ ಉದ್ದೇಶ ಹಾಗೂ ಮಹತ್ವ ತಿಳಿಸಿದರು.

ಕಾಡೆಮ್ಮೆ ಮಾಂಸ ಬೇಯಿಸುತ್ತಿದ್ದವನ ಬಂಧನ



ಹನೂರು, ಡಿ.5–ಮನೆಯ ಹಿಂಭಾಗ ಕುಕ್ಕರ್‌ನಲ್ಲಿ ಕಾಡೆಮ್ಮೆ ಮಾಂಸ ಬೇಯಿಸುತ್ತಿದ್ದ ಬೇಟೆಗಾರನನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಬಂಧಿಸಿದ್ದಾರೆ.

ಹನೂರು ತಾಲೂಕಿನ ರಾಮಾಪುರ ಹೋಬಳಿಯ ದಿನ್ನಳ್ಳಿ ಗ್ರಾಮದ ಸಯ್ಯದ್ ಮುಜೀರ್ ಬಂಧಿತ. ಈತ ಹನೂರು ಬಫರ್ ವಲಯ ಪಚ್ಚೆದೊಡ್ಡಿಯ ಹುಲಿಯಮ್ಮನ ಅರಣ್ಯ ಪ್ರದೇಶದ ದೊಡ್ಡಕಾಡಿನಲ್ಲಿ ಭಾನುವಾರ ರಾತ್ರಿ ತನ್ನ ಒಂಭತ್ತು ಸ್ನೇಹಿತರೊಂದಿಗೆ ನಾಡಬಂದೂಕಿನಿಂದ ಕಾಡೆಮ್ಮೆ ಬೇಟೆಯಾಡಿ, ಮಾಂಸವನ್ನು ಪಾಲು ಮಾಡಿ ಹಂಚಿಕೊಂಡಿರುವುದಾಗಿ ವಿಚಾರಣೆ ವೇಳೆ ಸತ್ಯ ಒಪ್ಪಿಕೊಂಡಿದ್ದಾನೆ ಉಳಿದ ಆರೋಪಿಗಳ ಪತ್ತೆಗೆ ಅರಣ್ಯಾಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಬೇಟೆಗಾರನ ಬಂಧನ, ನಾಡಬಂದೂಕು ವಶ

ಹನೂರು, ಡಿ.5–ಹನೂರು ಬಫರ್ ವಲಯದ ಪಚ್ಚೆದೊಡ್ಡಿಯ ಕೊತ್ತಗುಳಿ ಗಸ್ತಿನ ಯಡಿಯಾರಹಳ್ಳ ಮೀಸಲು ಅರಣ್ಯ ಪ್ರದೇಶದ ಹೊಸೂರುದೊಡ್ಡಿ ಚೈನ್ ಗೇಟ್‌ನಿಂದ ವರ್ತಿಕೆರೆಗೆ ಹೋಗುವ ಗೇಮ್ ರಸ್ತೆ ಬಳಿ ಕಾಡುಪ್ರಾಣಿ ಬೇಟೆಯಾಡಲು ಪ್ರಯತ್ನಿಸುತ್ತಿದ್ದ ಆರೋಪಿಯನ್ನು ಅರಣ್ಯಾಧಿಕಾರಿಗಳು ಮಂಗಳವಾರ ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಕಾಂಚಳಿ ಗ್ರಾಮದ ಸತೀಶ್‌ಕುಮಾರ್ (28) ಬಂಧಿತ ಆರೋಪಿ. ಈತ ವಾಹನದಲ್ಲಿ ಅಕ್ರಮವಾಗಿ ವನ್ಯಜೀವಿಧಾಮ ಪ್ರವೇಶಿಸಿ, ನಾಡಬಂದೂಕಿನಿಂದ ಕಾಡುಪ್ರಾಣಿ ಬೇಟೆಯಾಡಲು ಯತ್ನಿಸುತ್ತಿದ್ದ. ಇದೇ ವೇಳೆ ಗಸ್ತಿನಲ್ಲಿದ್ದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಈತನನ್ನು ಬಂಧಿಸಿ, ವಾಹನ ಹಾಗೂ ನಾಡಬಂದೂಕನ್ನು ವಶಪಡಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಪಿ.ಈ.ಪ್ರವೀಣ್, ಉಪವಲಯ ಅರಣ್ಯಾಧಿಕಾರಿ ಕೆ.ಪ್ರಸಾದ್, ಗಸ್ತು ಅರಣ್ಯ ಪಾಲಕ ಪರಶುರಾಮ ಭಜಂತ್ರಿ, ವಿ.ನಂದೀಶ್, ಪಿ.ಸುರೇಶ್, ಕೆ.ಎನ್.ಗಣೇಶ್, ಅರಣ್ಯ ವೀಕ್ಷಕ ವಿ.ಪ್ರಭು, ಸಿಬ್ಬಂದಿ ಭಾಗವಹಿಸಿದ್ದರು.

ಅದ್ಧೂರಿ ಹಸಗೂಲಿ ಪಾರ್ವತಾಂಬೆ ಜಾತ್ರೆ

ಬೇಗೂರು(ಗುಂಡ್ಲುಪೇಟೆ),ಡಿ.5– ಗುಂಡ್ಲುಪೇಟೆ ತಾಲೂಕಿನ ಹಸಗೂಲಿ ಗ್ರಾಮದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಮಂಗಳವಾರ ಅಲ್ಲಹಳ್ಳಿ ಪಾರ್ವತಾಂಬೆ ಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.



ಚೆಂಡು ಮಲ್ಲಿಗೆ, ಸೇವಂತಿಗೆ, ಮಲ್ಲಿಗೆ, ಕನಕಾಂಬರ ಹೂವುಗಳಿಂದ ಅಲಂಕೃತವಾದ ರಥದಲ್ಲಿ ಅಲ್ಲಹಳ್ಳಿ ಪಾರ್ವತಾಂಬೆ ದೇವಿಯ ಮೂರ್ತಿಯನ್ನು ಇರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ನೆರೆಹೊರೆಯ ಗ್ರಾಮಗಳಿಂದ ನಂದಿಧ್ವಜ, ಸತ್ತಿಗೆ ಸುರಪಾಣಿ, ಬಾವಲಿಗಳನ್ನು ಹೊತ್ತು ತರಲಾಗಿತ್ತು. ಶಿವಾರ್ಚಕರು ವೀರಗಾಸೆ ನೃತ್ಯ ಪ್ರದರ್ಶನ ನೀಡಿದರು. ಗ್ರಾಮಸ್ಥರು ಮತ್ತು ಯುವಕ ಮಂಡಲದ ಸದಸ್ಯರು ಒಂದೇ ಬಗೆಯ ಉಡುಪು ಧರಿಸಿ ಸಂಭ್ರಮದಿಂದ ನೃತ್ಯ ಮಾಡಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಇದೇ ವೇಳೆ ಭಕ್ತರು ಬಾಯಿಬೀಗ, ಮುಡಿಸೇವೆ ಮುಂತಾದ ಹರಕೆಗಳನ್ನು ಸಲ್ಲಿಸಿದರು.

ಸುಮಾರು 30 ಸಾವಿರ ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು. ಗ್ರಾಮದ ಮುಖಂಡರು ಪ್ರಸಾದ ವ್ಯವಸ್ಥೆ ಮಾಡಿದ್ದರು. ಪಂಜಿನ ಮೆರವಣಿಗೆ ಸಂದರ್ಭ ತಾಲೂಕಿನ ಹಲವು ಗ್ರಾಮಗಳಿಂದ ಆಗಮಿಸಿದ್ದ ಜಾನುವಾರುಗಳ ಕೊಂಬುಗಳಿಗೆ ಪಂಜಿನ ಪೂಜೆ ಸಲ್ಲಿಸಿ ರಥ ಪ್ರದಕ್ಷಿಣೆ ಮಾಡಿ ಹರಕೆ ಸಲ್ಲಿಸಲಾಯಿತು. ಜಾತ್ರೆಗೆ ಸೋಮವಾರ ರಾತ್ರಿಯೇ ಜಾನುವಾರುಗಳು ಹಾಗೂ ನೂರಾರು ಎತ್ತಿನಗಾಡಿಗಳು ಆಗಮಿಸಿದ್ದವು.

ಸೇವಂತಿ ಹೂ ಹರಕೆ: ಹರಕೆ ಹೊತ್ತ ಭಕ್ತರು ಸೇವಂತಿಗೆ ಹೂವು ನೀಡಿದರು. ದೇವಿಗೆ ಹೂವನ್ನು ಅರ್ಪಿಸಿ ಭಕ್ತಿ ಮೆರೆಯುವರು. ಇದರಿಂದ ರಥೋತ್ಸವ ಸಂಪೂರ್ಣ ಸೇವಂತಿ ಹೂ ಮಯವಾಗಿತ್ತು. ಸೇವಂತಿಗೆ ಹೂವಿನ ತೇರಿನಂತೆ ಕಂಡು ಬಂತು. ಇದೇ ವೇಳೆ ಸಿಪಿಐ ವನರಾಜು ಹಾಗೂ ಪಿಎಸ್‌ಐ ಕಿರಣ್‌ಗೌಡ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು

ಕಾಂತರಾಜು ವರದಿ ಜಾರಿಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಡಿ.5–ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಕಾಂತರಾಜು ವರದಿ ಜಾರಿಗೊಳಿಸುವಂತೆ ಆಗ್ರಹಿಸಿ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಮುಖಂಡ ಮಂಗಲ ಶಿವಕುಮಾರ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗೆ ಸಲ್ಲಿಸಿದರು.

ತಲತಲಾಂತರಗಳಿಂದ ಶೋಷಣೆ, ನಿರ್ಲಕ್ಷ್ಯ, ಅಪಮಾನ, ದೌರ್ಜನ್ಯಗಳನ್ನು ಅನುಭವಿಸುತ್ತಿರುವ ಹಿಂದುಳಿದವರ್ಗಗಳಿಗೆ ಇಂದಿಗೂ ಸಾಮಾಜಿಕ ನ್ಯಾಯ ಸಿಕ್ಕಿಲ್ಲ. ಮೈಸೂರು ಅರಸರ ಕಾಲದಲ್ಲಿ 1920ರಲ್ಲಿ ಮಿಲ್ಲರ್ ಆಯೋಗ ರಚನೆ ಮಾಡಿ ಹಿಂದುಳಿದ ವರ್ಗಗಳನ್ನು ಗುರುತಿಸುವ ಕೆಲಸವನ್ನು ಮಾಡಲಾಗಿದೆ. ಆದರೆ, ಸ್ವಾತಂತ್ರ್ಯ ನಂತರ ಬಂದ ಎಲ್ಲಾ ಸರ್ಕಾರಗಳು ಹಿಂದುಳಿದ ವರ್ಗಗಳ ಆಯೋಗಗಳನ್ನು ರಚಿಸಿದರೂ ಸಮರ್ಪಕವಾಗಿ ಜಾರಿ ಮಾಡಲು ಸಾಧ್ಯವಾಗಿಲ್ಲ ಎಂದು ಆರೋಪಿಸಿದರು.

ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ, ಶಿಕ್ಷಣ ನೀಡುವಲ್ಲಿ ಅವರನ್ನು ಮುಖ್ಯವಾಹಿನಿಗೆ ತರಲು ಎಲ್.ಜಿ. ಹಾವನೂರು ವರದಿ, ವೆಂಕಟಸ್ವಾಮಿ ವರದಿ, ಚನ್ನಪ್ಪರೆಡ್ಡಿ ವರದಿಗಳ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರಲು ಸರ್ಕಾರಗಳು ವಿಫಲವಾಗಿವೆ. ಆದ್ದರಿಂದ ಕಾಂತರಾಜು ವರದಿಯನ್ನು ಅಧಿವೇಶನದಲ್ಲಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹನೂರು ವೆಂಕಟೇಶ್, ಜೆ.ಶಿವಮೂರ್ತಿ, ನಟರಾಜೇಗೌಡ, ಸವಿತಾ ಸಮಾಜದ ವೆಂಕಟರಾಮು, ಚಿನ್ನಸ್ವಾಮಿ, ಬಸವಣ್ಣ, ರಂಗಸ್ವಾಮಿ, ಗಾಣಿಗ ಸಮಾಜದ ಬೆಳ್ಳಶೆಟ್ಟಿ, ಲಕ್ಷ್ಮಣ, ಜಯರಾಂ, ಅಂಕಶೆಟ್ಟಿ, ಮಹದೇವಶೆಟ್ಟಿ, 24 ಮನೆ ತೆಲುಗು ಶೆಟ್ಟರ, ಬೇಡಗಂಪಣ ಜನಾಂಗ ಪುಟ್ಟಣ್ಣ, ಮುರುಗೇಶ್, ಮಹೇಶ, ಪ್ರಗೇಶ್, ಬೆಳ್ಳಲುಗೌಂಡರ್, ವಿಜಯಕುಮಾರ್, ಜಗದೀಶ್, ದೇವಾಂಗ ಸಮಾಜದ ಮಧುಚಂದ್ರ, ನಂದೀಶ್ ವಿಶ್ವಕರ್ಮ, ಗೋಪಾಲಕೃಷ್ಣ, ಉಪ್ಪಾರ ಸಮುದಾದ ಕೋಡಿಮೋಳೆ ಮಹದೇವ ಶೆಟ್ಟಿ, ನಾಗರಾಜು, ಚಿನ್ನಸ್ವಾಮಿ, ಮಹೇಶ ಬಂಗಾರು, ಪ್ರಕಾಶ್‌ಶೆಟ್ಟಿ, ಮಹದೇವಶೆಟ್ಟಿ ಬ್ಯಾಡಮೂಡ್ಲು ದೊಡ್ಡಶೆಟ್ಟಿ ಇತರರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಅರ್ಜುನನ ಅಂತ್ಯಕ್ರಿಯೆ

ನೇತೃತ್ವದಲ್ಲಿ ಅರ್ಜುನನ ಕಳೇಬರಕ್ಕೆ ಅರಿಶಿನ-ಕುಂಕುಮ, ಶ್ರೀಗಂಧ ಹಚ್ಚಿ ಪುಣ್ಯಾಹ, ಭೂಮಿ ಪೂಜೆ, ಅಷ್ಟದಿಕ್ಪಾಲಕ ಪೂಜೆ, ಪಂಚಗವ್ಯ ಪ್ರೋಕ್ಷಣೆ, ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು. ಬಳಿಕ ಅರ್ಜುನನಿಗೆ ಸಾಂಪ್ರದಾಯಿಕ ವಸ್ತ್ರವಿರಿಸಿ, ಅಂತ್ಯ ಸಂಸ್ಕಾರಕ್ಕಾಗಿ ಜೆಸಿಬಿಯಿಂದ 15 ಅಡಿ ತೋಡಿದ್ದ ಆಳವಾದ ಗುಂಡಿಗೆ ಪೂಜೆ ಸಲ್ಲಿಸಿ, ದರ್ಬೆ, ಎಳ್ಳು ನೀರು ಹಾಕಿ ಒಂಟಿ ಬಾಳೆ ಎಲೆ ಹಾಸಲಾಯಿತು. ನಂತರ ಕ್ರೇನ್ ಮೂಲಕ ದಕ್ಷಿಣ ದಿಕ್ಕಿಗೆ ಅರ್ಜುನನ ಶಿರವಿಟ್ಟು ಮಲಗಿಸಿ, ಪೂಜೆ ಸಲ್ಲಿಸಲಾಯಿತು. ಮಾವುತರು, ಕಾವಾಡಿಗಳು, ಅರಣ್ಯಾಧಿಕಾರಿಗಳು, ಸಿಬ್ಬಂದಿ, ಸ್ಥಳೀಯರು ಸೇರಿದಂತೆ ಮೈಸೂರು ಇನ್ನಿತರೆಡೆಯಿಂದ ಆಗಮಿಸಿದ್ದ ನೂರಾರು ಮಂದಿ ಅಂತಿಮ ದರ್ಶನ ಪಡೆದು, ಕಣ್ಣೀರಿಟ್ಟರು. ಅಂತಿಮವಾಗಿ ಜೆಸಿಬಿಯಿಂದಲೇ ಗುಂಡಿ ಮುಚ್ಚಿ ಗೌರವ ಸಮರ್ಪಿಸಲಾಯಿತು.

ಶಿಬಿರಕ್ಕೆ ಕೊಂಡೊಯ್ಯಲು ಆಗ್ರಹ: ಮೈಸೂರು ಅರ್ಜುನನ ತವರು. ಆತ ನೆಲೆಸಿದ್ದ ಶಿಬಿರದ ಬಳಿಯೇ ಅಂತ್ಯಕ್ರಿಯೆ ಮಾಡಬೇಕೆಂದು ಅರ್ಜುನನ ಮಾವುತ ವಿನು ಸೇರಿದಂತೆ ವಿವಿಧ ಆನೆಗಳ ಮಾವುತರು ಮನವಿ ಮಾಡಿಕೊಂಡರು. ಈ ವೇಳೆ ಸ್ಥಳದಲ್ಲಿ ಜಮಾಯಿಸಿದ್ದ ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ಸ್ಥಳೀಯರು ಅರ್ಜುನನ ಅಂತ್ಯ ಸಂಸ್ಕಾರ ಆತನಿದ್ದ ಬಳ್ಳೆ ಶಿಬಿರದಲ್ಲೇ ನಡೆಸುವಂತೆ ಆಗ್ರಹಿಸಿ, ಪ್ರತಿಭಟನೆಗೆ ಮುಂದಾದರು. ಈ ವೇಳೆ ಅರಣ್ಯಾಧಿಕಾರಿಗಳು ಅರ್ಜುನನ ಮೃತದೇಹ(ಕಳೇಬರ)ವನ್ನು ಕೊಂಡೊಯ್ಯಲು ಸಾಧ್ಯವಾಗಲ್ಲ. ಆನೆ ಮೃತಪಟ್ಟು ಈಗಾಗಲೇ 24 ಗಂಟೆ ಕಳೆದಿದೆ. ಮೃತದೇಹ ಡಿ-ಕಂಪೋಸ್ ಆಗುತ್ತಿದೆ. ಹಾಗಾಗಿ ಇಲ್ಲಿಯೇ ಅಂತ್ಯ ಸಂಸ್ಕಾರ ಮಾಡಬೇಕು. ಅದಕ್ಕೆ ಎಲ್ಲರೂ ಸಹಕರಿಸಬೇಕೆಂದು ಮನವಿ ಮಾಡಿದರು.

ಆದರೂ, ಅರ್ಜುನನ ಅಂತ್ಯಸಂಸ್ಕಾರ ಮಾಡಿದ ಸ್ಥಳದಲ್ಲಿ ಸ್ಮಾರಕ ನಿರ್ಮಿಸಬೇಕು. ಆದರೆ ಅರಣ್ಯ ಪ್ರದೇಶದಲ್ಲಿ ಅಂತ್ಯಸಂಸ್ಕಾರ ಮಾಡಿದರೆ ಆತನಿಗೆ ನಮಿಸಲು ಜನ ಬರಲಾಗುವುದಿಲ್ಲ. ಬಳ್ಳೆ ಶಿಬಿರದಲ್ಲಿ ರಾಜೇಂದ್ರ ಹಾಗೂ ದ್ರೋಣನ ಸಮಾಧಿಯೂ ಇದೆ. ಅದರ ಪಕ್ಕದಲ್ಲೇ ಅರ್ಜುನನ ಅಂತ್ಯಕ್ರಿಯೆ ಮಾಡಬೇಕೆಂದು ಎಂದು ಸಾರ್ವಜನಿಕರು ಹಾಗೂ ಮಾವುತರು ಪಟ್ಟು ಹಿಡಿದಿದ್ದರಿಂದ ಕೆಲಕಾಲ ಗೊಂದಲ ಉಂಟಾಯಿತು. ಈ ವೇಳೆ ಮಧ್ಯ ಪ್ರವೇಶಿಸಿದ ಪುರೋಹಿತ ಎಸ್.ವಿ.ಪ್ರಹ್ಲಾದ್‌ರಾವ್, ಅರ್ಜುನ ಕಾಳಗದಲ್ಲಿ ನೋವಿನಿಂದ ಮೃತಪಟ್ಟಿದ್ದಾನೆ. ಆತ ಇಹಲೋಕ ತ್ಯಜಿಸಿದ ಸ್ಥಳದಲ್ಲೇ ಅಂತ್ಯಕ್ರಿಯೆ ಮಾಡುವುದು ಸೂಕ್ತ. ಅಂತ್ಯಕ್ರಿಯೆ ವಿಚಾರದಲ್ಲಿ ಗೊಂದಲ ಉಂಟು ಮಾಡಿ ಮತ್ತೆ ಅರ್ಜುನನ ಮನಸ್ಸಿಗೆ ನೋವುಂಟು ಮಾಡಬೇಡಿ ಎಂದು ಜನರ ಮನವೊಲಿಸುವ ಪ್ರಯತ್ನ ಮಾಡಿದರು. ಎಲ್ಲರಿಂದ 'ಗೋವಿಂದಾಯ ನಮಃ' ಹೇಳಿಸಿ, ಅಂತ್ಯಕ್ರಿಯೆಗೆ ಸಮ್ಮತಿ ಪಡೆದರು. ಅನಂತರ ವಿಧಿವಿಧಾನದಂತೆ ಪೂಜಾ ಕಾರ್ಯ ಆರಂಭಿಸಲಾಯಿತು.

ಪೂಜಾ ವಿಧಿವಿಧಾನದ ಬಳಿಕ ನಿಯಮಾನುಸಾರ ಅರ್ಜುನನ ಕಳೇಬರದಿಂದ ದಂತಗಳನ್ನು ಬೇರ್ಪಡಿಸಲಾಯಿತು. ಪೂಜೆಗೂ ಮುನ್ನ ದಂತ ಕಡಿದರೆ ವಿಘ್ನವಾಗುತ್ತದೆ ಎಂಬ ಕಾರಣದಿಂದ ಪೂಜೆ ಮುಗಿಯುವವರೆಗೂ ದಂತ ತೆಗೆದಿರಲಿಲ್ಲ. ದಂತ ಬೇರ್ಪಡಿಸಿದ ಬಳಿಕ ಅರ್ಜುನನ ಮುಖದ ಮೇಲೆ ಬಿಳಿ ವಸ್ತ್ರ ಹೊದಿಸಲಾಯಿತು.

ಸರ್ಕಾರಿ ಗೌರವ: ದಸರಾ ಮಹೋತ್ಸವದಲ್ಲಿ 24 ವರ್ಷ ಭಾಗವಹಿಸಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಸಾಗಿದ್ದ ಅರ್ಜುನ ನಾಡಿನ ಸಾಂಸ್ಕೃತಿಕ ರಾಯಭಾರಿಯಾಗಿ ಕೋಟ್ಯಂತರ ಜನರ ಮನಸ್ಸು ಗೆದ್ದಿದ್ದ. ಈ ಹಿನ್ನೆಲೆಯಲ್ಲಿ ಸರ್ಕಾರಿ ಗೌರವದೊಂದಿಗೆ ಅರ್ಜುನನ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಇದರ ಭಾಗವಾಗಿ ಹಾಸನದ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ, ಅರ್ಜುನನಿಗೆ ಗೌರವ ಸಲ್ಲಿಸಿದರು.

ತುಳಸಿ ಕಟ್ಟೆ: ಪೂಜೆ ಪೂರ್ಣಗೊಂಡ ಬಳಿಕ ಅರ್ಜುನನ ಮೃತದೇಹದ ಮೇಲೆ ಹಿಡಿಮಣ್ಣಿಟ್ಟು ಕಂಬನಿಯೊಂದಿಗೆ ಎಲ್ಲರೂ ನಮಿಸಿದರು. ಮಧ್ಯಾಹ್ನ 12.20ಕ್ಕೆ ಅಂತ್ಯಕ್ರಿಯೆ ವಿಧಿವಿಧಾನ ಆರಂಭಗೊಂಡು 3 ಗಂಟೆವರೆಗೂ ಜರುಗಿತು. ನಂತರ ಸಮಾಧಿ ಮೇಲೆ ಬೃಂದಾವನ ನಿರ್ಮಿಸಿ, ಅದರ ಮೇಲೆ ತುಳಸಿಕಟ್ಟೆಯಿಡಲಾಯಿತು. ಬಳಿಕ ಶಿರಭಾಗದಿಂದ ಮಣ್ಣನ್ನು ತೆಗೆದುಕೊಂಡು ತುಳಸಿಕಟ್ಟೆಗೆ ತುಂಬಿ, ಗಿಡ ನೆಡಲಾಯಿತು. ಕಾಡಾನೆ ಸೆರೆಗೆ ಬಂದು ಉಸಿರುಚೆಲ್ಲಿದ ಅರ್ಜುನನ ಸ್ಮರಣಾರ್ಥ ಯಸಳೂರು ವಲಯದ ದಬ್ಬಳ್ಳಿಕಟ್ಟೆ ಗ್ರಾಮದಲ್ಲಿ ಗ್ರಾಮಸ್ಥರೇ ಸ್ಮಾರಕ ನಿರ್ಮಿಸುವುದಾಗಿ ಹೇಳಿದ ಹಿನ್ನೆಲೆಯಲ್ಲಿ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್, ಅರ್ಜುನನ ಮೃತದೇಹ ಬಿದ್ದಿದ್ದ ಸ್ಥಳದಲ್ಲಿ ಮಣ್ಣನ್ನು ತೆಗೆದು ಅಲ್ಲಿನ ಮುಖಂಡರಿಗೆ ನೀಡಿದರು. ಹೆಚ್.ಡಿ. ಕೋಟೆ ತಾಲೂಕಿನ ಬಳ್ಳೆ ಶಿಬಿರದಲ್ಲೂ ಸ್ಮಾರಕ ನಿರ್ಮಿಸುವ ಇಂಗಿತ ವ್ಯಕ್ತವಾದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಣ್ಣು ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಎಪಿಸಿಸಿಎಫ್ ಶಾಶ್ವತಿ ಮಿಶ್ರ, ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮ, ಎಸ್ಪಿ ಮಹಮದ್ ಸುಜೀತ, ಮೈಸೂರು ವಲಯದ ಸಿಎಫ್ ಡಾ.ಮಾಲತಿ ಪ್ರಿಯಾ, ಹಾಸನ ಡಿಸಿಎಫ್ ಡಿ.ಮೋಹನ್‌ಕುಮಾರ್, ಮೈಸೂರು ಡಿಸಿಎಫ್ ಸೌರಭ್‌ಕುಮಾರ್, ಮೈಸೂರು ಎಡಿಸಿ ಲೋಕನಾಥ್, ಮಡಿಕೇರಿ ಡಿಸಿಎಫ್ ಭಾಸ್ಕರ್, ನಾಗರಹೊಳೆ ಡಿಸಿಎಫ್ ಹರ್ಷಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ರಮೇಶ್, ಅಕ್ರಮ್ ಪಾಶ, ರಂಗರಾಜು, ಕೃತಿಕಾ ಆಲನಹಳ್ಳಿ ಸೇರಿದಂತೆ ಹಲವು ಅಧಿಕಾರಿಗಳಿದ್ದರು.

ಮೈಸೂರು, ಹಾಸನದಲ್ಲಿ ಅರ್ಜುನನ ಸ್ಮಾರಕ ನಿರ್ಮಾಣ

ಹಾಸನ ಜಿಲ್ಲೆ ಯಸಳೂರು ವಲಯದಲ್ಲಿ ಆನೆ ಕಾರ್ಯಾಚರಣೆ ವೇಳೆ ಪುಂಡಾನೆಯ ಜೊತೆಗಿನ ಕಾಳಗದಲ್ಲಿ ನಡೆಸಿ ವೀರಮರಣವನ್ನಪ್ಪಿದ ಅರ್ಜುನನ ಸ್ಮಾರಕವನ್ನು ಹಾಸನ ಹಾಗೂ ಮೈಸೂರಿನಲ್ಲಿ ನಿರ್ಮಿಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಅರ್ಜುನನ ಸಾವಿನ ಬಗ್ಗೆ ತೀವ್ರ ಶೋಕ ವ್ಯಕ್ತಪಡಿಸಿರುವ ಅವರು, ಕ್ಯಾಪ್ಟನ್, ಸೀನಿಯರ್, ಬಲಭೀಮ ಎಂದೇ ಖ್ಯಾತನಾಗಿದ್ದ ಹಾಗೂ ಮೈಸೂರಿನ ಜಗದ್ವಿಖ್ಯಾತ ದಸರಾ ಜಂಬೂ ಸವಾರಿಯಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ಅರ್ಜುನ ಆನೆಯ ಸ್ಮಾರಕವನ್ನು ಹಾಸನ ಮತ್ತು ಮೈಸೂರು ಜಿಲ್ಲೆಯಲ್ಲಿ ನಿರ್ಮಿಸಲಾಗುವುದು.

ನಾಡಿನ ಜನರ ಪ್ರೀತಿಗೆ ಪಾತ್ರನಾಗಿದ್ದ ಅರ್ಜನನ ಸಾವು ಅತ್ಯಂತ ದುಃಖದಾಯಕ. ಅರ್ಜುನ ಮತ್ತು ನಾಡಿನ ಜನತೆಯ ನಡುವೆ ಭಾವನಾತ್ಮಕ ಸಂಬಂಧ ಇತ್ತು. ಈ ಆನೆ ಸಾವು ನಾಡಿನಾದ್ಯಂತ ಇರುವ ಪ್ರಾಣಿ ಪ್ರಿಯರಿಗೆ ಮತ್ತು ಸಾರ್ವಜನಿಕರಿಗೆ ನೋವು ತಂದಿದೆ. ಹಲವು ಹುಲಿ, ಆನೆ ಕಾರ್ಯಾಚರಣೆಗಳಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದ ಅರ್ಜುನನ ಅಂತ್ಯ ಸಂಸ್ಕಾರವನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಗಿದೆ. ಅರ್ಜುನನ ಸೇವೆಯನ್ನು ನಾಡಿನ ಜನರು ಸದಾ ಸ್ಮರಿಸುವಂತೆ ಹಾಸನ ಮತ್ತು ಮೈಸೂರಿನಲ್ಲಿ ಸ್ಮಾರಕ ನಿರ್ಮಿಸಲು ತೀರ್ಮಾನಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ನಾಡಿಗೆ ವಲಸೆ ಬರುವುದ ತಡೆಯಿರಿ

ರೈಲ್ವೆ ಕಂಬಿಗಳನ್ನು ತಡೆಗೋಡೆಯಾಗಿ ನಿರ್ಮಿಸಿ ವಲಸೆ ತಪ್ಪಿಸಿ. ಅರಣ್ಯ ಗಡಿಯಲ್ಲಿ ವಿದ್ಯುತ್ ತಂತಿ ಅಳವಡಿಕೆ ಮತ್ತು ಕಂದಕ ತೋಡುವುದರಿಂದ ಯಾವುದೇ ಪ್ರಯೋಜನವಾಗುತ್ತಿಲ್ಲ. ನಮಗಿಂತ ಕಾಡುಪ್ರಾಣಿಗಳು ಬುದ್ಧಿವಂತವಾಗಿದ್ದು, ಅವುಗಳು ಇವನ್ನು ನುಸುಳಿ ಬರುತ್ತಿವೆ. ಇಲಾಖೆ ಸುರಕ್ಷಾ ಕ್ರಮ ಕೈಗೊಳ್ಳಲು ನಮ್ಮ ಎಲ್ಲಾ ಸಹಕಾರ ಇದೆ ಎಂದರು. ವನ್ಯ ಮೃಗಗಳು ಮತ್ತು ಮಾನವರ ನಡುವಿನ ಸಂಘರ್ಷದಲ್ಲಿ ಉಂಟಾಗುತ್ತಿರುವ ಸಾವನ್ನು ತಪ್ಪಿಸುವಲ್ಲಿ ಅರಣ್ಯ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಲು ಕ್ರಮಕೈಗೊಳ್ಳಬೇಕು. ನೋಡಲ್ ಅಧಿಕಾರಿಗಳಿಗೆ ವಾರದಲ್ಲಿ ಕನಿಷ್ಠ 2 ದಿನ ನಿಯೋಜಿತ ಜಿಲ್ಲೆಯಲ್ಲೇ ಉಳಿದು ಪರಿಸ್ಥಿತಿ ನಿಭಾಯಿಸಲು ಸೂಚಿಸಲಾಗಿದೆ. ಆನೆಗಳ ಸಮಸ್ಯೆ ಇರುವ ಭಾಗದ ಶಾಸಕರೊಂದಿಗೆ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ತೆರಳಿ ಹೆಚ್ಚಿನ ಅನುದಾನಕ್ಕೆ ಮನವಿ ಮಾಡೋಣ. ಕಳೆದ ಏಪ್ರಿಲ್‌ನಿಂದೀಚೆಗೆ ರಾಜ್ಯದಲ್ಲಿ ಮಾನವ-ವನ್ಯಜೀವಿ ಸಂಘರ್ಷದಲ್ಲಿ ಒಟ್ಟು 43 ಜನರು ಸಾವಿಗೀಡಾಗಿದ್ದು, ಈ ಪೈಕಿ 30 ಮಂದಿ ಆನೆ ದಾಳಿಯಿಂದ ಮೃತಪಟ್ಟಿದ್ದಾರೆ.

ಚಾಮರಾಜನಗರದಲ್ಲಿ 10, ಕೊಡಗು ಜಿಲ್ಲೆಯಲ್ಲಿ 7, ರಾಮನಗರ 3, ಬೆಂಗಳೂರು ಮತ್ತು ಮೈಸೂರು, ಹಾಸನ ವೃತ್ತದಲ್ಲಿ ತಲಾ 2, ಶಿವಮೊಗ್ಗದಲ್ಲಿ ಒಬ್ಬರು ಆನೆ ದಾಳಿಯಿಂದ ಸಾವಿಗೀಡಾಗಿದ್ದಾರೆ ಎಂದು ವಿವರಿಸಿದರು.

ಮಹಿಳೆಯರು ಮತ್ತಷ್ಟು 'ಸುರಕ್ಷಾ'

ಘಟನೆಗಳೂ ನಡೆಯುತ್ತಿವೆ. ಮಹಿಳೆಯರ ಮೇಲೆ ಅತ್ಯಾಚಾರ ನಡೆದಿರುವ ನಿದರ್ಶನಗಳೂ ಇವೆ. ಮಹಿಳೆಯರು ಮಾತ್ರವಲ್ಲದೆ ಮಕ್ಕಳ ಹಾಗೂ ವೃದ್ಧರ ಅಪಹರಣ ಕೂಡ ನಡೆದಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಹಾಗೂ ಮಕ್ಕಳ ರಕ್ಷಣೆಯನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ ಪ್ಯಾನಿಕ್ ಬಟನ್-ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ (ವಿಎಲ್‌ಟಿ) ಡಿವೈಸ್ ಅಳವಡಿಕೆಯನ್ನು ಕಡ್ಡಾಯಗೊಳಿಸಿದೆ. ಕೇಂದ್ರ ಸರ್ಕಾರದ ಆದೇಶದಂತೆ ರಾಜ್ಯ ಸರ್ಕಾರ ಪ್ಯಾನಿಕ್ ಬಟನ್-ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ ಅಳವಡಿಕೆಯನ್ನು ಡಿ.1 ರಿಂದಲೇ ಕಡ್ಡಾಯಗೊಳಿಸಿ, ಆದೇಶಿಸಿದೆ. ಯೆಲ್ಲೊ ಬೋರ್ಡ್ ಟ್ಯಾಕ್ಸಿ, ಕ್ಯಾಬ್‌ಗಳು, ಖಾಸಗಿ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳು, ನ್ಯಾಷನಲ್ ಪರ್ಮಿಟ್ ಹೊಂದಿರುವ ಗೂಡ್ಸ್ ವಾಹನಗಳು ಕಡ್ಡಾಯವಾಗಿ ಪ್ಯಾನಿಕ್ ಬಟನ್- ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ ಅಳವಡಿಸಬೇಕು. ಈ ನೂತನ ವ್ಯವಸ್ಥೆಯು ಡಿಸೆಂಬರ್ 1 ರಿಂದಲೇ ಜಾರಿಗೆ ಬಂದಿದೆ. ಮುಂದಿನ ವರ್ಷ 2024ರ ನವೆಂಬರ್ 30 ರೊಳಗೆ ಎಲ್ಲಾ ಸಾರ್ವಜನಿಕ ಸೇವಾ ವಾಹನಗಳು ಕಡ್ಡಾಯವಾಗಿ ಪ್ಯಾನಿಕ್ ಬಟನ್- ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ. ಹಾಗೆಯೇ ಪ್ಯಾನಿಕ್ ಬಟನ್ ಅಳವಡಿಸಲು ಸರ್ಕಾರವೇ ಖಾಸಗಿ ಸಂಸ್ಥೆಯೊಂದನ್ನು ಅಧಿಕೃತಗೊಳಿಸಿದೆ. ಜೊತೆಗೆ ಪ್ಯಾನಿಕ್ ಬಟನ್‌ಗೆ 7,599 ರೂಪಾಯಿ ದರ ಕೂಡ ನಿಗದಿ ಮಾಡಿದೆ. ಯಾರೂ ಹೆಚ್ಚುವರಿ ಹಣ ನೀಡುವಂತಿಲ್ಲ ಎಂದು ಸರ್ಕಾರ ಸೂಚಿಸಿದೆ.

ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಸಾರ್ವಜನಿಕ ಸೇವಾ ವಾಹನಗಳ ಅರ್ಹತಾ ಪತ್ರ ನವೀಕರಣದ ವೇಳೆ ಪ್ಯಾನಿಕ್ ಬಟನ್ ಅಳವಡಿಸಿಕೊಂಡಿರಬೇಕು. ಈ ಸಾಧನ ಅಳವಡಿಕೆ ಖಚಿತಪಡಿಸಿಕೊಂಡು ನವೀಕರಿಸಬೇಕು ಎಂದು ಸಾರಿಗೆ ಇಲಾಖೆಯ ಆಯುಕ್ತರು ಆರ್‌ಟಿಓಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ.

ನಾಳೆಯಿಂದ ಮೈಸೂರಲ್ಲಿ 9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನ

● ಆಹಾರ ವಲಯದ ತಂತ್ರಜ್ಞರು, ವಿದ್ಯಾರ್ಥಿಗಳು ಸೇರಿ 2 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ ● ನಾಲ್ಕು ದಿನಗಳ ಕಾಲ ಆಹಾರೋತ್ಪನ್ನಗಳ ವಿವಿಧ ಆಯಾಮದ ಅವಲೋಕನ


ಪ್ರಮೋದಾ ದೇವಿ ಒಡೆಯರ್


ಎಸ್.ಸೋಮನಾಥ್


ಮೈಸೂರಿನ ಸಿಎಫ್‌ಟಿಆರ್‌ಐನ ಚೆಲುವಾಂಬ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ (ಮಧ್ಯದಲ್ಲಿರುವವರು) ಮಾತನಾಡಿದರು. ಲಕ್ನೋದ ಸಿಎಸ್‌ಐಆರ್-ಐಐಟಿಆರ್‌ನ ನಿರ್ದೇಶಕ ಡಾ.ಎನ್.ಭಾಸ್ಕರ್ (ಎಡದಿಂದ ಮೊದಲನೇಯವರು), ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಸುರೇಶ್ ಡಿ.ಸಖರೆ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.5(ಪಿಎಂ)– ಸಿಎಸ್‌ಐಆರ್-ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ), ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ ಅಂಡ್ ಟೆಕ್ನಾಲಜಿಸ್ಟ್ (ಇಂಡಿಯಾ) (ಆಹಾರ ವಿಜ್ಞಾನಿಗಳು ಮತ್ತು ತಂತ್ರಜ್ಞರ ಸಂಘ) ಜಂಟಿ ಆಶ್ರಯದಲ್ಲಿ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಡಿ.7ರಿಂದ 10ರವರೆಗೆ '9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನ-ಇಫ್‌ಕಾನ್ 2023' ಆಯೋಜಿಸಲಾಗಿದೆ.

ಮೈಸೂರಿನ ಸಿಎಫ್‌ಟಿಆರ್‌ಐನ ಚೆಲುವಾಂಬ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಈ ವಿಷಯ ತಿಳಿಸಿದರು. ಡಿ.7ರಂದು ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಸಂಜೆ 5ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಇಸ್ರೋ ಅಧ್ಯಕ್ಷ ಡಾ.ಎಸ್. ಸೋಮನಾಥ್ ಸಮ್ಮೇಳನ ಉದ್ಘಾಟಿಸಿ, ಸಮ್ಮೇಳನದ ಸ್ಮರಣಿಕೆಯನ್ನೂ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವ ಮೈಸೂರು ರಾಜವಂಶಸ್ಥೆ ಡಾ. ಪ್ರಮೋದಾ ದೇವಿ ಒಡೆಯರ್ ವಸ್ತುಪ್ರದರ್ಶನ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಸಿಎಸ್‌ಐಆರ್ ಮಹಾನಿರ್ದೇಶಕಿ ಡಾ.ಎನ್.ಕಲೈಸೆಲ್ವಿ ಆನ್‌ಲೈನ್ ಮೂಲಕ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಡಿಆರ್‌ಡಿಓ-ಡಿಎಫ್‌ಆರ್‌ಎಲ್ ನಿರ್ದೇಶಕ ಡಾ.ಅನಿಲ್ ದತ್ ಸೆಮ್ವಾಲ್, ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ 15ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಆಹಾರ ಕ್ಷೇತ್ರದಲ್ಲಿನ ಸಾಧನೆಗಾಗಿ ನೀಡಲಾಗುವುದು. ಇದಕ್ಕೂ ಮುನ್ನ ಮಧ್ಯಾಹ್ನ 3ಕ್ಕೆ ಪ್ರೊ.ಎಂ.ಎಸ್. ಸ್ವಾಮಿನಾಥನ್ ಪದ್ಮ ಪ್ರಶಸ್ತಿ ಪುರಸ್ಕೃತ ಉಪನ್ಯಾಸ ಸರಣಿಗೆ ಪದ್ಮಶ್ರೀ ಪುರಸ್ಕೃತ ಡಾ.ಶಶಾಂಕ್ ಆರ್.ಜೋಷಿಯವರು ಚಾಲನೆ ನೀಡಿ, ಉಪನ್ಯಾಸ ನೀಡಲಿದ್ದಾರೆ. ಉದ್ಘಾಟನಾ ಸಮಾರಂಭ ಹೊರತಾಗಿ ಉಳಿದೆಲ್ಲಾ ದಿನಗಳಂದು ಸಿಎಫ್‌ಟಿಆರ್‌ಐ ಆವರಣದಲ್ಲಿ ಸಮ್ಮೇಳನದ ತಾಂತ್ರಿಕ ಗೋಷ್ಠಿ, ಉತ್ಪನ್ನ ಪ್ರದರ್ಶನ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಲಕ್ನೋದ ಸಿಎಸ್‌ಐಆರ್-ಐಐಟಿಆರ್‌ನ ನಿರ್ದೇಶಕರೂ ಆದ ಎಎಫ್‌ಎಸ್‌ಟಿ (ಐ) ಮೈಸೂರು ಅಧ್ಯಕ್ಷ ಡಾ.ಎನ್. ಭಾಸ್ಕರ್ ಮಾತನಾಡಿ, ಇಫ್‌ಕಾನ್ ಸಮ್ಮೇಳನವನ್ನು ಮೈಸೂರಿನ ಸಿಎಫ್‌ಟಿಆರ್‌ಐ ನಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಆಯೋಜಿಸಲಾಗುತ್ತದೆ ಇಡೀ ವಿಶ್ವಾದ್ಯಂತ ಆಹಾರ ಕ್ಷೇತ್ರದ ತಜ್ಞರು ಈ ಸಮ್ಮೇಳನಕ್ಕೆ ಆಗಮಿಸಲಿದ್ದಾರೆ. 1957ರಲ್ಲಿ ಸಿಎಫ್‌ಟಿ ಆರ್‌ಐ ಮೊದಲ ನಿರ್ದೇಶಕರಾಗಿದ್ದ ಡಾ.ವಿ.ಸುಬ್ರಹ್ಮಣ್ಯನವರು ಆಹಾರ ವಿಜ್ಞಾನಿಗಳು ಮತ್ತು ತಂತ್ರಜ್ಞರ ಸಂಘ ಸ್ಥಾಪನೆ ಮಾಡಿದರು ಎಂದು ತಿಳಿಸಿದರು.

ಆಹಾರೋತ್ಪನ್ನಗಳ ಪ್ರದರ್ಶನ: 'ಟ್ರಿಮ್ ಸೇಫ್' ವಿಷಯದಡಿ ಈ ಸಮ್ಮೇಳನ ನಡೆಯುತ್ತಿದ್ದು, ಹೊಸ ಆವಿಷ್ಕಾರ, ಸಂಸ್ಕರಣೆ ಸೇರಿದಂತೆ ಆಹಾರಕ್ಕೆ ಸಂಬಂಧಿಸಿದಂತೆ ವ್ಯಾಪಕವಾದ ಬೆಳಕು ಚಲ್ಲಲಿದೆ. ಸಮ್ಮೇಳನದ ಬಳಿಕ ಆಹಾರ ಕ್ಷೇತ್ರದಲ್ಲಿ ಆಗಬೇಕಿರುವ ಕೆಲಸ ಕಾರ್ಯಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಪತ್ರ ಸಲ್ಲಿಸಲಾಗುವುದು. ಸಮ್ಮೇಳನ ಅಂಗವಾಗಿ ಸಂಸ್ಥೆ ಆವರಣದಲ್ಲಿ ಆಹಾರ ಉತ್ಪನ್ನಗಳ ವಸ್ತು ಪ್ರದರ್ಶನ ಕೂಡ ಏರ್ಪಡಿಸುತ್ತಿದ್ದು, ಸಂಸ್ಥೆಯ ಉತ್ತರ ದ್ವಾರದಿಂದ ವಸ್ತು ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗುವುದು. ಆಹಾರ ಸಂಸ್ಕರಣೆ, ಶೋಧನೆ, ಯಂತ್ರ-ತಂತ್ರಜ್ಞಾನ ಪ್ರದರ್ಶನ ಸೇರಿದಂತೆ ಆಹಾರಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಕೋರ್ಸ್‌ಗಳ ಬಗ್ಗೆಯೂ ಇಲ್ಲಿ ಮಾಹಿತಿ ದೊರೆಯಲಿದೆ ಡಿ.8ರಂದು ಮಧ್ಯಾಹ್ನ 1ರಿಂದ ಸಂಜೆ 5ರವರೆಗೆ ಮತ್ತು ಡಿ.9ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಈ ವಸ್ತು ಪ್ರದರ್ಶನ ನಡೆಯಲಿದೆ ಎಂದು ಹೇಳಿದರು.

ಇದಲ್ಲದೆ, ಅಮೇರಿಕದಲ್ಲಿ ಆಹಾರ ಕ್ಷೇತ್ರದ ಬಗ್ಗೆ ಉನ್ನತ ಶಿಕ್ಷಣದ ಅವಕಾಶದ ಬಗ್ಗೆಯೂ ಗೋಷ್ಠಿ ನಡೆಯಲಿದೆ. ಸಮ್ಮೇಳನದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಇದು ಅನುಕೂಲವಾಗಲಿದೆ. ಡಿ.10ರಂದು ವಾಕಥಾನ್ ಹಮ್ಮಿಕೊಳ್ಳಲಾಗಿದ್ದು, ಅಂದು ಬೆಳಗ್ಗೆ 8ಕ್ಕೆ ಸಿಎಫ್‌ಟಿಆರ್‌ಐ ಸಂಸ್ಥೆ ಆವರಣದಿಂದ ವಾಕಥಾನ್ ಪ್ರಾರಂಭವಾಗಲಿದೆ. ಸಮ್ಮೇಳನದಲ್ಲಿ ಭಾಗವಹಿಸುವವರ ಜೊತೆಗೆ ಸಾರ್ವಜನಿಕರು ಇದರಲ್ಲಿ ಪಾಲ್ಗೊಳ್ಳಬಹುದು. ಅಲ್ಲದೆ, ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳ ಆಯೋಜಿಸಲಾಗುತ್ತಿದೆ. ಆ ಮೂಲಕ ಸಮ್ಮೇಳನದಲ್ಲಿ ಭಾಗವಹಿಸುವ ಸಂಸ್ಥೆಗಳಲ್ಲಿರುವ ಉದ್ಯೋಗಾವಕಾಶದ ಬಗ್ಗೆ ಮಾಹಿತಿ ಒದಗಿಸಲಾಗುವುದು ಎಂದು ವಿವರಿಸಿದರು.

ಡಿ.10ರಂದು ಸಮಾರೋಪ: ಈಗಾಗಲೇ 2,600 ಮಂದಿ ಸಮ್ಮೇಳನದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡಿದ್ದು, ಈ ಪೈಕಿ ಶೇ.50ರಷ್ಟು ವಿದ್ಯಾರ್ಥಿಗಳಾಗಿದ್ದರೆ, ಉಳಿದ ಶೇ.50ರಷ್ಟು ಆಹಾರೋದ್ಯಮಿಗಳು, ಆಹಾರ ವಲಯದ ವೃತ್ತಿಪರರು ಹಾಗೂ ಅಧ್ಯಾಪಕರಾಗಿದ್ದಾರೆ. ರೈತ ಬಾಂಧವರು ಸಮ್ಮೇಳನಕ್ಕೆ ಭೇಟಿ ನೀಡಿ ಇಲ್ಲಿನ ಚಟುವಟಿಕೆಗಳನ್ನು ವೀಕ್ಷಣೆ ಮಾಡಲು ಅವಕಾಶವಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಡಿ.10ರಂದು ಸಿಎಫ್‌ಟಿಆರ್‌ಐನ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಗುರುಗ್ರಾಮ್‌ನ ಎನ್‌ಎಬಿಎಲ್ ಅಧ್ಯಕ್ಷ ಪ್ರೊ.ಎಸ್.ಅಯ್ಯಪ್ಪನ್ ಸಮಾರೋಪ ಭಾಷಣ ಮಾಡಲಿದ್ದಾರೆ ಎಂದರು. ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ. ಸುರೇಶ್ ಡಿ.ಸಖರೆ ಗೋಷ್ಠಿಯಲ್ಲಿದ್ದರು.

ಸಿರಿಧಾನ್ಯ ಆಹಾರೋತ್ಪನ್ನ ; 40ಕ್ಕೂ ಹೆಚ್ಚು ತಂತ್ರಜ್ಞಾನ ಅಭಿವೃದ್ಧಿ

ಮೈಸೂರು,ಡಿ.5(ಪಿಎಂ)– ಸಿರಿಧಾನ್ಯ ಆಹಾರೋತ್ಪನ್ನ ಸಂಬಂಧ ಸಿಎಫ್‌ಟಿಆರ್‌ಐನಲ್ಲಿ 40ಕ್ಕೂ ಹೆಚ್ಚು ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ಅಲ್ಲದೆ, ಸಿರಿಧಾನ್ಯ ಮಿಷನ್ ಭಾಗವಾಗಿ ದೇಶದ ವಿವಿಧ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಸಂಪ್ರದಾಯಿಕ ಮತ್ತು ಬುಡಕಟ್ಟು ಪಾಕವಿಧಾನಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಸಂಸ್ಥೆ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ತಿಳಿಸಿದರು.

ಆ ಮೂಲಕ ಸಿರಿಧಾನ್ಯ ಬಳಕೆಯನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಲಾಗಿದೆ. ಅಲ್ಲದೆ, ಅವುಗಳ ಆರೋಗ್ಯ ಪ್ರಯೋಜನಗಳನ್ನು ಅಧ್ಯಯನ ಮಾಡಲಾಗುವುದು. ಸಿರಿಧಾನ್ಯ ಸಂಬಂಧ ಅಭಿವೃದ್ಧಿಪಡಿಸಿರುವ 40ಕ್ಕೂ ಹೆಚ್ಚು ತಂತ್ರಜ್ಞಾನಗಳ ಪೈಕಿ ಇತ್ತೀಚೆಗೆ 15ಕ್ಕೂ ಹೆಚ್ಚು ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ಸಿರಿಧಾನ್ಯ ಪಾಕವಿಧಾನ ಸಂಬಂಧ ಕೈಪಿಡಿ ಹೊರತರುವ ಕಾರ್ಯ ನಡೆಯುತ್ತಿದೆ. ಸಿರಿಧಾನ್ಯ ಮಿಷನ್‌ನ ನೋಡಲ್ ಏಜೆನ್ಸಿಯಾಗಿ ಮೈಸೂರಿನ ಸಿಎಫ್‌ಟಿಆರ್‌ಐ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಸಿರಿಧಾನ್ಯ ಆಹಾರೋತ್ಪನ್ನಗಳ ವಿಶೇಷ ಪ್ರದರ್ಶನ: ಸಿಎಫ್‌ಟಿಆರ್‌ಐನಲ್ಲಿ ಇನ್‌ಕ್ಯುಬೇಷನ್ ಸೆಂಟರ್ ಸಹ ಇದ್ದು, ಇಲ್ಲಿ ನಮ್ಮ ವಿದ್ಯಾರ್ಥಿಗಳು ಹಾಗೂ ಸ್ಟಾರ್ಟ್‌ಅಪ್‌ಗಳು ಅಗತ್ಯ ಸಂಪನ್ಮೂಲ ಪಡೆಯುತ್ತಿದ್ದಾರೆ. ಇವರ ಪರಿಕಲ್ಪನೆಯ ಉತ್ಪನ್ನಗಳು ಮತ್ತು ಮಾದರಿಗಳ ಪ್ರದರ್ಶನಕ್ಕೂ ಇಫ್‌ಕಾನ್ ಸಮ್ಮೇಳನದಲ್ಲಿ ಅವಕಾಶ ಕಲ್ಪಿಸಲಾಗುವುದು. ಅಂತಾರಾಷ್ಟ್ರೀಯ ಪ್ರತಿನಿಧಿಗಳು ಇವುಗಳನ್ನು ವೀಕ್ಷಣೆ ಮಾಡುವುದರಿಂದ ಅವರ ಉತ್ಪನ್ನಗಳಿಗೆ ಮಾರ್ಕೆಟಿಂಗ್ ವಿಚಾರದಲ್ಲಿ ಅನುಕೂಲವಾಗಲಿದೆ. ವಿಶೇಷವಾಗಿ ಸಿರಿಧಾನ್ಯದ ಆಹಾರ ಉತ್ಪನ್ನಗಳು ಇಲ್ಲಿ ಪ್ರದರ್ಶನಗೊಳ್ಳಲಿವೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಉದ್ಯಮ, ವ್ಯವಹಾರ ಪ್ರಜ್ಞೆ ಬೆಳೆಸುವಲ್ಲಿ ಸಹಕಾರ ಕ್ಷೇತ್ರದ ಪಾತ್ರ ಹಿರಿದು

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಪ್ರಾಯ



ಮೈಸೂರು, ಡಿ.5(ಜಿಎ)–ಗ್ರಾಮೀಣ ಪ್ರದೇಶದಲ್ಲಿ ಉದ್ಯಮ ಮತ್ತು ವ್ಯವಹಾರ ಪ್ರಜ್ಞೆ ಬೆಳೆಸುವಲ್ಲಿ ಸಹಕಾರ ಕ್ಷೇತ್ರದ ಅಪಾರವಾಗಿದ್ದು, ಈ ನಿಟ್ಟಿನಲ್ಲಿ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಹಾಗೂ ತಿ.ನರಸೀಪುರದ ಹನುಮನಾಳುವಿನ ಶಾರದ ಶಿಕ್ಷಣ ಟ್ರಸ್ಟ್ ನಿಂದ ನಗರದ ಸಹಕಾರ ಒಕ್ಕೂಟದ ಸಭಾಂಗಣದಲ್ಲಿ ಮಂಗಳವಾರ ನಡೆದ ಸಹಕಾರ ವಿಷಯ ಕುರಿತು ಪಿಯು ವಿಭಾಗದ ಚರ್ಚಾ ಸ್ಪರ್ಧೆ ಹಾಗೂ ಪ್ರೌಢಶಾಲಾ ವಿಭಾಗದ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ದೇಶವನ್ನು ಪ್ರಪಂಚದ ಮಂಚೂಣಿಗೆ ತರಲು ಉದ್ಯಮಶೀಲತೆ ಮುಖ್ಯ. ಅಂತಹ ವಾತಾವರಣ ಸೃಷ್ಟಿಗೆ ಸಹಕಾರ ಕ್ಷೇತ್ರದ ಕಾರ್ಯ ಪ್ರಮುಖವಾಗಿದ್ದು, ಯುವಜನರಿಗೆ ತಮ್ಮ ಉತ್ಸಾಹಿ ಆಲೋಚನೆಗಳನ್ನು ಕಾರ್ಯಗತಗೊಳಿಸಲು ಈ ಕ್ಷೇತ್ರದಲ್ಲಿ ಅಪಾರ ಅವಕಾಶವಿದೆ. ತಮ್ಮ ಸುತ್ತಲಿನ ಸಮಾಜಕ್ಕೆ ಸೌಕರ್ಯ ಕಲ್ಪಿಸಲು ಅಗತ್ಯ ಸಂಸ್ಥೆಗಳನ್ನು ಕಟ್ಟಲು ಸಹಕಾರ ಕ್ಷೇತ್ರದ ಸಹಾಯ ಮುಖ್ಯ. ಇದು ಗ್ರಾಮೀಣ ಪ್ರದೇಶದ ಆರ್ಥಿಕತೆಯ ಭವಿಷ್ಯವಾಗಿದೆ. ವಾಣಿಜ್ಯ ಮಾತ್ರವಲ್ಲದೇ ಎಲ್ಲ ವಿಭಾಗದ ವಿದ್ಯಾರ್ಥಿಗಳಿಗೂ ಇಲ್ಲಿ ತಿಳಿದುಕೊಳ್ಳಲು ಅನೇಕ ಸಂಗತಿಗಳಿವೆ ಎಂದರು.

ಪ್ರಬಂಧ ಸ್ಪರ್ಧೆಯಲ್ಲಿ ನಗರದ ಬೇಡನ್ ಪೊವೆಲ್ ಪಬ್ಲಿಕ್ ಶಾಲೆಯ ಮಿಶಾ ಪಿ.ಗೌಡ ಪ್ರಥಮ ಸ್ಥಾನ, ದ್ವಿತೀಯ ಸ್ಥಾನವನ್ನು ತಿ.ನರಸೀಪುರದ ಶಾರದಾ ಪ್ರೌಢಶಾಲೆಯ ಪುಣ್ಯಶ್ರೀ ಹಾಗೂ ಮೂರನೇ ಸ್ಥಾನವನ್ನು ಹುಣಸೂರಿನ ಗಾಗೇನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಧುಮಿತ ಪಡೆದುಕೊಂಡರು.

ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ನಗರದ ಸದ್ವಿದ್ಯಾ ಪಿಯು ಕಾಲೇಜಿನ ಎಸ್.ಶಿವರಾಜು, ದ್ವಿತೀಯ ಸ್ಥಾನವನ್ನು ನಂಜನಗೂಡು ತಾಲೂಕು ದೇವನೂರಿನ ಸರ್ಕಾರಿ ಪಿಯು ಕಾಲೇಜಿನ ಶೃತಿ ಪಡೆದರು. ತಿ.ನರಸೀಪುರದ ಬನ್ನೂರಿನ ಸರ್ಕಾರಿ ಪಿಯು ಕಾಲೇಜಿನ ಚಂದು ಹಾಗೂ ನಗರದ ಸದ್ವಿದ್ಯಾ ಪಿಯು ಕಾಲೇಜಿನ ಪಿ.ಟಿ.ಅನಿರುದ್ಧ ಅವರಿಗೆ ಸಮಾಧಾನಕರವಾಗಿ ಮೂರು ಮತ್ತು ನಾಲ್ಕನೇ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಒಕ್ಕೂಟದ ನಿರ್ದೇಶಕ ಎಂ.ಬಿ.ಮಂಜೇಗೌಡ, ಎಚ್.ಎಸ್. ಪ್ರಶಾಂತ್ ತಾತಾಚಾರ್, ಟ್ರಸ್ಟ್ ವ್ಯವಸ್ಥಾಪಕ ಹನುಮನಾಳು ಸಿದ್ದೇಗೌಡ, ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕ ಆರ್.ಮಂಜುನಾಥ್, ಪ್ರೊ.ಮಹೇಂದ್ರ ಕುಮಾರ್, ಚಂದ್ರಶೇಖರ್ ಉಪಸ್ಥಿತರಿದ್ದರು.

ಅರ್ಜುನನಿಗೆ ಮೈಸೂರು ಜನರ ಶ್ರದ್ಧಾಂಜಲಿ



ಮೈಸೂರು, ಡಿ.5(ಬಿಎಲ್‌ಯು)– ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ದುರಂತ ಸಾವಿಗೀಡಾದ ಅರ್ಜುನನಿಗೆ ಮೈಸೂರು ಜನ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಅರ್ಜುನನ ಶ್ರದ್ಧಾಂಜಲಿಯ ಫ್ಲೆಕ್ಸ್‌ಗಳನ್ನು ಮೈಸೂರು ನಗರದ ಹಲವು ಸ್ಥಳಗಳಲ್ಲಿ ಹಾಕಲಾಗಿದೆ. ಈ ಮೂಲಕ ಅರ್ಜುನನ ದುರಂತ ಸಾವಿಗೆ ಮಮ್ಮಲ ಮರುಗಿದ್ದಾರೆ. ಸಾಮಾನ್ಯವಾಗಿ ಗಣ್ಯರು ಸೇರಿದಂತೆ ಇತರರು ಮೃತಪಟ್ಟಾಗ ಅವರ ಅಭಿಮಾನಿಗಳು ಹಾಗೂ ರಾಜಕೀಯ ಪಕ್ಷದ ಕಾರ್ಯಕರ್ತರು ಫ್ಲೆಕ್ಸ್‌ಗಳನ್ನು ಹಾಕುವುದುಂಟು. ಆದರೆ ಇದೇ ಮೊದಲು ಮೈಸೂರಿನ ಸಾಂಸ್ಕೃತಿಕ ಬಳಗದ ಸದಸ್ಯನೇ ಆಗಿದ್ದ, ದಸರಾ ಉತ್ಸವದ ಅಂದಗಾರನಾಗಿದ್ದ ಅರ್ಜುನನ ಅಗಲಿಕೆಯಿಂದ ಅಭಿಮಾನಿಗಳು ಅತೀವ ದುಃಖತಪ್ತರಾಗಿದ್ದಾರೆ. ಮೈಸೂರಿನ ಬಹುತೇಕ ಕಡೆ ಶ್ರದ್ಧಾಂಜಲಿ ಫ್ಲೆಕ್ಸ್‌ಗಳನ್ನು ಹಾಕಿದ್ದಾರೆ.

ನಾಳೆಯಿಂದ ಮೈಸೂರಲ್ಲಿ ಮೈಬಿಲ್ಡ್ ವಸ್ತುಪ್ರದರ್ಶನ

ಐದು ದಿನಗಳ ಕಾಲ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ವೀಕ್ಷಣೆಗೆ ಅವಕಾಶ



ಮೈಸೂರು, ಡಿ.5(ಜಿಎ)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ)ದ ಮೈಸೂರು ಕೇಂದ್ರದಿಂದ ಡಿ.7ರಿಂದ 11ರವರೆಗೆ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಬಿಲ್ಡ್ ಬೃಹತ್ ವಸ್ತು ಪ್ರದರ್ಶನ ಆಯೋಜಿಸಲಾಗಿದೆ ಎಂದು ಮೈಬಿಲ್ಡ್ ಅಧ್ಯಕ್ಷ ಎಂ.ಡಿ.ಚಂದ್ರಶೇಖರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.7ರಂದು ಬೆಳಿಗ್ಗೆ 10ಕ್ಕೆ ಅವಧೂತ ದತ್ತಪೀಠದ ದತ್ತ ವಿಜಯಾನಂದ ಸ್ವಾಮೀಜಿ ವಸ್ತು ಪ್ರದರ್ಶನವನ್ನು ಉದ್ಘಾಟಿಸುವರು. 5 ದಿನಗಳ ಪ್ರದರ್ಶನ ಬೆಳಿಗ್ಗೆ 10 ರಿಂದ ರಾತ್ರಿ 9ರವರೆಗೆ ಜರುಗಲಿದೆ. ವಿನೂತನ ಕಟ್ಟಡ ಸಾಮಗ್ರಿಗಳು, ನವೀನ ಜೀವನ ಶೈಲಿಯ ವಸ್ತುಗಳು ಹಾಗೂ ಸಮೂಹ ವಸತಿ ಯೋಜನೆಗಳ ಪ್ರದರ್ಶನ, ಕಟ್ಟಡ ನಿರ್ಮಾಣದಲ್ಲಿ ಇತ್ತೀಚಿಗೆ ಆವಿಷ್ಕಾರಗೊಂಡಿರುವ ಕಟ್ಟಡ ಸಾಮಗ್ರಿಗಳ ಸಮಗ್ರ ಪರಿಚಯ ಮಾಡಲಾಗುವುದು ಎಂದರು.

ಪ್ರತಿದಿನ ಸಂಜೆ 6.30ರಿಂದ 8.30 ರವರೆಗೆ ಸಾಂಸ್ಕೃತಿಕ, ಮನರಂಜನೆ ಕಾರ್ಯಕ್ರಮಗಳು ನಡೆಯಲಿವೆ. ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಾಯ್ಸ್ ಆಫ್ ಮೈಬಿಲ್ಡ್ ಗಾಯನ ಸ್ಪರ್ಧೆಯೂ ನಡೆಯಲಿದೆ. ಪ್ರದರ್ಶನಕ್ಕೆ 20 ರೂ. ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ಡಿ. 11ರಂದು ಸಂಜೆ 4ಕ್ಕೆ ಸಮಾರೋಪ ನಡೆಯಲಿದ್ದು, ಬಿಎಐ ದಕ್ಷಿಣ ವಿಭಾಗದ ಉಪಾಧ್ಯಕ್ಷ ಎನ್.ಎಸ್.ಮುರಳೀಧರ್ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 94480 49242 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಎಐ ಜಿಲ್ಲಾ ಕೇಂದ್ರದ ಅಧ್ಯಕ್ಷ ನಾಗರಾಜ್ ವಿ.ಭೈರಿ, ಮೈಬಿಲ್ಡ್ 23 ಕಾರ್ಯದರ್ಶಿ ಆರ್.ರಮೇಶ್ ರಾವ್, ಖಜಾಂಚಿ ದಿನೇಶ್ ಉಪಸ್ಥಿತರಿದ್ದರು.


ಬೆಳಗಾವಿ: ಬಿಜೆಪಿ ನಾಯಕನ ಮೇಲೆ ಹಲ್ಲೆ ಆರೋಪ ಕಾಂಗ್ರೆಸ್ ಎಂಎಲ್ ಸಿ ಚನ್ನರಾಜ್ ಹಟ್ಟಿಹೊಳಿ ವಿರುದ್ಧ ಎಫ್‌ಐಆರ್

ಬೆಳಗಾವಿ: ಬಿಜೆಪಿ ನಾಯಕನ ಮೇಲೆ ಹಲ್ಲೆ ಮಾಡಿದ ಆರೋಪದಡಿ ಕಾಂಗ್ರೆಸ್ ಎಂಎಲ್ ಸಿ ಚನ್ನರಾಜ್ ಹಟ್ಟಿಹೊಳಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಬಿಜೆಪಿ ನಾಯಕ ಪೃಥ್ವಿಸಿಂಗ್ ಅವರ ಮೇಲೆ ಸೋಮವಾರ ಸಂಜೆ ಮಾರಣಾಂತಿಕ ಹಲ್ಲೆ ನಡೆದಿತ್ತು. ಆರೋಪಿ ಚನ್ನರಾಜ್ ಹಟ್ಟಿಹೊಳಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಸಹೋದರ.

ಘಟನೆಯೊಂದಿಗೆ ತಮಗೆ ಯಾವುದೇ ಸಂಬಂಧವಿಲ್ಲ ಎಂದು ಸಚಿವೆ ಹೆಬ್ಬಾಳ್ಕರ್ ಹಾಗೂ ಆಕೆಯ ಸಹೋದರ ಹೇಳಿದ್ದಾರೆ. ಪೃಥ್ವಿ ಸಿಂಗ್ ಅವರ ಮೇಲೆ ಬೆಳಗಾವಿಯ ಜಯನಗರ ಹಿಂಡಲಗ ನಿವಾಸದ ಬಳಿ ಮಾರಣಾಂತಿಕ ಹಲ್ಲೆ ನಡೆದಿತ್ತು.

ಉಪನ್ಯಾಸಕರಿಂದ ರಚಿತ 'ವರ್ಕ್ ವಿತ್ ಗ್ರೂಪ್ಸ್' ಪುಸ್ತಕ ಬಿಡುಗಡೆ



ಮೈಸೂರು, ಡಿ.5(ಎಸ್‌ಪಿಎನ್)– ಜೆಎಸ್‌ಎಸ್ ಕಾಲೇಜು ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥ ಡಾ.ಎಂ.ಪಿ. ಸೋಮಶೇಖರ್ ಮತ್ತು ಚಾಮರಾಜನಗರ ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಅತಿಥಿ ಉಪನ್ಯಾಸಕಿ ಪಿ.ಭವ್ಯ ರಚಿತ 'ವರ್ಕ್ ವಿತ್ ಗ್ರೂಪ್ಸ್' ಪುಸ್ತಕವನ್ನು ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ಬಿಡುಗಡೆಗೊಳಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಮೈಸೂರು ಮತ್ತು ಚಾಮರಾಜನಗರ ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ಸಮಾಜ ಕಾರ್ಯ ಅಧ್ಯಯನ ವಿಭಾಗದಲ್ಲಿ ನಿತ್ಯ ಸಂಶೋಧನೆಗಳು ನಡೆಯುತ್ತವೆ. ಅದರಲ್ಲೂ ಸಮಾಜದ ಅಭಿವೃದ್ಧಿಗಾಗಿ ನಡೆಯುವ ಸಂಶೋಧನೆಗಳು ಹತ್ತಾರು ಜನರಿಗೆ ಅನುಕೂಲವಾಗುವಂತಹ ಸಂಶೋಧನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಪುಸ್ತಕದಲ್ಲಿ ಹಿರಿಯರು, ಕಿರಿಯರು ಒಂದು ತಂಡವಾಗಿ ಕೆಲಸ ಮಾಡುವುದು ಹೇಗೆ ಎಂಬುದರ ಕುರಿತು ಉಲ್ಲೇಖವಾಗಿವೆ ಎಂದರು

ಸ್ನಾತಕೋತ್ತರ ವಿಭಾಗದಲ್ಲಿ ಬೋಧನೆ ಜೊತೆಗೆ ಸಂಶೋಧನೆಗೂ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತೇವೆ. ಯಾವ ಪ್ರಾಧ್ಯಾಪಕರು ಹೆಚ್ಚಿನ ಅಧ್ಯಯನ, ನಿತ್ಯ ಸಂಶೋಧನೆಯತ್ತ ಗಮನ ಹರಿಸುತ್ತಾರೋ ಅಂತಹವರಿಗೆ ವಿವಿಯಿಂದಲೂ ಪ್ರೋತ್ಸಾಹಿಸುತ್ತೇವೆ. ಬೆಂಗಳೂರು ವಿವಿ ಪ್ರೊ.ಕೋದಂಡರಾಮು, ಮೈಸೂರು ವಿವಿ ಪ್ರಾಧ್ಯಾಪಕ ಡಾ.ಚಂದ್ರಮೌಳಿ, ಜೆಎಸ್‌ಎಸ್ ಕಾಲೇಜಿನ ಡಾ.ಎಂ.ಪಿ.ಸೋಮಶೇಖರ್ ಸೇರಿದಂತೆ ಇತರರು ಸಮಾಜ ಕಾರ್ಯ ಅಧ್ಯಯನ ವಿಭಾಗದ ಬೆಳವಣಿಗೆಗೆ ರಾಜ್ಯದಲ್ಲಿ ಒಂದು ತಂಡವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಕೈಗೊಂಡಿರುವ ಸಮಾಜ ಕಾರ್ಯಗಳ ಕುರಿತು ಪುಸ್ತಕ ರೂಪದಲ್ಲಿ ಹೊರತಂದಿರುವುದು ಉತ್ತಮ ಸಂಗತಿ ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿ, ಪ್ರಾಧ್ಯಾಪಕರಿಗೂ ವಿವಿಧ ಲೇಖಕರ ಪುಸ್ತಕಗಳ ಓದುವ ಹವ್ಯಾಸ ಹಾಗೂ ಕ್ಷೇತ್ರ ಅಧ್ಯಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದಾಗ ತಮ್ಮತಮ್ಮ ಕ್ಷೇತ್ರದಲ್ಲಿ ಆರೋಗ್ಯಕರ ವಾತಾವರಣ ನಿರ್ಮಿಸಲು ಸಾಧ್ಯವಿದೆ. 'ವರ್ಕ್ ವಿತ್ ಗ್ರೂಪ್ಸ್' ಪುಸ್ತಕದಲ್ಲಿ ಸಮಾಜ ಕಾರ್ಯ ಅಧ್ಯಯನ ಒಂದು ತಂಡವಾಗಿ ಹೇಗೆ ಕೆಲಸ ಮಾಡಬಹುದು ಎಂಬುದರ ಕುರಿತು ಲೇಖಕಿ ಪಿ.ಭವ್ಯ ಹಾಗೂ ಡಾ.ಎಂ.ಪಿ. ಸೋಮಶೇಖರ್ ಪುಸ್ತಕ ಹೊರತಂದಿದ್ದು, ಇತರೆ ವಿದ್ಯಾರ್ಥಿಗಳೂ ಇದನ್ನು ಓದುವಂತೆ ಸಲಹೆ ನೀಡಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘ ದಕ್ಷಿಣ ಪ್ರಾಂತ್ಯದ ಸಂಚಾಲಕ ಮಾ.ವೆಂಕಟ ರಾಮು ಮಾತನಾಡಿ, ಒಂದು ಪುಸ್ತಕ ಎಂದರೆ, ಸಮಚಿತ್ತ, ಸಮಷ್ಟಿ ಬದುಕಿಗೆ ಅನ್ವಯವಾಗಬೇಕು. ಸಮಾಜದಲ್ಲಿ ನಾನು ಏನಾದರೂ ಸೇವೆ ಮಾಡಬೇಕು ಎಂಬುವವರಿಗೆ ಲೇಖಕಿ ಪಿ.ಭವ್ಯ ಮತ್ತು ಡಾ.ಎಂ.ಪಿ.ಸೋಮಶೇಖರ್ ಅವರು, ಸಮಾಜ ಬದಲಾವಣೆ ಕುರಿತು 'ವರ್ಕ್ ವಿತ್ ಗ್ರೂಪ್ಸ್' ಅಕ್ಷರ ರೂಪದಲ್ಲಿ ದಾಖಲಿಸಿದ್ದಾರೆ ಎಂದರು.

ಸೇವಾ ಕ್ಷೇತ್ರದಲ್ಲಿ ತೊಡಗುವ ವೇಳೆ ಸಮುದಾಯ, ಸಮಾಜದಿಂದ ಸಾಕಷ್ಟು ವಿರೋಧಗಳು ಎದುರಾಗುತ್ತವೆ. ಆ ವಿರೋಧವನ್ನು ನಿಭಾಯಿಸಿಕೊಂಡು ಹೋಗುವುದೇ ಒಂದು ತಂಡದ ಬಹುದೊಡ್ಡ ಕಾರ್ಯತಂತ್ರವಾಗಿರುತ್ತದೆ. ಅಂತೆಯೇ ನಾನು ಬಿಎ ಓದುತ್ತಿದ್ದಾಗ ಅಶೋಕಪುರಂನಲ್ಲಿ ಕೇವಲ 12 ಮಂದಿ ಪದವಿ ಓದಿದವರಿದ್ದರು. ಪ್ರಸ್ತುತ ಇದರ ಸಂಖ್ಯೆ ದುಪ್ಪಟ್ಟಾಗಿದೆ ಎಂದರು. ಈ ವೇಳೆ ಅತಿಥಿ ಉಪನ್ಯಾಸಕಿ ಶ್ವೇತನಾಯಕ್ ಇದ್ದರು. ಅಂಬಿಕಾ ಎನ್ ಹೆಗ್ಡೆ ಮತ್ತು ದಾತ್ರಿ ಹೆಗ್ಡೆ ಪ್ರಾರ್ಥಿಸಿದರು.

ಡಿ.10ರಂದು ವಧು-ವರರ ಸಮಾವೇಶ

ಮೈಸೂರು, ಡಿ. 5-ಮೈಸೂರು ಬಲಿಜ ಸೇವಾ ಸಮಿತಿ ವತಿಯಿಂದ ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಆವರಣದಲ್ಲಿ ಬಲಿಜ ಸಮುದಾಯದ ವಧು-ವರರ ಸಮಾವೇಶ ಏರ್ಪಡಿಸಲಾಗಿದೆ. ಡಿ.10ರಂದು ಬೆಳಗ್ಗೆ 10.30ಕ್ಕೆ ನಡೆಯುವ ಈ ಸಮಾವೇಶದಲ್ಲಿ ಮರು ವಿವಾಹಕ್ಕೂ ಅವಕಾಶ ಕಲ್ಪಿಸಲಾಗಿದ್ದು, ಆಸಕ್ತರು ಕೆ.ಲಿಂಗರಾಜು (9008912444) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಜೆಪಿ ಟಿಕೆಟ್ ವಂಚನೆ ಪ್ರಕರಣ: ಚೈತ್ರಾ ಸೇರಿ ಇಬ್ಬರಿಗೆ ಜಾಮೀನು ಮಂಜೂರು

ಬೆಂಗಳೂರು, ಡಿ.5- ಉದ್ಯಮಿಯೊಬ್ಬರಿಗೆ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಭರವಸೆ ನೀಡಿ 5 ಕೋಟಿ ರೂಪಾಯಿ ಪಡೆದು ವಂಚಿಸಿದ ಪ್ರಕರಣ ಸಂಬಂಧ ಬಂಧನಕ್ಕೊಳಗಾಗಿರುವ ಬಲಪಂಥೀಯ ಕಾರ್ಯಕರ್ತೆ ಚೈತ್ರಾ ಹಾಗೂ ಮತ್ತೊಬ್ಬ ಆರೋಪಿ ಶ್ರೀಕಾಂತ್‌ಗೆ ಸೋಮವಾರ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್, ಈ ಇಬ್ಬರಿಗೆ ಜಾಮೀನು ನೀಡಿದೆ. ಇಂದು ಪರಪ್ಪನ ಅಗ್ರಹಾರ ಕಾರಾಗೃಹದಿಂದ ಚೈತ್ರಾ ಹಾಗೂ ಶ್ರೀಕಾಂತ್ ಬಿಡುಗಡೆಯಾಗಲಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಬೈಂದೂರು ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಗೋವಿಂದ ಬಾಬು ಪೂಜಾರಿ ಅವರಿಗೆ ಭರವಸೆ ನೀಡಿ, ಹಣ ಪಡೆದು ವಂಚಿಸಿದ ಆರೋಪದ ಮೇಲೆ ಚೈತ್ರಾ ಮತ್ತು ಇತರ ಎಂಟು ಮಂದಿಯನ್ನು ಕೇಂದ್ರ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದರು.

ವಂಚನೆ ಸಂಬಂಧ ಉದ್ಯಮಿ ಗೋವಿಂದ ಬಾಬು ಪೂಜಾರಿ ಸೆ.8ರಂದು ಬಂಡಿಪಾಳ್ಯ ಠಾಣೆಯಲ್ಲಿ ಚೈತ್ರಾ ಮತ್ತು ಇತರೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದರು. ಹೆಚ್ಚಿನ ತನಿಖೆಗಾಗಿ ಪ್ರಕರಣ ಸಿಸಿಬಿಗೆ ವರ್ಗಾವಣೆ ಆಗಿತ್ತು. ಬಳಿಕ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು, ಚೈತ್ರಾ, ಗಗನ್ ಕಡೂರು, ಹೊಸಪೇಟೆಯ ಸ್ವಾಮೀಜಿ ಹಾಲಶ್ರೀ, ಚನ್ನನಾಯ್ಕ, ಧನರಾಜ್, ಶ್ರೀಕಾಂತ್, ಪ್ರಜ್ವಲ್ ಸೇರಿ 8 ಮಂದಿಯನ್ನು ಬಂಧಿಸಲಾಗಿತ್ತು.

24ನೇ ವಾರ್ಡಿನ ನಿವಾಸಿಗಳಿಗೆ ಉಚಿತ ಆಯುಷ್ಮಾನ್ ಕಾರ್ಡ್ ವಿತರಣೆ



ಮೈಸೂರು, ಡಿ. 5-ಮೈಸೂರಿನ ಮಂಡಿ ಮೊಹಲ್ಲಾದ 24ನೇ ವಾರ್ಡಿನ ಜನರಿಗೆ ಜೀವಧಾರ ಜನಸೇವಾ ಕೇಂದ್ರದ ವತಿಯಿಂದ ನೂರಾರು ಜನರಿಗೆ ಉಚಿತವಾಗಿ ಆಯುಷ್ಮಾನ್ ಕಾರ್ಡನ್ನು ವಿತರಿಸಲಾಯಿತು. ಬಳಿಕ ಮಾತನಾಡಿದ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಬಡತನವು ಆರೋಗ್ಯಕ್ಕೆ ಅಡ್ಡಿಯಾಗಬಾರದು. ಪ್ರತಿಯೊಬ್ಬರಿಗೂ ಉಚಿತವಾಗಿ ಚಿಕಿತ್ಸೆ ನೀಡುವ ಸಲುವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯನ್ನು ಜಾರಿಗೊಳಿಸಿದ್ದು ಅದನ್ನು ಅರ್ಹ ಫಲಾನುಭವಿಗಳು ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ ಆರೋಗ್ಯ ಯೋಜನೆಯ ಲಾಭ ಪಡೆಯಬೇಕು. ಯೋಜನೆಯ ಕಾರ್ಡ್ ಹೊಂದಿದವರಿಗೆ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಸೇವೆ ದೊರೆಯಲಿದೆ. ಜೀವಧಾರ ಜನ ಸೇವಾ ಕೇಂದ್ರದಿಂದ ಯೋಜನೆಯಡಿ 24ನೇ ವಾರ್ಡಿನ ಪ್ರತಿ ಮನೆಗೂ ಅರ್ಹರ ಹೆಸರು ನೋಂದಣಿ ಹಾಗೂ ಸ್ಮಾರ್ಟ್ ಕಾರ್ಡ್ ವಿತರಣೆ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಬಿಜೆಪಿ ಚಾಮರಾಜ ಕ್ಷೇತ್ರದ ಹಿಂದುಳಿದ ವರ್ಗದ ಅಧ್ಯಕ್ಷರಾದ ಸೂರಜ್, 24ನೇ ವಾರ್ಡಿನ ಅಧ್ಯಕ್ಷ ಕೇಬಲ್ ವಿಜಿ, ಬಿಜೆಪಿ ಚಾಮರಾಜ ಕ್ಷೇತ್ರದ ಹಿಂದುಳಿದ ವರ್ಗದ ಪ್ರಧಾನ ಕಾರ್ಯದರ್ಶಿ ಮನ್ ಕಿ ಬಾತ್ ಸಂತೋಷ್, ಸುರೇಂದ್ರ, ರವೀಂದ್ರನಾಥ್, ತೇಜಾವತಿ ಬಾಯ್, ರಾಝಿಕ್, ಸಲೀಂ, ಮುಕ್ತಾರ್ ಪ್ರದೀಪ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಇಂದಿನಿಂದ ಕೊಡವ ಸಮಾಜ ಯುವ ಘಟಕಕ್ಕೆ ನೋಂದಣಿ ಆರಂಭ

ಮೈಸೂರು,ಡಿ.5(ಪಿಎಂ)- ಕೊಡವ ಸಮಾಜ ಯುವ ಘಟಕ ಮೈಸೂರು ಸಂಘಟನೆಯ (ಕೊಡವ ಸಮಾಜ ಯೂತ್ ವಿಂಗ್ ಮೈಸೂರು) ಸದಸ್ಯತ್ವ ಪಡೆಯಲು ಡಿ.6ರಿಂದ ಲಿಂಕ್ ಕಾರ್ಯಾರಂಭಗೊಳ್ಳಲಿದೆ. ಲಿಂಕ್ (https://forms.gle/AG4g6mqm6sm TVa2U9) ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಈಗಾಗಲೇ ಸಂಘಟನೆ ಲಾಂಛನ ಸಿದ್ಧಪಡಿಸಲಾಗಿದೆ. ಸದಸ್ಯತ್ವ ಪಡೆಯುವ ಮೂಲಕ ಸಾಂಸ್ಕೃತಿಕ ಕಾರ್ಯಾಗಾರ, ಕ್ರೀಡಾ ಚಟುವಟಿಕೆ, ವಿಹಾರ ಮತ್ತು ಚಾರಣ, ಸಮುದಾಯ ಶ್ರೇಯೋಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನಗಳು, ಉದ್ಯೋಗಾವಕಾಶ ಕಾರ್ಯಕ್ರಮಗಳು, ವೃತ್ತಿ ಮಾರ್ಗದರ್ಶನ ಸೇರಿದಂತೆ ಮೊದಲಾದ ಪ್ರಯೋಜನಗಳನ್ನು ಪಡೆಯಬಹುದು ಎಂದು ಸಂಘಟನೆ ಅಧ್ಯಕ್ಷ ಕೆ.ವೇದಿತ್ ಉತ್ತಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪ್ಯೂಟರ್ ವಿಜ್ಞಾನ ಶಿಕ್ಷಣ ಕಾರ್ಯಕ್ರಮ

ಮೈಸೂರು, ಡಿ. 5- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸೊಸೈಟಿಯ (ಕೆಆರ್‌ಇಐಎಸ್) 100 ಶಾಲೆಗಳಲ್ಲಿ ಸುಧಾರಿತ ಕೋಡಿಂಗ್ ಮತ್ತು ಎಐ ಕೌಶಲ್ಯಗಳೊಂದಿಗೆ ಕರ್ನಾಟಕದ ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸಲು ಫ್ಯೂಚರ್ ಎಂಜಿನಿಯರ್ ಕಾರ್ಯಕ್ರಮವನ್ನು ವಿಸ್ತರಿಸುವುದಾಗಿ ಘೋಷಿಸಿದೆ. ಅಮೆಜಾನ್‌ನ ಫ್ಯೂಚರ್ ಎಂಜಿನಿಯರ್ ಕಾರ್ಯಕ್ರಮದ ಸುಧಾರಿತ ಕೋಡಿಂಗ್ ಮತ್ತು ಎಐ ಮಾಡ್ಯೂಲ್‌ಗಳಿಂದ ಕರ್ನಾಟಕದ 30 ಜಿಲ್ಲೆಗಳ 13,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದಾರೆ. ಸಮಾನ ಕಂಪ್ಯೂಟರ್ ವಿಜ್ಞಾನ ಶಿಕ್ಷಣಕ್ಕೆ ಅಮೆಜಾನ್‌ನ ಬದ್ಧತೆಯು ಕರ್ನಾಟಕದ 100 ಕೆಆರ್‌ಇಐಎಸ್‌ಶಾಲೆಗಳಿಗೆ ವಿಸ್ತರಿಸಿದೆ ಮತ್ತು ಈ ಪೈಕಿ 30 ಶಾಲೆಗಳು ಡಿಜಿಟಲ್ ಮೂಲಸೌಕರ್ಯಕ್ಕಾಗಿ ಅಮೆಜಾನ್ ಬೆಂಬಲವನ್ನು ಪಡೆಯಲಿವೆ. ಈ ವಿಸ್ತರಣೆಯು ಕರ್ನಾಟಕದ 30 ಜಿಲ್ಲೆಗಳಲ್ಲಿ 6ರಿಂದ 8ನೇ ತರಗತಿಯ 13,000ಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಲಿದೆ.

ಈ ಕಾರ್ಯಕ್ರಮವು ಅಮೆಜಾನ್ ಫ್ಯೂಚರ್ ಎಂಜಿನಿಯರ್ ಕಾರ್ಯಕ್ರಮದ ಅಡಿಯಲ್ಲಿ ಕೆಆರ್‌ಇಐಎಸ್ ಶಾಲೆಗಳಿಗೆ ನೀಡಲಾಗುವ ಕೋಡಿಂಗ್, ತಾರ್ಕಿಕ ಅನುಕ್ರಮ, ಕಲಿಕೆಯ ಲೂಪ್‌ಗಳು ಮತ್ತು ಬ್ಲಾಕ್ ಪ್ರೋಗ್ರಾಮಿಂಗ್‌ನಲ್ಲಿ ಪ್ರಸ್ತುತ ಕೋರ್ಸ್‌ಗಳಿಗೆ ಪೂರಕವಾಗಿರುತ್ತದೆ ಎಂದು ಹಿರಿಯ ಉಪಾಧ್ಯಕ್ಷ ಮತ್ತು ಜನರಲ್ ಕೌನ್ಸೆಲ್ ಡೇವಿಡ್ ಜಪೋಲ್‌ಸ್ಕೈ ಹೇಳಿದರು.



ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ ರೋಟರಿ ಕ್ಲಬ್ ಮಿಡ್‌ಟೌನ್ ಮೈಸೂರು ಸಹಯೋಗದೊಂದಿಗೆ ಪೋಷಕರು ಮತ್ತು ವಿದ್ಯಾರ್ಥಿಗಳಿಗಾಗಿ ಉಚಿತ ಕಣ್ಣಿನ ತಪಾಸಣಾ ಹಾಗೂ ಉಚಿತ ಕನ್ನಡಕ ವಿತರಣಾ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರವನ್ನು ರೋಟರಿ ಕ್ಲಬ್ ಅಧ್ಯಕ್ಷ ಶ್ರೀನಿವಾಸನ್ ಉದ್ಘಾಟಿಸಿ ಮಾತನಾಡಿ, ವಿಶೇಷವಾಗಿ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಅನಂತಗೀತ ಸಂಸ್ಥೆಯ ಅಧ್ಯಕ್ಷ ವೇಣುಗೋಪಾಲ್, ಕಲ್ಲೂರು ಪ್ರಾಂಶುಪಾಲ ಶ್ರೀಕಾಂತ್, ಉಪಪ್ರಾಂಶುಪಾಲ ಲೋಕೇಶ್, ರೋಟರಿ ಕ್ಲಬ್ ನಿರ್ದೇಶಕ ಮೋಹನ್ ಮತ್ತು ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿ ನಾಯಕರಾದ ಪ್ರೇರಣ್ ಎಂ, ಜನನಿ, ಚಿನ್ಮಯ್ ಹಾಜರಿದ್ದರು.

ಮಾನವ ಕಳ್ಳ ಸಾಗಾಣಿಕೆ ತಡೆಗೆ ಅಧಿಕಾರಿಗಳು ಬದ್ಧತೆ ತೋರಬೇಕು

ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಪ್ರಭಾವತಿ ಎಂ.ಹಿರೇಮಠ್ ಸಲಹೆ

ಬರೀ ಒಂದೂವರೆ ವರ್ಷದಲ್ಲಿ ಮೈಸೂರಲ್ಲಿ 664 ಪ್ರಕರಣ ದಾಖಲು



ಮೈಸೂರು, ಡಿ.5(ಬಿಎಲ್‌ಯು)- ಭಾರತ ಮಾತ್ರವಲ್ಲದೆ ಜಾಗತಿಕ ಸಮಸ್ಯೆಯಾಗಿರುವ ಮಾನವ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಅಧಿಕಾರಿಗಳು ಬದ್ಧತೆ ತೋರಬೇಕು ಎಂದು ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಪ್ರಭಾವತಿ ಎಂ.ಹಿರೇಮಠ್ ಸಲಹೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರ ಆಯೋಜಿಸಿದ್ದ ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮಾನವ ಕಳ್ಳ ಸಾಗಾಣಿಕೆ ತಡೆಗೆ 9 ಕಾನೂನುಗಳಿವೆ. ಮಾನವ ಕಳ್ಳ ಸಾಗಾಣಿಕೆಯಲ್ಲಿ ಸಿಲುಕಿರುವವರನ್ನು ರಕ್ಷಿಸಿದ ನಂತರ ಪುನರುಜ್ಜೀವನಗೊಳಿಸಲು ಸರ್ಕಾರದ 17 ಯೋಜನೆಗಳಿವೆ. ಮಾನವ ಕಳ್ಳ ಸಾಗಾಣಿಕೆ ತಡೆಗಟ್ಟಲು, ರಕ್ಷಿಸಲು ಹಾಗೂ ಪುನರುಜ್ಜೀವನಗೊಳಿಸಲು ಸರ್ಕಾರದ 10 ಇಲಾಖೆಗಳು ಕಾರ್ಯ ನಿರ್ವಹಿಸುತ್ತವೆ ಎಂದರು.

ಮಾನವ ಕಳ್ಳ ಸಾಗಾಣಿಕೆ ಪ್ರಕರಣ ಬಹಳ ಸೂಕ್ಷ್ಮ ವಿಚಾರವಾಗಿದ್ದು, ಇದನ್ನು ತಡೆಗಟ್ಟಲು ಅಧಿಕಾರಿಗಳು ಬುದ್ಧಿವಂತಿಕೆಯಿಂದ ಕೆಲಸ ಮಾಡಬೇಕು. ಮಾನವ ಕಳ್ಳ ಸಾಗಾಣಿಕೆಯಿಂದ ರಕ್ಷಿಸಲ್ಪಟ್ಟವರ ಬಗ್ಗೆ ಪ್ರೀತಿ ವಿಶ್ವಾಸ ತೋರಬೇಕು ಎಂದು ಪ್ರಭಾವತಿ ಎಂ. ಹಿರೇಮಠ್ ಅಧಿಕಾರಿ ವೃಂದಕ್ಕೆ ಕಿವಿಮಾತು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ ಒಂದೂವರೆ ವರ್ಷದ ಅವಧಿಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯಲ್ಲಿ 664 ಪ್ರಕರಣಗಳು ದಾಖಲಾಗಿದೆ. ಇದರಲ್ಲಿ 585 ಪ್ರಕರಣ ಒಂದು ವರ್ಷದಲ್ಲಿ ದಾಖಲಾಗಿದೆ. ಇದರಲ್ಲಿ 420 ಮಹಿಳೆಯರಾದರೆ, 164 ಪುರುಷರಾಗಿದ್ದಾರೆ ಎಂದು ಅಂಕಿ ಅಂಶಗಳ ವಿವರ ನೀಡಿದರು.

ಮೈಸೂರು ಜಿಲ್ಲೆಯಲ್ಲಿ 175 ಬಾಲ್ಯ ವಿವಾಹ ಪ್ರಕರಣ ಪತ್ತೆಯಾದರೆ, 109 ಮಕ್ಕಳು ಮನೆ ಬಿಟ್ಟು ಬಂದಿದ್ದಾರೆ. 67 ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದೆ. 48 ಜನರು ಭಿಕ್ಷಾಟನೆ ಮಾಡುತ್ತಿದ್ದರು. ಇವರಲ್ಲಿ 411 ಜನರನ್ನು ರಕ್ಷಿಸಿ ಪೋಷಕರಿಗೆ ಒಪ್ಪಿಸಲಾಗಿದೆ. ಇನ್ನುಳಿದ 130 ಜನರು ಪಾಲನಾ ಸಂರಕ್ಷಣಾ ಸಮಿತಿ ಆಶ್ರಯದಲ್ಲಿದ್ದಾರೆ. 12 ಜನರನ್ನು ದಾನಿಗಳು ದತ್ತು ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು. ಈ ವೇಳೆ ಮಾತನಾಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಬಿ.ಜಿ.ದಿನೇಶ್, ಮಾನವ ಕಳ್ಳ ಸಾಗಾಣಿಕೆ ತಡೆಗೆ ಕಠಿಣ ಕಾನೂನುಗಳಿವೆ. ಆದರೆ ಅದರ ಪರಿಣಾಮಕಾರಿ ಜಾರಿಯಾಗದಿದ್ದರೆ ಮಾನವ ಕಳ್ಳ ಸಾಗಾಣಿಕೆ ತಡೆಗಟ್ಟಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಮಾನವ ಕಳ್ಳ ಸಾಗಾಣಿಕೆಗೆ ಸಿಲುಕಿರುವವರನ್ನು ರಕ್ಷಣೆ ಮಾಡಿ, ಅವರನ್ನು ಪುನರುಜ್ಜೀವನಗೊಳಿಸಬೇಕು. ಸರಿಯಾದ ಸಮಯಕ್ಕೆ ಪುನರುಜ್ಜೀವನಗೊಳಿಸದಿದ್ದರೆ ಅವರು ವೇಶ್ಯಾವಾಟಿಕೆಯಲ್ಲಿ ತೊಡಗುತ್ತಾರೆ, ಮಾದಕ ವಸ್ತುಗಳ ವ್ಯಸನಿಗಳಾಗುತ್ತಾರೆ. ಆದ ಕಾರಣ ಮಾನವ ಕಳ್ಳ ಸಾಗಾಣಿಕಯಲ್ಲಿ ಸಿಲುಕಿರುವವರನ್ನು ರಕ್ಷಣೆ ಮಾಡುವುದು ಎಷ್ಟರ ಮಟ್ಟಿಗೆ ಮುಖ್ಯವೋ, ಅವರಿಗೆ ಪುನರುಜ್ಜೀವನಗೊಳಿಸುವುದು ಅಷ್ಟೆ ಮುಖ್ಯ ಎಂದು ದಿನೇಶ್ ಹೇಳಿದರು. ಮೈಸೂರು, ಮಂಡ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಪತ್ತೆಯಾಗಿದೆ. ಇಂತಹ ಪ್ರಕರಣಗಳು ನಡೆಯದಂತೆ ಸರ್ಕಾರಿ ಸಿಬ್ಬಂದಿ, ಸುತ್ತಮುತ್ತಲಿನ ವಾತಾವರಣ ಗಮನಿಸಬೇಕು. ನಿಮಗೆ ಸಂಶಯ ಕಂಡುಬಂದರೆ ಸನಿಹದ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಹೀಗೆ ಮಾಹಿತಿ ನೀಡುವವರ ಹೆಸರನ್ನು ಬಹಿರಂಗಪಡಿಸದೆ ಗೌಪ್ಯತೆ ಕಾಪಾಡಲಾಗುವುದು ಎಂದು ಮೈಸೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಭರವಸೆ ನೀಡಿದರು.

ಪ್ರತಿಯೊಬ್ಬರಿಗೂ ಕಾನೂನಾತ್ಮಕ ಜವಾಬ್ದಾರಿಗಳಿರುತ್ತವೆ. ಅದನ್ನು ನಿರ್ವಹಿಸಬೇಕು. ಎಲ್ಲಾದರೂ ಮಕ್ಕಳು ಡ್ರಗ್ಸ್ ತೆಗೆದುಕೊಳ್ಳುವುದನ್ನು ನೋಡಿ, ಆ ಉಸಾಬರಿ ನಮಗೇಕೆ ಎಂದು ನಿರ್ಲಕ್ಷ್ಯ ಮಾಡಿದರೆ, ಮುಂದೊಂದು ದಿನ ನಿಮ್ಮ ಮಕ್ಕಳೇ ಆ ಜಾಲದಲ್ಲಿ ಸಿಲುಕಬಹುದು. ಆದ ಕಾರಣ ಪ್ರತಿಯೊಬ್ಬರು ಇಂತಹ ಕಾನೂನು ವಿರೋಧಿ ಚಟುವಟಿಕೆ ತಡೆಗಟ್ಟಲು ಸರ್ಕಾರದ ಜೊತೆ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಅಧಿಕಾರಿಗಳು ನಿಮ್ಮ ಇಲಾಖೆಯ ಅಭಿವೃದ್ಧಿ ಜೊತೆಗೆ ಮಾನವ ಸಂಪನ್ಮೂಲದ ಸುರಕ್ಷತೆಗೆ ಕೂಡ ಮುಂದಾಗಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಹೇಳಿದರು.

ಮೈಸೂರು ಜಿಲ್ಲೆಯ ಪಿಡಿಒಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಮಾನವ ಕಳ್ಳ ಸಾಗಾಣಿಕ ತಡೆ ವಿಶೇಷ ಕಾರ್ಯಪಡೆಯ ಸದಸ್ಯ ವಿಲಿಯಂ ಕ್ರಿಸ್ಟೋಫರ್, ಮಾನವ ಕಳ್ಳ ಸಾಗಾಣಿಕೆ ತಡೆಗಟ್ಟುವ ಬಗ್ಗೆ ಹಾಗೂ ಕಾನೂನು ಕುರಿತು ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ. ಬಸವರಾಜು, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸವಿತಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬ್ರಾಹ್ಮಣ ಧರ್ಮ ಸಹಾಯಸಭಾದ ನೂತನ ಪದಾಧಿಕಾರಿಗಳು

ಮೈಸೂರು, ಡಿ.5-ಮೈಸೂರು ಬ್ರಾಹ್ಮಣ ಧರ್ಮ ಸಹಾಯ ಸಭಾದ 2024, 2025 ಹಾಗೂ 2026ನೇ ಸಾಲಿಗೆ ಮೂರು ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಹೆಚ್. ಅಶ್ವತ್ಥನಾರಾಯಣ -ಅಧ್ಯಕ್ಷ, ಹೆಚ್.ಕೆ. ಅನಂತ, ಕೆ.ಜಿ.ಶಂಕರ ನಾರಾಯಣ ಶಾಸ್ತ್ರಿ -ಉಪಾಧ್ಯಕ್ಷರು, ಎಂ.ಎಸ್. ರವೀಂದ್ರ-ಗೌರವ ಕಾರ್ಯದರ್ಶಿ, ಆರ್. ಅನಂತರಾಮು, ಕೆ.ಎಸ್. ಹಿರಿಯಣ್ಣ-ಜಂಟಿ ಕಾರ್ಯದರ್ಶಿಗಳು, ಎಸ್.ಕೆ. ಜಗದೀಶ್-ಧರ್ಮಾಧಿಕಾರಿ, ಎ. ರಾಮು-ಗೌರವ ಖಜಾಂಚಿ, ಎನ್. ಶ್ರೀನಿವಾಸ, ಎಂ. ಮಂಜುನಾಥ, ಎಲ್. ವೆಂಕಟಕೃಷ್ಣಶಾಸ್ತ್ರಿ, ಕೆ.ಜಿ. ಸತೀಶ್, ಎನ್.ವೈ ವಿಶ್ವನಾಥ್, ಜಿ.ಸುಬ್ಬನರಸಿಂಹ ಮತ್ತು ಎ.ಆರ್. ವೆಂಕಟೇಶ್-ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ವಿವಿಧ ಸ್ಪರ್ಧೆಗಳಲ್ಲಿ ಪ್ರತಿಭೆ ಬೆಳಗಿದ ದಿವ್ಯಾಂಗರು!



ಮೈಸೂರು, ಡಿ.5(ಎಸ್‌ಬಿಡಿ)- ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ವತಿಯಿಂದ ಆಯಿಷ್ ಜಿಮ್ಖಾನ ಪಂಚವಟಿ ಕ್ಯಾಂಪಸ್‌ನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ದಿವ್ಯಾಂಗ ವ್ಯಕ್ತಿಗಳ ದಿನಾಚರಣೆಯಲ್ಲಿ ವಾಕ್-ಶ್ರವಣ ವಿಶೇಷ ಮಕ್ಕಳು ಎಲ್ಲರ ಗಮನ ಸೆಳೆದರು. ವಿಶೇಷ ಚೇತನ ಮಕ್ಕಳಿಗೆ ಅವಕಾಶ ನೀಡಿ ಪ್ರೋತ್ಸಾಹಿಸಿದರೆ ಸಾಮಾನ್ಯ ಮಕ್ಕಳಂತೆ ಎಲ್ಲಾ ಚಟುವಟಿಕೆಯಲ್ಲೂ ಭಾಗವಹಿಸುವ ಮೂಲಕ ತಮ್ಮಲ್ಲಿನ ನ್ಯೂನತೆಯನ್ನು ಮೆಟ್ಟಿ ನಿಲ್ಲುತ್ತಾರೆ ಎನ್ನುವುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿತ್ತು. ವೇಷ ಭೂಷಣ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಸಂಭ್ರಮಿಸಿದರು. ಸ್ಪರ್ಧೆಗಳಲ್ಲಿ ಖುಷಿಯಿಂದ ಪಾಲ್ಗೊಂಡ ಮಕ್ಕಳನ್ನು ಕಂಡು ಅವರ ಪೋಷಕರ ಕಣ್ಣಲ್ಲಿ ಆನಂದಬಾಷ್ಪ ಆವರಿಸಿತ್ತು.

ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ನೀಡಿ, ಪ್ರೋತ್ಸಾಹಿಸುವುದರ ಜೊತೆಗೆ ವಿಶೇಷ ಮಕ್ಕಳನ್ನು ಪ್ರೀತಿಯಿಂದ ಆರೈಕೆ ಮಾಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿರುವ ತಾಯಂದಿರನ್ನು 'ಅತ್ಯುತ್ತಮ ತಾಯಿ ಪ್ರಶಸ್ತಿ'ಯೊಂದಿಗೆ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ವಿ.ಜ್ಯೋತಿ ಮಾತನಾಡಿ, ವಿಶೇಷಚೇತನ ಮಕ್ಕಳ ಬೆಳವಣಿಗೆಗೆ ಆಯಿಷ್ ಸಂಸ್ಥೆ ಅತ್ಯುತ್ತಮ ಸೇವೆ ಸಲ್ಲಿಸುತ್ತಿದೆ. ವಿಶೇಷಚೇತನರೆಂಬ ಕಾರಣಕ್ಕೆ ತಮ್ಮ ಮಕ್ಕಳನ್ನು ಪೋಷಕರು ಮೂಲೆಗುಂಪು ಮಾಡಬಾರದು. ಯಾರೋ ಏನೋ ಮಾತನಾಡುತ್ತಾರೆಂದು ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಸೂಕ್ತ ಚಿಕಿತ್ಸೆ ಕೊಡಿಸಿದರೆ ಅವರೂ ಕೂಡ ಸಾಮಾನ್ಯ ಮಕ್ಕಳಂತೆ ಬೆಳೆಯುತ್ತಾರೆ. ವಿಶೇಷ ಮಕ್ಕಳೆಂದು ಪ್ರತ್ಯೇಕವಾಗಿಡದೆ ಸಾಮಾನ್ಯ ಮಕ್ಕಳಂತೆ ಸಮಾನ ಅವಕಾಶ ಕಲ್ಪಿಸಿ ಕೊಡಬೇಕು. ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು ಎಂದು ಪೋಷಕರಿಗೆ ಸಲಹೆ ನೀಡಿದರು.

ಆಯಿಷ್ ಉಸ್ತುವಾರಿ ನಿರ್ದೇಶಕ ಡಾ.ಅಜೀಶ್ ಕೆ.ಅಬ್ರಾಹಂ, ವಿಶೇಷ ಮಕ್ಕಳ ಸೇವೆಗೆ ನಮ್ಮ ಸಂಸ್ಥೆ ಸದಾ ಸಿದ್ಧವಿದೆ. ಯಾವುದೇ ಕಾರಣಕ್ಕೂ ಪೋಷಕರು ಧೃತಿಗೆಡಬಾರದು. ಅನಗತ್ಯವಾಗಿ ಕೊರಗಬಾರದು ಎಂದು ಆತ್ಮ ವಿಶ್ವಾಸ ತುಂಬಿದರು. ಚಿಕಿತ್ಸಾ ಸೇವಾ ವಿಭಾಗದ ಮುಖ್ಯಸ್ಥರಾದ ಡಾ.ಸಪ್ನ, ವಿಶೇಷ ಶಿಕ್ಷಣ ವಿಭಾಗ ಮುಖ್ಯಸ್ಥರಾದ ಡಾ.ಪ್ರೀತಿ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಬಹುಮಾನ ಪಡೆದ ಮಕ್ಕಳು

ಮ್ಯೂಸಿಕಲ್ ಚೇರ್‌ನಲ್ಲಿ ರೇವು ಬಾಯಿ ಪ್ರಥಮ, ಶ್ರೇಯಸ್ ದ್ವಿತೀಯ, ಲೆಮನ್ ಅಂಡ್ ಸ್ಪೂನ್‌ನಲ್ಲಿ ಭುವನ್ ಕೃಷ್ಣ(ಪ್ರ), ಅನಂತು(ದ್ವಿ), ರನ್ನಿಂಗ್ ರೇಸ್‌ನಲ್ಲಿ ಅನನ್ಯ(ಪ್ರ), ಯಶವಂತ್ (ದ್ವಿ), ಸ್ಯಾಂಡ್ ಫಿಲ್ಲಿಂಗ್‌ನಲ್ಲಿ ಎಂ. ವಿಹಾನ್(ಪ್ರ), ಪ್ರತೀಕ್(ದ್ವಿ), ಬಿಲ್ಡಿಂಗ್ ಬ್ಲಾಕ್ ಸ್ಪರ್ಧೆಯಲ್ಲಿ ದಕ್ಷ್ (ಪ್ರ), ಧೃತಿ(ದ್ವಿ), ಪಿಕ್ಕಿಂಗ್ ಬಾಲ್‌ನಲ್ಲಿ ಅಮೋಘ(ಪ್ರ), ಅರ್ಪಣ(ದ್ವಿ) ಬಹುಮಾನ ಪಡೆದರು. ನಾಗರತ್ನಮ್ಮ, ಕೆ.ಪುಟ್ಟಸ್ವಾಮಿ, ಉಮ್ಮುಕುಲ್ಸುಂ, ಸುನಂದಮ್ಮ ರಜನಿ ಅವರಿಗೆ 'ಡಾ.ಪ್ರತಿಮಾ ಕಾರಂತ್' ಹೆಸರಲ್ಲಿ 'ಅತ್ಯುತ್ತಮ ತಾಯಿ' ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು.

ಉದ್ಯೋಗ-ಉದ್ಯಮಗಳಲ್ಲಿ ಕನ್ನಡಿಗರಿಗೆ ಪ್ರಾಶಸ್ತ್ಯ ಸಿಗಲಿ



ಮೈಸೂರು, ಡಿ.5-ಕನ್ನಡ ಎನ್ನುವುದು ನಾಡಿನ ಹಿರಿಮೆ, ಸಂಸ್ಕೃತಿ ಐಕ್ಯತೆಯ ಸಂಕೇತವಾಗಿದೆ. ಈ ನೆಲೆಯಲ್ಲಿ ಕರ್ನಾಟಕ ಏಕೀಕರಣವಾಗಿದೆ. ಕನ್ನಡಿಗರ ಬದುಕು ಹಸನಾಗಲು ಉದ್ಯೋಗ ಮತ್ತು ಉದ್ಯಮಗಳಲ್ಲಿ ಕನ್ನಡಿಗರಿಗೆ ಪ್ರಾಶಸ್ತ್ಯ ನೀಡಬೇಕಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಿಕಟಪೂರ್ವ ಅಧ್ಯಕ್ಷ ಡಾ. ವೈ.ಡಿ.ರಾಜಣ್ಣ ಅಭಿಪ್ರಾಯಪಟ್ಟರು.

ಮೈಸೂರು ನಗರದ ಚಾಮುಂಡೇಶ್ವರಿ ರೈಲ್ವೇ ಬಡಾವಣೆಯ ಚೈಲ್ಡ್ ವಿಷನ್ ಎಜುಕೇಷನ್ ಶಿಕ್ಷಣ ಸಂಸ್ಥೆಯ "ಲಿಟಲ್ ಚಾಂಪ್ಸ್" ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಮಕ್ಕಳ ದಿನಾಚರಣೆ ಕನಕದಾಸ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡಿಗರ ಏಕೀಕರಣಕ್ಕೆ ದುಡಿದ ಆಲೂರು ವೆಂಕಟರಾಯರು, ಬಿಎಂ ಶ್ರೀಕಂಠಯ್ಯ, ಅನಕೃ, ಕುವೆಂಪು, ಬೇಂದ್ರೆ, ಕಾರಂತರ ಜತೆಯಲ್ಲೇ ನಾಡಿನ ಅಭಿವೃದ್ಧಿಯ ರೂವಾರಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಕರ್ನಾಟಕ ಎಂದು ನಾಮಕರಣ ಮಾಡಲು ಸಂಕಲ್ಪ ತೊಟ್ಟ ದೇವರಾಜ ಅರಸ್ ಅವರನ್ನು ಸ್ಮರಿಸಬೇಕು ಎಂದು ತಿಳಿಸಿದರು. ಸಾಂಸ್ಕೃತಿಕ ನೆಲೆಯಲ್ಲಿ ಅಸಮಾನತೆ ವಿರುದ್ಧ ಕೀರ್ತನೆಗಳ ಮೂಲಕ ಕರೆಕೊಟ್ಟ ಕನಕದಾಸರ ನುಡಿಗಳು ವರ್ತಮಾನ ಸಮಾಜದ ಕಣ್ತೆರೆಸಬೇಕಿದೆ ಎಂದರು.

ಮಕ್ಕಳ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಪಕ್ಷಿಗಳ ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿತ್ತು. 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಪ್ರಥಮ ಬಹುಮಾನ ಸ್ಮಯ, ಶೆರ್ಲಿ, ಸಮನ್ವಿ, ದ್ವಿತೀಯ ಬಹುಮಾನ ಹನ್ವಿಕ, ಘನ್ವಿಕ, ಜೀವಿಕ ಹಾಗೂ ತೃತೀಯ ಬಹುಮಾನ ಹಂಸಿಕ, ಸುವೇದ್, ಭುಜಂಗ್ ಹಾಗೂ ತನ್ವಿಕ ಪಡೆದುಕೊಂಡರು. ಶಾಲೆಯ ಅಧ್ಯಾಪಕ ವರ್ಗ ರಾಜ್ಯೋತ್ಸವ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿದ್ದರು.

ವೇದಿಕೆಯಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರೊ. ಎಂ.ಕೆ. ಶ್ರೀಧರ್, ಕಾರ್ಯದರ್ಶಿ ರೂಪಾ ಶ್ರೀಧರ್ ಉಪಸ್ಥಿತರಿದ್ದರು.

ಮದುವೆಯಾಗುವುದಾಗಿ ನಂಬಿಸಿ ಯುವತಿ ಮೇಲೆ ಅತ್ಯಾಚಾರ; ಗಂಡು ಮಗುವಿಗೆ ಜನ್ಮ ನೀಡಿದ ನಂತರ ವಂಚನೆ: ಯುವಕನಿಗೆ 10 ವರ್ಷ ಜೈಲು ಶಿಕ್ಷೆ

ಮೈಸೂರು, ಡಿ. 5-ಮದುವೆಯಾಗುವುದಾಗಿ ನಂಬಿಸಿ, ಯುವತಿಯ ಇಚ್ಛೆಗೆ ವಿರುದ್ಧವಾಗಿ ಅತ್ಯಾಚಾರ ನಡೆಸಿ ಆಕೆಯು ಗರ್ಭಿಣಿಯಾಗಿ, ಗಂಡು ಮಗುವಿಗೆ ಜನ್ಮ ನೀಡಿದ ನಂತರ ಮದುವೆಗೆ ನಿರಾಕರಿಸಿ, ವಂಚಿಸಿದ ಯುವಕನಿಗೆ ಮೈಸೂರು 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಹುಣಸೂರು ತಾಲೂಕು ರತ್ನಪುರಿ ಗ್ರಾಮದ ನಾಜೀರ್ ಖಾನ್ ಮಗ ಸಲ್ಮಾನ್ ಖಾನ್ (20), ಅದೇ ಗ್ರಾಮದ ಯುವತಿ ಮೇಲೆ ಅತ್ಯಾಚಾರ ನಡೆಸಿದ ಆರೋಪಿ.

ಮದುವೆಯಾಗುವುದಾಗಿ ನಂಬಿಸಿ, ಆಕೆಯ ಇಚ್ಛೆಗೆ ವಿರುದ್ಧವಾಗಿ ಅತ್ಯಾಚಾರ ನಡೆಸಿದ್ದ. ಆಕೆ ಗರ್ಭಿಣಿಯಾಗಿ, ನಂತರ ಗಂಡು ಮಗುವಿಗೆ ಜನ್ಮ ನೀಡಿದ ನಂತರ ಮದುವೆಯಾಗಲು ನಿರಾಕರಿಸಿದ್ದ. ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ತನಿಖಾಧಿಕಾರಿ ಕೆ.ಸಿ. ಪೂವಯ್ಯನವರು, ತನಿಖೆ ನಡೆಸಿ, ಆರೋಪಿಯ ವಿರುದ್ಧ ದೋಷಾರೋಪದ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ನಡೆದು, ಆರೋಪಿ ವಿರುದ್ಧ ಪೂರಕ ಸಾಕ್ಷ್ಯಾಧಾರಗಳು ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ ಕಲಂ 376(2) ಐಪಿಸಿ ರೀತ್ಯಾ 10 ವರ್ಷಗಳ ಕಠಿಣ ಸೆರೆಮನೆ ವಾಸ ಶಿಕ್ಷೆಯನ್ನು ನ್ಯಾಯಾಧೀಶರಾದ ಎಂ. ರಮೇಶ್ ವಿಧಿಸಿದ್ದಾರೆ. ಅಲ್ಲದೆ ವಿಧಿಸಿರುವ 35ಸಾವಿರ ರೂ. ದಂಡದಲ್ಲಿ 30 ಸಾವಿರವನ್ನು ಸಂತ್ರಸ್ತೆಗೆ ನೀಡುವುದರ ಜೊತೆಗೆ ಉಳಿದ 5 ಸಾವಿರವನ್ನು ಸರ್ಕಾರಕ್ಕೆ ಪಾವತಿಸುವಂತೆಯೂ ಆದೇಶಿಸಿದ್ದಾರೆ. ಜೊತೆಗೆ ಸಂತ್ರಸ್ತೆಗೆ ಕಾನೂನು ಸೇವೆಗಳ ಪ್ರಾಧಿಕಾರ ಕಾನೂನಾತ್ಮಕ ಪರಿಹಾರ ನೀಡುವಂತೆಯೂ ಆದೇಶಿಸಲಾಗಿದೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ. ನಾಗರಾಜು ವಾದ ಮಂಡಿಸಿದ್ದರು.

ಜೆ.ಪಿ.ರಾಜರತ್ನಂ ಶಿಶುಕಾವ್ಯದ ಗಾರುಡಿಗ: ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು, ಡಿ. 5-"ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಿಸಾಕುದ್ರೂನು ಮೂಗ್ನಲ್ ಕನ್ನಡ ಪದವಾಡ್ತೀನಿ" ಎನ್ನುತ್ತಲೇ ಎದೆ ತುಂಬ ಎಣೆ ಇಲ್ಲದ ಅಪಾರ ಕನ್ನಡ ಅಭಿಮಾನವನ್ನು ತುಂಬಿಕೊಂಡು ತಮ್ಮನ್ನು ತಾವು ಕನ್ನಡ ಪರಿಚಾರಕ ಎಂದು ಕರೆದುಕೊಂಡು ಸಾಹಿತ್ಯದ ಮೂಲಕ ಅದರಲ್ಲೂ ಮುಖ್ಯವಾಗಿ ಶಿಶು ಸಾಹಿತ್ಯದಿಂದ ತಾವು ಬದುಕಿರುವ ತನಕವೂ ಕನ್ನಡದ ಜೊತೆಯಲ್ಲಿಯೇ ಜೀವಿಸಿದ್ದ ಜಿ.ಪಿ.ರಾಜರತ್ನಂ ಅವರು ಶಿಶು ಸಾಹಿತ್ಯದ ಗಾರುಡಿಗರೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರಿನ ಕೆ.ಆರ್.ಮೊಹಲ್ಲಾದ ನೂರಡಿ ರಸ್ತೆಯಲ್ಲಿರುವ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನ ಸಂಯುಕ್ತವಾಗಿ ಏರ್ಪಡಿಸಿದ್ದ ಕನ್ನಡ ಸಾಹಿತ್ಯದ ದೈತ್ಯ ಪ್ರತಿಭೆ ಜಿ.ಪಿ.ರಾಜರತ್ನಂ ಅವರ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ? ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ, ಒಂದು ಎರಡು ಬಾಳೆಲೆ ಹರಡು ಮೂರು ನಾಲ್ಕು ಅನ್ನ ಹಾಕು... ಪದ್ಯಗಳು ಸೇರಿದಂತೆ ರಾಜರತ್ನಂ ಅವರು ನೂರಾರು ಶಿಶು ಗೀತೆಗಳನ್ನು ಬರೆದು ಮಕ್ಕಳ ಮೊಗದಲ್ಲಿ ಕಿಲಕಿಲ ನಗುವನ್ನೂ, ಮನಸ್ಸಿನಲ್ಲಿ ಮನೋಲ್ಲಾಸವನ್ನೂ ತಂದವರು ಮಾತ್ರವಲ್ಲದೆ ಎಲ್ಲಾ ವಯೋಮಾನದವರ ಮನಸ್ಸನ್ನು ಅರಳಿಸುವಂತಹ ಸಾಹಿತ್ಯ ಬರೆದು ಕವಿ, ವಿಮರ್ಶಕ, ನಾಟಕಕಾರ,ಕಾದಂಬರಿಕಾರ, ಚಿಂತಕರಾಗಿ ಕನ್ನಡವನ್ನು ಕಟ್ಟಿ ಬೆಳೆಸಿದ ಕನ್ನಡದ ಕಟ್ಟಾಳಾಗಿದ್ದರೆಂದರು.

ಪದ್ಯಗಳಲ್ಲಿ ಗ್ರಾಮ್ಯ ಭಾಷೆಯನ್ನು ರಾಜರತ್ನಂ ಅವರಷ್ಟು ಸೊಗಸಾಗಿ ಬಳಸಿಕೊಂಡು ಕಾವ್ಯ ಕೃಷಿ ಮಾಡಿದವರು ಮತ್ತೊಬ್ಬರಿಲ್ಲ. ಟಿ.ಪಿ.ಕೈಲಾಸಂ ಅವರು ಗ್ರಾಮ್ಯ ಭಾಷೆಯನ್ನು ನಾಟಕಗಳಲ್ಲಿ ತಂದರೆ ರಾಜರತ್ನಂ ಅವರು ಕಾವ್ಯಕ್ಕೆ ತಂದು ಕನ್ನಡ ಸಾರಸ್ವತ ಲೋಕದಲ್ಲಿ 'ರತ್ನನ್ ಪರ್ಪಂಚ' ಸೃಷ್ಟಿ ಮಾಡಿದರು. ರಾಜರತ್ನಂರವರೇ ಹೇಳಿರುವಂತೆ "ಯೇಳ್ ಕಳಿಕ್ ಒಂದ್ ಊರು ತಲೆ ಮೇಲೊಂದ್ ಸೂರು ಮಲಗೋಕ್ಕೆ ಭೂಮ್ ತಾಯಿ ಮಂಚ..." ಎಂಬಂತೆ ಬಡತನದಲ್ಲಿ ಹುಟ್ಟಿ ಬಡತನದಲ್ಲಿಯೇ ಬೆಳೆದು ವಿದ್ಯಾಭ್ಯಾಸಕ್ಕಾಗಿ ಪಡಬಾರದ ಪಾಡು ಪಟ್ಟು ಸಾಂಸಾರಿಕ ಜೀವನದ ಕಷ್ಟಗಳ ನಡುವೆಯೇ ಆಶಾವಾದಿತ್ವ ಸಾರುವ ರತ್ನನ ಪದಗಳನ್ನು ರಚಿಸಿದ ರಾಜರತ್ನಂ ಅಕ್ಷರಶಃ ಚಿರಕಾಲ ಫಳಫಳನೆ ಹೊಳೆ ಯುವ ಕನ್ನಡದ ರಾಜರತ್ನರಾಗಿದ್ದಾರೆ ಎಂದರು.

ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಕಾರ್ಯಕ್ರಮ ಕುರಿತು ಸಂಕ್ಷಿಪ್ತವಾಗಿ ತಿಳಿಸಿಕೊಟ್ಟರು. ಅಧ್ಯಕ್ಷತೆ ವಹಿಸಿದ್ದ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ, ಮುಖ್ಯ ಶಿಕ್ಷಕಿ ಸಯಿದಾ ನುರಾನಿ ಜಬೀನ್, ಶಿಕ್ಷಕಿಯರಾದ ಆಯಿಷಾ ಸುಲ್ತಾನ, ಆರ್. ಶೀಲಾ ಹಾಗೂ ಖ್ಯಾತ ಸಂಖ್ಯಾ ಶಾಸ್ತ್ರಜ್ಞ ಎಸ್.ಜಿ.ಸೀತಾರಾಮ್, ಮುಕ್ತಕ ಕವಿ ಮುತ್ತುಸ್ವಾಮಿ, ಚಿತ್ರಕಲಾ ಶಿಕ್ಷಕ ಮನೋಹರ್ ಮುಂತಾದವರು ಭಾಗವಹಿಸಿದ್ದರು. ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಶ್ರೀ ಕೊಂಗಳ್ಳಿಯಲ್ಲಿ ವೈಭವದ ಮಲ್ಲಿಕಾರ್ಜುನ ಸ್ವಾಮಿ ಉತ್ಸವ




ಚಾಮರಾಜನಗರ ಜಿಲ್ಲೆಯ ತಮಿಳುನಾಡು ಗಡಿಯಲ್ಲಿ ನೆಲೆಸಿರುವ ಇತಿಹಾಸ ಪ್ರಸಿದ್ಧ ಶ್ರೀ ಕೊಂಗಳ್ಳಿ ಮಲ್ಲಿಕಾರ್ಜುನ ಸ್ವಾಮಿಯ ಉತ್ಸವ ವಿಜೃಂಭಣೆ ನಡೆದು ಸಾವಿರಾರು ಜನರು ಪಾಲ್ಗೊಂಡು ಸ್ವಾಮಿಯ ಕೃಪೆಗೆ ಪಾತ್ರರಾದರು. ತಿ.ನರಸೀಪುರ ತಾಲೂಕಿನ ಹೇಳವರ ಹುಂಡಿ ಗ್ರಾಮಸ್ಥರು ಶ್ರೀ ಕೊಂಗಳ್ಳಿ ಮಲ್ಲಿಕಾರ್ಜುನ ಸ್ವಾಮಿಗೆ ಮೂರನೇ ಕಾರ್ತಿಕ ಸೋಮವಾರದಂದು ವಿಜೃಂಭಣೆಯ ಹುಲಿ ವಾಹನೋತ್ಸವದೊಂದಿಗೆ ವೈಭವದ ಮೆರವಣಿಗೆ ನಡೆಸಿದರು. ಹೇಳವರ ಹುಂಡಿ ಗ್ರಾಮಸ್ಥರು ಬಸವನೊಂದಿಗೆ ಕಾಲ್ನಡಿಗೆಯಲ್ಲಿ ಇಲ್ಲಿಗೆ ಬಂದಿದ್ದರು. ದೀಪಾಲಂಕಾರ ಹಾಗೂ ವಿವಿಧ ಬಗೆಯ ಹೂವಿನೊಂದಿಗೆ ಅಲಂಕರಿಸಿ ಉತ್ಸವ ನೆರವೇರಿಸಿದರು. ಹತ್ತು ಸಾವಿರ ಹೆಚ್ಚು ಭಕ್ತಾದಿಗಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.


ಶ್ರೀ ಮುತ್ತುರಾಯಸ್ವಾಮಿ ಜಾತ್ರಾ ಮಹೋತ್ಸವ



ಪಿರಿಯಾಪಟ್ಟಣ, ಡಿ.5– ಪಿರಿಯಾಪಟ್ಟಣ ತಾಲೂಕಿನ ಆನೆ ಚೌಕೂರು ರಸ್ತೆಯಲ್ಲಿರುವ ಶ್ರೀ ಮುತ್ತುರಾಯಸ್ವಾಮಿ ದೇವಸ್ಥಾನದ 30ನೇ ವರ್ಷದ ಜಾತ್ರಾ ಮಹೋತ್ಸವವು ಡಿ.9ರಂದು ನಡೆಯಲಿದೆ.

ಅಂದು ಬೆಳಗ್ಗೆ 5.30 ರಿಂದ 6.30ರವರೆಗೆ ಸ್ವಾಮಿಗೆ ಹೊಳೆಮಜ್ಜನ ಸೇವೆ, ಅಭಿಷೇಕ ಮತ್ತು 11.30 ಗಂಟೆಯಿಂದ ತೀರ್ಥ ಪ್ರಸಾದ ವಿನಿಯೋಗ ನಂತರ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸ್ವಾಮಿಯ ಅನುಗ್ರಹ ಪಡೆಯಬೇಕೆಂದು ಶ್ರೀ ಮುತ್ತುರಾಯಸ್ವಾಮಿ ಚಾರಿಟೇಬಲ್ ಟ್ರಸ್ಟ್ ನ ಆಡಳಿತ ಮಂಡಳಿ ತಿಳಿಸಿದೆ.

ವೀರಭದ್ರೇಶ್ವರ ದೇವಸ್ಥಾನದ ಉದ್ಘಾಟನೆ



ಬೆಟ್ಟದಪುರ, ಡಿ.5– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಕೊಣಸೂರು ಗ್ರಾಮದಲ್ಲಿ ವಿಶ್ವಕರ್ಮ ಸಮಾಜದವರು ನಿರ್ಮಿಸಿರುವ ವೀರಭದ್ರೇಶ್ವರ ದೇವಾಲಯವು ಗುರುವಾರ (ಡಿ.7) ಬೆಳಿಗ್ಗೆ 10 ಗಂಟೆಗೆ ಸಮಾಜದ ಗುರುಹಿರಿಯರ ನೇತೃತ್ವದಲ್ಲಿ ಹಾಗೂ ಸ್ವಾಮೀಜಿಗಳ ಆಶೀರ್ವಾದಗಳೊಂದಿಗೆ ಉದ್ಘಾಟನೆಗೊಳ್ಳಲಿದ್ದು, ವೀರಭದ್ರೇಶ್ವರ ಮೂರ್ತಿ ಪ್ರತಿಷ್ಠಾಪನೆ ದೇವಾಲಯಕ್ಕೆ ಕಳಶ ಪ್ರತಿಷ್ಠಾಪನೆ ಮಾಡಲಾಗುವುದು. ಅಧ್ಯಕ್ಷತೆಯನ್ನು ಪಶು ಸಂಗೋಪನ ಸಚಿವ ಕೆ.ವೆಂಕಟೇಶ್ ಅಧ್ಯಕ್ಷತೆ ವಹಿಸಲಿದ್ದು, ಉದ್ಘಾಟನೆಯನ್ನು ಮಾಜಿ ಶಾಸಕ ಕೆ.ಮಹದೇವ್ ನೆರವೇರಿಸುವರು.

ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಕಾರ್ತಿಕ ಪೂಜೆ



ಬನ್ನೂರು, ಡಿ.5– ಪಟ್ಟಣದ ಸಮೀಪದ ಚಾಮನಹಳ್ಳಿಯಲ್ಲಿ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 16ನೇ ವರ್ಷದ 3ನೇ ಕಾರ್ತಿಕ ಮಾಸದ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು.

ಗ್ರಾಮದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನವನ್ನು ತಳಿರು ತೋರಣ ಹೂ ಮಾಲೆಯಿಂದ ಅಲಂಕರಿಸಿ, ಪ್ರಾತಃ ಕಾಲದಲ್ಲಿ ದೇವಾಲಯದಲ್ಲಿ ಹೋಮ ಹವನವನ್ನು ನೆರವೇರಿಸಲಾಯಿತು. ಪೂರ್ಣ ಕುಂಭ ಹೊತ್ತ ಮುತ್ತೈದೆಯರು, ಮಂಗಳ ವಾದ್ಯದೊಂದಿಗೆ ಹೊರಟು ಬಸವ, ಕಂಡಾಯ, ಹೂವು, ಹೊಂಬಾಳೆ ಜೊತೆಯಲ್ಲಿ ಮೆರವಣಿಯಲ್ಲಿ ಸಾಗಿದರು. ಮೆರವಣಿಗೆ ರಸ್ತೆಯುಲ್ಲಿ, ವಿವಿಧ ರಂಗೋಲಿಗಳು, ತಳಿರು ತೋರಣಗಳು ಸ್ವಾಗತ ನೀಡಲಾಯಿತು. ಮೆರವಣಿಗೆಯು ಮಧ್ಯಾಹ್ನ 1ಕ್ಕೆ ಸರಿಯಾಗಿ ದೇವಾಲಯ ತಲುಪಿತು. ನಂತರ ಮಹಾ ಮಂಗಳಾರತಿ ಮತ್ತು ಬಸವನಿಗೆ ಪೂಜಾ ಕೈಂಕರ್ಯವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.

ನಂತರ ಭಕ್ತರಿಗೆ ಪೂಜೆಗೆ ಅನುವು ಮಾಡಿಕೊಡಲಾಯಿತು. ವಿವಿಧ ಗ್ರಾಮ ಮತ್ತು ಪಟ್ಟಣದಿಂದ ದೇವರ ಒಕ್ಕಲಿನವರು ನೂರಾರು ಸಂಖ್ಯೆಯಲ್ಲಿ ಆಗಮಿಸಿ, ದೇವರ ದರ್ಶನ ಪಡೆದರು. ನಂತರ ಅನ್ನಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಿದ್ದಪ್ಪಾಜಿ ದೇವರ ಗುಡ್ಡಪ್ಪ ನಾಗಚಾರಿ ಸೇರಿದಂತೆ ಚಾಮನಹಳ್ಳಿ ಗ್ರಾಮಸ್ಥರು ಮತ್ತು ಭಕ್ತರು ಉಪಸ್ಥಿತರಿದ್ದರು.

ಸಾ.ರಾ.ಮಹೇಶ್ ಶ್ರಮದಿಂದ ಒಕ್ಕಲಿಗರ ಸಮುದಾಯ ಭವನ ನಿರ್ಮಾಣ

ಅಭಿವೃದ್ಧಿ ವಿಚಾರದಲ್ಲಿ ತಾಲೂಕಿನ ಜನ ಅವರನ್ನು ಮರೆಯವಂತಿಲ್ಲ: ಎಂ.ಟಿ.ಅಣ್ಣೇಗೌಡ



ಕೆ.ಆರ್.ನಗರ, ಡಿ.5– ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಒಕ್ಕಲಿಗರ ಸಂಘದ ಸಮುದಾಯ ಭವನವನ್ನು ನಿರ್ಮಿಸಲು ಮಾಜಿ ಶಾಸಕ ಸಾ.ರಾ. ಮಹೇಶ್ ಅವರ ಶ್ರಮ ಅಪಾರ ಹಾಗೂ ಸಹಾಯವನ್ನು ತಾಲೂಕಿನ ಒಕ್ಕಲಿಗ ಸಮುದಾಯ ಮರೆಯುವಂತಿಲ್ಲ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಸಾ.ರಾ. ಮಹೇಶ್ ಅವರಂತಹ ನಾಯಕ ಮತ್ತೊಬ್ಬ ಹುಟ್ಟಲು ಸಾಧ್ಯವಿಲ್ಲ. ಅಭಿವೃದ್ಧಿಯಿಂದ ಹಿಡಿದು ಸಹಾಯ ಮಾಡುವ, ಜನಸಾಮಾನ್ಯರ ಕಷ್ಟ ಸುಖಗಳಿಗೆ ಸ್ಪಂದಿಸುವ ಧೀಮಂತ ರಾಜಕಾರಣಿ ಸಾರಾ ಮಹೇಶ್ ಅವರನ್ನು ಈ ತಾಲೂಕಿನ ಜನತೆ ಮರೆಯುವಂತಿಲ್ಲ ಎಂದು ತಿಳಿಸಿದರು.

ಈ ತಿಂಗಳ 13ರಂದು ತಾಲೂಕು ಒಕ್ಕಲಿಗ ಸಮುದಾಯದ ಸರ್ವ ಸದಸ್ಯರ ಸಭೆಯನ್ನು ಕರೆಯಲಾಗಿದ್ದು, ಅಂದು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಬಗ್ಗೆ ಚರ್ಚಿಸಲಾಗುವುದು. ಅಂಕಪಟ್ಟಿಯ ಜೊತೆಗೆ ಕಾಲೇಜಿನ ದೃಢೀಕರಣ ಪತ್ರ ಮತ್ತು ಅರ್ಜಿಯನ್ನು ಈ ತಿಂಗಳ ಹತ್ತರವರೆಗೆ ತಾಲೂಕು ಒಕ್ಕಲಿಗ ಸಮುದಾಯ ಭವನದಲ್ಲಿ ಕಾರ್ಯದರ್ಶಿ ಅಣ್ಣಾಜಿ ಗೌಡ ಮತ್ತು ದೂರವಾಣಿ ಸಂಖ್ಯೆ 9902702859 ಕರೆ ಮಾಡಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

2024 ಮಾರ್ಚ್ ವೇಳೆಗೆ ತಾಲೂಕು ಒಕ್ಕಲಿಗ ಸಂಘದ ಚುನಾವಣೆ ನಡೆಸುವಂತೆ ಈಗಾಗಲೇ ಜಿಲ್ಲಾ ಸಹಕಾರ ಇಲಾಖೆಯ ಚುನಾವಣಾ ಧಿಕಾರಿಗೆ ಪತ್ರ ಬರೆಯಲಾಗಿದ್ದು, ಇದೇ ನನ್ನ ಕೊನೆಯ ಪತ್ರಿಕಾಗೋಷ್ಠಿ ಯಾಗಿದೆ. ಮುಂದಿನ ವರ್ಷ ಹೊಸ ಆಡಳಿತ ಮಂಡಳಿ ರಚನೆಯಾಗಿ ಆಡಳಿತ ನಡೆಸಲಿದೆ. ಆದ್ದರಿಂದ ಸರ್ವ ಸದಸ್ಯರ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಅಣ್ಣಾಜಿ ಗೌಡ ನಿರ್ದೇಶಕ ಕುಮಾರ್ ಹಾಜರಿದ್ದರು.

ಶಿಕ್ಷಣ ಇಲಾಖೆಯಿಂದ ವಿಶ್ವ ವಿಶೇಷ ಚೇತನರ ದಿನಾಚರಣೆ



ಹುಣಸೂರು, ಡಿ.5– ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಛೇರಿ ವತಿಯಿಂದ ವಿಶ್ವ ವಿಶೇಷ ಚೇತನರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ ಉದ್ಘಾಟಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕ್ಷೇತ್ರ ಸಮನ್ವಯಾಧಿಕಾರಿ ಕೆಸಂತೋಷ್‌ಕುಮಾರ್ ಶಿಕ್ಷಣ ಇಲಾಖೆಯಲ್ಲಿ ಸಾಮಾನ್ಯ ಮಕ್ಕಳೊಂದಿಗೆ ವಿಶೇಷಚೇತನ ಮಕ್ಕಳನ್ನು ಸಂಯೋಜಿಸಿ "ಸಮನ್ವಯ ಶಿಕ್ಷಣ"ವನ್ನು ನೀಡಲಾಗುತ್ತಿದೆ ಎಂದರು.

ತಾಲೂಕಿನಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 418 ಮಕ್ಕಳನ್ನು 21 ವಿವಿಧ ನ್ಯೂನ್ಯತೆಯಡಿ ಗುರುತಿಸಲಾಗಿದೆ. 32 ವಿದ್ಯಾರ್ಥಿಗಳಿಗೆ ವಾರದಲ್ಲಿ ಎರಡು ದಿನ ಫಿಸಿಯೋ ಥೆರಪಿ ನೀಡಲಾಗುತ್ತಿದ್ದು, ವಿದ್ಯಾರಣ್ಯ ಆಸ್ಪತ್ರೆ, ಆರ್.ಬಿ.ಎಸ್.ಕೆ ಸೌಲಭ್ಯದಡಿಯಲ್ಲಿ 8 ಮಕ್ಕಳಿಗೆ ಶಸ್ತ್ರಚಿಕಿತ್ಸೆ ಮಾಡಿ ಬಿ.ಐ.ಇ. ಆರ್.ಟಿ ಅವರಿಂದ ಮೇಲ್ವಿಚಾರಣೆ ಮಾಡಿಸಲಾಗುತ್ತಿದೆ.

ಶೇಕಡ 5 ರ ಅನುದಾನದಲ್ಲಿ ತಾಲೂಕು ಪಂಚಾಯಿತಿ ಮತ್ತು ನಗರಸಭೆ ಅನುದಾನವನ್ನು ಪಡೆದು ಮಕ್ಕಳಿಗೆ ಸಾಧನ ಸಲಕರಣೆಗಳ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪೋಷಕರು ಪ್ರಾಥಮಿಕ ಹಂತದಲ್ಲೇ ತಮ್ಮ ಮಕ್ಕಳ ನ್ಯೂನ್ಯತೆಯನ್ನು ಗುರುತಿಸಿ, ಸೂಕ್ತ ಚಿಕಿತ್ಸೆ ಹಾಗೂ ನೈತಿಕ ಬೆಂಬಲ ನೀಡಿದಲ್ಲಿ ಈ ಮಕ್ಕಳೂ ಸಹ ಮುಖ್ಯವಾಹಿನಿಗೆ ಬರಲು ಸಹಕಾರಿಯಾಗುತ್ತದೆ ಎಂದು ತಿಳಿಸಿ ಇಲಾಖೆಯಿಂದ ನೀಡುತ್ತಿರುವ ಸೌಲಭ್ಯದ ಬಗ್ಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ವಿಶೇಷಚೇತನರಿಗಾಗಿ ಶ್ರಮಿಸುತ್ತಿರುವ ಫಿಸಿಯೋಥೆರಪಿಸ್ಟ್‌ಗಳಾದ ಕುಮಾರಿ ಕಾವ್ಯಶ್ರೀ ಹಾಗೂ ವಿಷ್ಣು ಸಂಸ್ಥೆಯ ಪ್ರೊಜೆಕ್ಟ್ ಮ್ಯಾನೇಜರ್ ಸಂದೀಪ್, ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುವ ವಿಶೇಷಚೇತನ ವಿದ್ಯಾರ್ಥಿ ಭಾಸ್ಕರ್ ಅವರನ್ನು ಅಭಿನಂದಿಸಲಾಯಿತು.

ವಿಶೇಷಚೇತನ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು, ಇಸಿಒ, ಬಿ.ಆರ್.ಪಿ, ಸಿಆರ್.ಪಿರವರು ಭಾಗವಹಿಸಿದ್ದರು.

ಅಂಗನವಾಡಿ ಕಾರ್ಯಕರ್ತೆಯರು ದೋಷ ಮುಕ್ತ

ನಂಜನಗೂಡು, ಡಿ.5– ಹಾಲಿನ ಪುಡಿಯನ್ನು ಹೊರಗಡೆ ಅಂಗಡಿಗಳಿಗೆ ವ್ಯಾಪಾರ ಮಾಡುತ್ತಿದ್ದ ಆರೋಪ ಹೊತ್ತಿರುವ ತಾಲ್ಲೂಕಿನ ಹಗಿನವಾಳು ಗ್ರಾಮದ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರಾಗಿ ಕೆಲಸ ಮಾಡುತ್ತಿದ್ದ 3 ಮಂದಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ತನಿಖೆ ನಡೆಸಿ ಆರೋಪದಿಂದ ಮುಕ್ತಗೊಳಿಸಿದ್ದಾರೆ ಎಂದು ತಾಲ್ಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಕಮಲಾಕ್ಷಮ್ಮ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಹಗಿನವಾಳು ಗ್ರಾಮದ 3 ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರಾದ ನಾಗಮ್ಮ, ಸುಮ, ಶಿವಮ್ಮ ಅವರ ಮೇಲೆ ಆರೋಪ ಬಂದಿತ್ತು. ಅವರುಗಳನ್ನು ಇಲಾಖೆ ಅಮಾನತ್ತು ಮಾಡಿ ತನಿಖೆ ನಡೆಸಿತ್ತು. ಕೆಲವರು ಉದ್ದೇಶ ಪೂರ್ವಕವಾಗಿ ಸುಳ್ಳು ಆರೋಪ ಮಾಡಿದ್ದರು ಎನ್ನಲಾಗಿದೆ. ಇಲಾಖೆ ನಡೆಸಿದ ತನಿಖೆಯಲ್ಲಿ ಕಾರ್ಯಕರ್ತೆಯರು ಆರೋಪ ಮುಕ್ತರಾಗಿದ್ದಾರೆ.

ನಮ್ಮ ಸಿ.ಐ.ಟಿ.ಯು ಸಂಘಟನೆ ಹಾಗೂ ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘ ಕಾರ್ಯಕರ್ತೆಯರ ಪರವಾಗಿ ಹೋರಾಟ ನಡೆಸಿದ ಪರಿಣಾಮದಿಂದ ಮತ್ತೆ ಕಾರ್ಯಕರ್ತೆಯರು ಸೇವೆಗೆ ಹಿಂದಿರುಗಿದ್ದಾರೆ. ಆದ್ದರಿಂದ ನ 27ರಂದು ದಸಂಸ ಸಂಘಟನೆಗಳು ಪತ್ರಿಕಾಗೋಷ್ಠಿ ನಡೆಸಿ ಮಾಡಿದ್ದ ಆರೋಪಗಳು ಸತ್ಯಕ್ಕೆ ದೂರವಾಗಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪುಷ್ಪಲತಾ, ಹೇಮಾವತಿ, ಮಹದೇವಮ್ಮ, ಶಿವಮ್ಮ ಸುಮಾ ಪಾಲ್ಗೊಂಡಿದ್ದರು.

ಡಿ.23, ಬೆಂಗಳೂರಲ್ಲಿ ರಾಷ್ಟ್ರೀಯ ಮಹಾ ಅಧಿವೇಶನ

ರೈತರ ಸಾಲ ಮನ್ನಾ ಸೇರಿ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹ



ತಿ.ನರಸೀಪುರ, ಡಿ.5– ರೈತರ ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿ. 23ಕ್ಕೆ ಬೆಂಗಳೂರಿನಲ್ಲಿ ರಾಷ್ಟ್ರೀಯ ರೈತರ ಮಹಾ ಅಧಿವೇಶನ ನಡೆಯಲಿದೆ ಎಂದು ತಾಲೂಕು ರೈತ ಸಂಘದ ಅಧ್ಯಕ್ಷ ಕುರುಬೂರು ಸಿದ್ದೇಶ್ ತಿಳಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ರೈತರ ಸಭೆಯಲ್ಲಿ ಮಾತನಾಡಿದ ಅವರು, ಮಳೆ ಇಲ್ಲದೆ ರಾಜ್ಯಾದ್ಯಂತ ಬರ ತಲೆದೋರಿರುವುದರಿಂದ ರಾಜ್ಯ ಸರ್ಕಾರ 230 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಆದರೆ ರೈತರಿಗೆ ಬರ ಪರಿಹಾರ ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ. ಕೇವಲ 2,000 ರೂ.ಗಳನ್ನು ಪರಿಹಾರವಾಗಿ ಕೊಡುತ್ತೇವೆ ಎಂದು ಸರ್ಕಾರ ಹೇಳಿರುವುದು ಸರಿಯಾದ ಕ್ರಮವಲ್ಲ. ಸರ್ಕಾರ ಪುನರ್ ಪರಿಶೀಲಿಸಿ ಎಕರೆಗೆ 25,000 ರೂ. ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆ ನೀಡುವ ಸಲುವಾಗಿ ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲೂ ಮಹಾ ಅಧಿವೇಶನ ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ರಾಜಕೀಯೇತರ ರಾಷ್ಟ್ರ ನಾಯಕರು ಹಾಗೂ ರಾಜ್ಯ ಅಧ್ಯಕ್ಷರಾದ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಹಲವಾರು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಡಿ.23 ರಂದು ಬೆಂಗಳೂರಿನಲ್ಲಿ ರಾಷ್ಟ್ರ ಮಟ್ಟದ ಕಿಸಾನ್ ಮಹಾ ಪಂಚಾಯತ್ ರೈತರ ಮಹಾ ಅಧಿವೇಶನ ನಡೆಸಲಾಗುತ್ತಿದೆ. ಹೀಗಾಗಿ ರಾಜ್ಯಾದ್ಯಂತ ಸಾವಿರಾರು ಸಂಖ್ಯೆಯಲ್ಲಿ ರೈತರು ಸಮಾವೇಶಕ್ಕೆ ಸೇರುವ ನಿರೀಕ್ಷೆ ಇದೆ ಎಂದರು.

ರಾಜ್ಯದ ಎಲ್ಲಾ ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಮಾಡಬೇಕು. ಕೃಷಿ ಸಾಲ ಪಡೆದ ರೈತರು ಬೆಳೆ ಬೆಳೆಯಲು ಹೂಡಿಕೆ ಮಾಡಿದ್ದಾರೆ. ಬೆಳೆ ನಾಶವಾಗಿ ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಕೈಗಾರಿಕೋದ್ಯಮಿಗಳಿಗೆ 12 ಲಕ್ಷ ಕೋಟಿ ಸಾಲ ಮನ್ನಾ ಮಾಡಿರುವ ರೀತಿ ರೈತರ ಸಾಲ ಮನ್ನಾ ಆಗಬೇಕು. ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು. ಸ್ವಾಮಿನಾಥನ್ ಆಯೋಗದ ವರದಿಯಂತೆ ಕನಿಷ್ಠ ಬೆಂಬಲ ಬೆಲೆ ನಿಗದಿಯಾಗಬೇಕು ಎಂದು ಅವರು ಆಗ್ರಹಿಸಿದರು.

ರಾಜ್ಯದ ಉತ್ತರ ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿಗಿಂತಲೂ 200 ರೂ. ನಿಂದ 300 ರೂ.ಗಳನ್ನು ರೈತರಿಗೆ ಕೊಡಲು ಮುಂದಾಗಿದೆ. ಆದರೆ ಮೈಸೂರು–ಚಾಮರಾಜನಗರ ಜಿಲ್ಲೆಗಳಲ್ಲಿ ಬಣ್ಣಾರಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿ ಆರು ತಿಂಗಳಾದರೂ ಹೆಚ್ಚುವರಿ ಹಣ ಘೋಷಿಸದೆ ಮತ್ತು ಕಳೆದ ವರ್ಷದ ಬಾಕಿ 150 ರೂಪಾಯಿಗಳನ್ನು ಇದುವರೆಗೂ ಕೊಡದೆ ರೈತರಿಗೆ ಅನ್ಯಾಯ ಮಾಡುತ್ತಿದೆ. ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಬಣ್ಣಾರಿ ಕಾರ್ಖಾನೆ ಉಪ ಉತ್ಪನ್ನಗಳಿಂದ ಹೆಚ್ಚು ಲಾಭ ಪಡೆಯುತ್ತಿದ್ದರೂ ಪ್ರಸಕ್ತ ಸಾಲಿನ ಹೆಚ್ಚುವರಿ ಹಣ ಹಾಗೂ ಕಳೆದ ವರ್ಷದ ಬಾಕಿ ಹಣ ಕೊಡದೆ ಮೊಂಡತನ ತೋರುತ್ತಿದೆ. ಸರ್ಕಾರ ಮಧ್ಯಪ್ರವೇಶ ಮಾಡಿ ಕಬ್ಬು ಬೆಳೆಗಾರರಿಗೆ ನ್ಯಾಯ ಕೊಡಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಪ್ರಧಾನ ಕಾರ್ಯದರ್ಶಿ ಕಿರಗಸೂರು ಪ್ರಸಾದ್ ನಾಯಕ್, ಸಂಘಟನಾ ಕಾರ್ಯದರ್ಶಿ ಕುರುಬೂರು ಪ್ರದೀಪ್, ಟೌನ್ ಅಧ್ಯಕ್ಷ ಅಪ್ಪಣ್ಣ, ಆದಿ ಬೆಟ್ಟಳ್ಳಿ ನಂಜುಂಡಸ್ವಾಮಿ, ತರಕಾರಿ ಲಿಂಗರಾಜು, ಕರುವಟ್ಟಿ ಉಮೇಶ್, ಬನ್ನಳ್ಳಿ ಹುಂಡಿ ರಾಜೇಂದ್ರ, ಯೋಗೇಶ್, ಶಾಂತಪ್ಪ ಆರಾಧ್ಯರು, ಸೋಮಶೇಖರ್ ಮಾದೇವಸ್ವಾಮಿ, ಮಹೇಶ್ ನಿಲಸೋಗೆ ಮಹದೇವಪ್ರಸಾದ್ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇಜಸ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಹಾವೀರನ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಅನಿಮಲ್ (ಹಿಂ)	2 ಪ್ರದರ್ಶನಗಳು
ರಾಜಕಮಲ್	
ಅನ್ನಪೂರ್ಣೆ (ತ)	4 ಪ್ರದರ್ಶನಗಳು
ಸಂಗಂ	
ಅನಿಮಲ್ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್‌ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ಪ್ರಭಾ	
ರಾಖಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫೆರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, **ಭಗವಂತ್ ಕೇಸರಿ** (ತೆ): ರಾ.7.05ಕ್ಕೆ, **ಗಣಪತ್: ಎ ಹೀರೋ** (ಹಿಂ): ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್** (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ** (ಕ): ಮ.12.45ಕ್ಕೆ, **ಲಿಯೋ** (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್** (ಹಿಂ): ರಾ.10ಕ್ಕೆ, **ಟಗರುಪಲ್ಯ** (ಕ): ಮ.1ಕ್ಕೆ, ರಾ.7ಕ್ಕೆ, **ತೇಜಸ್** (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು



2ನೇ ದಿನ, ಬುಧವಾರ 6-12-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. **ಗೋಣಿಕೊಪ್ಪ ಪ್ಲೇಟ್**– 1600 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ನ್ಯಾಚುರಲ್ ಫ್ಲೈ 2. ಯುನಿಟಿ 3. ರಾಜ್

II. **ಟ್ರೆಷರ್ಸ್ ನೆಸ್ಟ್ ಪ್ಲೇಟ್** ಡಿ2–1200 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಸ್ವಿಚ್ ಇನ್ ಟೈಮ್ 2. ರೆಡ್ ಹಿಲ್ಸ್ 3. ಡಿ.ಫರ್‌ಟಿನ್ ಟ್ವೆಲ್

III. **ಮಾನಸ ಗಂಗೋತ್ರಿ ಪ್ಲೇಟ್** – 1200 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1 ಫ್ಲಾಷ್ ಬಾಂಡ್ 2. ಮ್ಯಾಜಿಕ್ ಸರ್ಕಲ್ 3. ಗೋಲ್ಡ್ ಕ್ರೆಸ್ಟ್

IV. **ಕಾಕನಕೋಟೆ ಪ್ಲೇಟ್** ಡಿ2– 1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಲ್ಯಾಂಡ್ ಆಫ್ ಗೋಲ್ಡ್ 2. ಗೈಡಿಂಗ್ ಫೋರ್ಸ್ 3. ಡಿ ಡಿಯರ್

V. **ಡಾ. ಎಂ.ಎನ್. ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ**–1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಸ್ಟಾರ್ ಗ್ಲೋರಿ 2. ಡಿ ಸೆವರ್‌ಜಿನ್ ಅರಬ್ 3. ಅಮೆಜೋನಿಯಾ

VI. **ಕಾಕನಕೋಟೆ ಪ್ಲೇಟ್** ಡಿ1– 1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಮಿಸ್ಟಿಕ್ ಬಾಂಡ್ 2. ನ್ಯಾಚುರಲ್ ಟೊರಾನಡೊ 3. ಹಿರೋಹಿಸಮ್

VII. **ಟ್ರೆಷರ್ಸ್ ನೆಸ್ಟ್ ಪ್ಲೇಟ್** ಡಿ1–1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಸ್ವಾಗತಮ್ 2. ಎಕ್ಸ್‌ಯೂಬರನ್ಸ್ 3. ಆರ್ಟಿಕಲ್ ಫಿಫ್ಟೀನ್

ದಿನದ ಅತ್ಯುತ್ತಮ	: **ಸ್ಟಾರ್ ಗ್ಲೋರಿ**
ಡಬ್ಬಲ್	: **ಫ್ಲಾಷ್ ಬಾಂಡ್, ಲ್ಯಾಂಡ್ ಆಫ್ ಗೋಲ್ಡ್**
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಕೃಷ್ಣಶೆಟ್ಟಿ ನಿಧನ



ಮೈಸೂರು, ಡಿ.5– ಪಿರಿಯಾಪಟ್ಟಣ ತಾಲೂಕಿನ ಬಸಲಾಪುರ ಗ್ರಾಮದ ನಿವಾಸಿ ಕೃಷ್ಣಶೆಟ್ಟಿ (75) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಶಿವಮ್ಮ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಡಿ.6) ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ವರ್ಷದ ಸವಿನೆನಪು



ಶ್ರೀಮತಿ ಪುಟ್ಟಮ್ಮನವರು

(ಕೆ.ಆರ್. ಪೇಟೆ ಅಂಬಿಗರಹಳ್ಳಿ ಗ್ರಾಮದ ಬಿ.ಕೃಷ್ಣೇಗೌಡರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ
3 ವರ್ಷ ಕಳೆದರೂ ನಿಮ್ಮ ನೆನಪು
ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ

ಸದಾ ನಿಮ್ಮ ನೆನಪಿನಲ್ಲಿರುವ,
ಮಗ: ಕೆ.ಚಂದ್ರಶೇಖರ್ ಗುತ್ತಿಗೆದಾರರು ಹೆಚ್ಚುವರಿ, ಮುಖಂಡರು
ಮಗಳು: ಲಕ್ಷ್ಮೀ ಜಯಕೃಷ್ಣೇಗೌಡ, ಮಕ್ಕಳು,
ಮೊಮ್ಮಕ್ಕಳು ಹಾಗೂ ಕುಟುಂಬವರ್ಗ
ಹಳ್ಳದ ಮನುಗನಹಳ್ಳಿ, (ಭೈರವ ಫಾರಂ), ಮೈಸೂರು.

ಪಕ್ಷಿ ಕಳೆದು ಹೋಗಿದೆ



ತಾ| 26-11-2023ರಂದು ನಾವು ಕಾರಿನಲ್ಲಿ ಕೊಡಗಿಗೆ ಹೋಗುವಾಗ ಕಾರಿನಲ್ಲಿದ್ದ ನಮ್ಮ ಕಾಕ್‌ಟೈಲ್ ಪಕ್ಷಿಯೊಂದು ಆಕಸ್ಮಿಕವಾಗಿ ಹುಣಸೂರು – ಹುಣಸೂರು ಮಧ್ಯದಲ್ಲಿ ಹಾರಿ ಹೋಗಿರುತ್ತದೆ. ಈ ಪಕ್ಷಿ ಯಾರಿಗಾದರೂ ಸಿಕ್ಕಿದರೆ ದಯವಿಟ್ಟು ಈ ಕೆಳಗಿನ ನಂಬರಿಗೆ ಕರೆ ಮಾಡಿ ತಿಳಿಸಿದರೆ ಸೂಕ್ತ ಬಹುಮಾನ ಕೊಡಲಾಗುವುದು.

9481169561, 6361969021

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ




ಮದನ್ ಗೌಡ ಎನ್

ಜನನ: 27.7.1998
ಮರಣ: 26.11.2023

ಇವರು ದಿ: 26.11.2023ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ. 6.12.2023 ಬುಧವಾರ ಬೆ.11.00ಗಂಟೆಗೆ ... ಗ್ರಾಮ, ... ಹೋ. ... ತಾ. ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ತಂದೆ ನಾಗರಾಜು, ತಾಯಿ ... ಹಾಗೂ ಕುಟುಂಬವರ್ಗದವರು, ... ಮತ್ತು ... ಗ್ರಾಮಸ್ಥರು

7ನೇ ವರ್ಷದ ಸವಿನೆನಪು



H.B.ಭೋರೇಗೌಡರು

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಕುಟುಂಬವರ್ಗ, ಹೊಸಹುಂಡಿ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಸುಗ್ಗನಹಳ್ಳಿ, ಜನತಾಬೀದಿಯಲ್ಲಿ ವಾಸವಾಗಿರುವ ಲೇಟ್. ಬೀರಿ ಮಾಲೇಗೌಡ ರವರ ಮಗನಾದ ಸುಮಾರು 57 ವರ್ಷ ವಯಸ್ಸಿನ ಶ್ರೀ. ಶಿವಣ್ಣ ಬಿನ್ ಹಾಗೂ ಇವರ ಧರ್ಮಪತ್ನಿಯಾದ ಶಿವಮ್ಮ ಹಾಗೂ ಇವರುಗಳ ಮಗನಾದ ಮನೋಜ್ ಎಸ್.ಎಸ್. ಇವರಿಂದ ನಮ್ಮ ಕಕ್ಷಿದಾರರಾದ ಮೈಸೂರು ನಗರ, ವಿಜಯನಗರ, 2ನೇ ಹಂತ, 24ನೇ ಮುಖ್ಯ ರಸ್ತೆ, 24ನೇ ಅಡ್ಡ ರಸ್ತೆ, ಮನೆ ನಂ. 3005ರಲ್ಲಿ ವಾಸವಾಗಿರುವ ಶೇಖಪ್ಪ ಎಸ್. ನಾಯಕ್ ರವರ ಮಗನಾದ ಸುಮಾರು 54 ವರ್ಷ ವಯಸ್ಸಿನ ಪ್ರಕಾಶ್ ಎಸ್. ನಾಯಕ್‌ರವರು ಖರೀದಿಸಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾರಿಗಾದರೂ ವಿಶಿಷ್ಟ ಹಕ್ಕುಗಳು, ಋಣಗಳು, ಮೈನರ್ ಕ್ಲೈಮುಗಳು ಹಾಗೂ ಇತರೆ ಯಾವುದೇ ರೀತಿಯಾದ ಹಕ್ಕುಗಳು ಇದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆ ನೀಡಿದ 7 ದಿವಸಗಳ ಒಳಗಾಗಿ ಈ ಮೇಲೆ ತಿಳಿಸಿದ ನಮ್ಮ ಕಛೇರಿಗೆ ಅಥವಾ ನಮ್ಮ ಕಕ್ಷಿದಾರರನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆಯ ಮೂಲಕ ಅಂತಹ ವಿಶಿಷ್ಟ ಹಕ್ಕನ್ನು ಪ್ರಸ್ತಾಪಿಸುವಂತಹ ದಾಖಲಾತಿಗಳೊಡನೆ ಸಂಪರ್ಕಿಸಬೇಕಾಗಿಯೂ ತಿಳಿಯ ಪಡಿಸುತ್ತಿದ್ದು, ಒಂದೊಮ್ಮೆ ಈ 7 ದಿವಸದೊಳಗೆ ಯಾವುದೇ ರೀತಿಯಾದ ಕ್ಲೈಮ್‌ಗಳು ಬರದೇ ಇದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಈ ಷೆಡ್ಯೂಲ್ ಸ್ವತ್ತಿನ ಮೇಲೆ ಅಂತಹ ವಿಶಿಷ್ಟ ಹಕ್ಕುಗಳು ಯಾರಿಗೂ ಇರುವುದಿಲ್ಲವೆಂದು ಮನದಟ್ಟು ಮಾಡಿಕೊಂಡು ಕ್ರಯ ಪತ್ರವನ್ನು ನೋಂದಾಯಿಸಿಕೊಳ್ಳಲು ಮುಂದಾಗಿರುತ್ತಾರೆ.

ಷೆಡ್ಯೂಲ್ ಸ್ವತ್ತುಗಳು

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ದೊಡ್ಡ ಮಾರಗೌಡನಹಳ್ಳಿ ಗ್ರಾಮದ ಸರ್ವೆ ನಂ. 87/2ರಲ್ಲಿ ಒಟ್ಟು ವಿಸ್ತೀರ್ಣ 33 ಗುಂಟೆ (ಮೂವತ್ತಮೂರು ಗುಂಟೆ) ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಜವರಯ್ಯನ ಕಳಸಯ್ಯ ರವರ ಜಮೀನು, ಪಶ್ಚಿಮಕ್ಕೆ : ಮಂಜುಳನವರ ಜಮೀನು, ಉತ್ತರಕ್ಕೆ: ಸಿದ್ದೇಗೌಡ ಮತ್ತು ಮಂಜುರವರ ಜಮೀನು, ದಕ್ಷಿಣಕ್ಕೆ: ಚಿಕ್ಕಣ್ಣ ಮತ್ತು ದೊಡ್ಡೇಗೌಡರವರ ಜಮೀನು.

ಸಹಿ/– ಮನುಕುಮಾರ್, B.A.L, LL.B., ವಕೀಲರು,
KAR No.3052/2010 #388, 5ನೇ ಮೇನ್, 1ನೇ ಹಂತ, ವಿಜಯನಗರ, ಮೈಸೂರು–570017.
ಮೊ: 9620828974

ದಿನಾಂಕ : 05/12/2023, ಸ್ಥಳ: ಮೈಸೂರು

15ನೇ ವರ್ಷದ ಸವಿನೆನಪು



ಶ್ರೀಮತಿ ಚನ್ನಮ್ಮ

ಸದಾ ನಿಮ್ಮ ನೆನಪಿನಲ್ಲಿರುವ
ಪತಿ ಚನ್ನನಾಯಕ, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಗೌರವಾನ್ವಿತ ಮೂರನೇ ಪ್ರಧಾನ ಕುಟುಂಬ ನ್ಯಾಯಾಲಯ, ಮೈಸೂರು

ಕೌಟುಂಬಿಕ ವ್ಯಾಜ್ಯ ಸಂಖ್ಯೆ: 539/2023

ಅರ್ಜಿದಾರರು: ಶ್ರೀ ಎಸ್. ಮಾರ್ಷಲ್ ಸ್ಟಿವಿನ್ ಬಿನ್ ಶಾಂತರಾಜು, ವಯಸ್ಸು ಸುಮಾರು 37 ವರ್ಷ, # 1780, 100 ಅಡಿ ರಸ್ತೆ, ಕ್ರಿಶ್ಚಿಯನ್ ಕಾಲೋನಿ, ಕಲ್ಲಹಳ್ಳಿ, ಮಂಡ್ಯ ಪಿನ್: 571401

ವಿರುದ್ಧ

ಪ್ರತ್ಯರ್ಜಿದಾರರು: ಶ್ರೀಮತಿ ನವ್ಯ.ಟಿ.ಇ., ಬಿನ್ ಶ್ರೀಮತಿ ಯಶೋಧ.ಟಿ.ಕೆ. ಈಶ್ವರ್, ವಯಸ್ಸು ಸುಮಾರು 30 ವರ್ಷ, ಎಂ.ಎಸ್.ಎಂ. ಆಸ್ಪತ್ರೆ, ವಸತಿ ಗೃಹ, ನೋಕಿಯಾ, ಶಿವಮತಿ, ಕೊಡಗು–571254

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವ್ಯಾಜ್ಯದಲ್ಲಿ ಅರ್ಜಿದಾರರ ವಿರುದ್ಧ ದಾಂಪತ್ಯದ ಹಕ್ಕುಗಳ ಪುನರ್‌ಸ್ಥಿತಿ ಪ್ರಾಪ್ತಿಗಾಗಿ (Restitution of Conjugal Rights) ವ್ಯಾಜ್ಯವನ್ನು ಹೂಡಿದ್ದು, ಪ್ರತ್ಯರ್ಜಿದಾರರು ನ್ಯಾಯಾಲಯದ ಸಮನ್ಸ್ ತಿರಸ್ಕರಿಸಿದರಿಂದ ಈ ಪತ್ರಿಕಾ ಪ್ರಕಟಣೆ, ಪ್ರತ್ಯರ್ಜಿದಾರರ ಹಾದರಾತಿಗೆ ಈ ವ್ಯಾಜ್ಯವು ದಿನಾಂಕ 11.01.2024ರಂದು ಬೆಳಿಗ್ಗೆ 11 ಗಂಟೆಗೆ ನಿಗಧಿಪಡಿಸಿದ್ದು, ನೀವು ಖುದ್ದಾಗಿ ಇಲ್ಲ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾದರಾಗತಕ್ಕದ್ದು, ಒಂದು ವೇಳೆ ತಪ್ಪಿದ್ದಲ್ಲಿ ಘನ ನ್ಯಾಯಾಲಯವು ತಮ್ಮ ವಿರುದ್ಧ ಏಕಪಕ್ಷೀಯವಾಗಿ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೇದಾರರು,
ಗೌರವಾನ್ವಿತ ಮೂರನೇ ಕುಟುಂಬ ನ್ಯಾಯಾಲಯ, ಮೈಸೂರು

ಅರ್ಜಿದಾರರ ಪರ ವಕೀಲರು
ಸಹಿ/– ಎಲ್. ಶಶಿಧರ, B.Sc, LL.B., (Spl)
"ಶ್ರೇಯಸ್" ನಂ. 100, 7ನೇ ಮುಖ್ಯರಸ್ತೆ, ಪಡುವಾರಹಳ್ಳಿ, ಮೈಸೂರು–570012.
ಮೊ: 9483228606

ಸ್ಥಳ: ಮೈಸೂರು, ದಿನಾಂಕ: 2.12.2023

ಸ್ಥಾಪನೆ : 1916

ದಿ–ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.

ಶ್ರೀ ಹರ್ಷ ರಸ್ತೆ, ಮೈಸೂರು–570001, ದೂ.: 2520026

ಹರಾಜು ಮಾರಾಟ

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅನ್ವಯ ಬ್ಯಾಂಕಿಗೆ ಆಧಾರ ಮಾಡಿರುವ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊಬಲಗು + ಅಸಲು+ಬಡ್ಡಿ+ಇತರೆ	ಮೀಸಲು ಬೆಲೆ ಲಕ್ಷ ರೂ.ಗಳಲ್ಲಿ	ಹರಾಜಿನ ದಿನಾಂಕ ಮತ್ತು ಸಮಯ	ಬ್ಯಾಂಕಿಗೆ ಆಧಾರವಾಗಿರುವ ಸ್ಥಿರಾಸ್ತಿಯ ಸ್ವತ್ತಿನ ವಿವರಗಳು
1	ಬಿ.ಲಿಂಗಣ್ಣ S/o ಬೋರಯ್ಯ ಅಕೌಂಟ್ ನಂ: 632786 637221	560000	5800000	20.12.2023 ಬೆಳಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಚಾಮರಾಜ ಮೊಹಲ್ಲಾ, ಬೋಗಾದಿ, 1ನೇ ಹಂತ, ಮನೆ ನಂ.144, ಅಳತೆ ಪೂ+ಪ 40ಅಡಿ, ದ+ಉ 30ಅಡಿ, ಪೂರ್ವಕ್ಕೆ –ರಸ್ತೆ, ಪಶ್ಚಿಮಕ್ಕೆ–ನಿವೇಶನ ಸಂಖ್ಯೆ149, ಉತ್ತರಕ್ಕೆ–ನಿವೇಶನ ಸಂಖ್ಯೆ143, ದಕ್ಷಿಣಕ್ಕೆ–ನಿವೇಶನ ಸಂಖ್ಯೆ145
2	ಆರ್.ವಿಜಕುಮಾರ್ ಮತ್ತು ಆರ್.ನಾಗೇಂದ್ರರಾವ್ ಅಕೌಂಟ್ ನಂ: 6321009 637473	1600000	5200000	20.12.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ನಜರ್‌ಬಾದ ಮೊಹಲ್ಲಾ, ಕಾಮಟಗೇರಿ 1ನೇ ಕ್ರಾಸ್, ಮರುಗದೇವಿ ದೇವಸ್ಥಾನದ ರಸ್ತೆ ಮನೆ ಮನೆ ನಂ. 522, 522/1, ಅಳತೆ ಪೂ+ಪ 37ಅಡಿ, ದ+ಉ 50ಅಡಿ, ಪೂರ್ವಕ್ಕೆ –ಮರುಗದೇವಿ ದೇವಸ್ಥಾನದ ರಸ್ತೆ, ಪಶ್ಚಿಮಕ್ಕೆ–ರಾಮಣರವರ ಮನೆ, ಉತ್ತರಕ್ಕೆ–ನಾಗರಾಜುರವರ ಮನೆ, ದಕ್ಷಿಣಕ್ಕೆ– ರಸ್ತೆ
3	ಹೆಚ್.ಗಂಗಾಧರ ಮತ್ತು ಧನಲಕ್ಷ್ಮಿ ಅಕೌಂಟ್ ನಂ: 6321026 637440	1450000	2200000	21.12.2023 ಬೆಳಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಎನ್.ಆರ್.ಮೊಹಲ್ಲಾ, ಕೆಸರೆ ಬೆಲವತ್ತ EWS 182E, KHB RS Naidu Nagar, ಅಳತೆ ಪೂ+ಪ 3.35ಮೀ, ದ+ಉ 9.00ಮೀ, ಪೂರ್ವಕ್ಕೆ –181ನೇ ಸ್ವತ್ತು, ಪಶ್ಚಿಮಕ್ಕೆ–183ನೇ ಸ್ವತ್ತು, ಉತ್ತರಕ್ಕೆ–193ನೇ ಸ್ವತ್ತು, ದಕ್ಷಿಣಕ್ಕೆ– ರಸ್ತೆ
4	ವಿ.ಮನೋಜ್ S/o ಟಿ.ವೆಂಕಟೇಶ್ ಅಕೌಂಟ್ ನಂ: 6321061	650000	2400000	21.12.2023 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ಸಿಟಿ, ನಜರ್‌ಬಾದ ಮೊಹಲ್ಲಾ, ಮಹಾರಾಷ್ಟ್ರ ರಸ್ತೆ, 2ನೇ ಕ್ರಾಸ್, ಅಳತೆ ಪೂ+ಪ 20ಅಡಿ, ದ+ಉ 22ಅಡಿ, ಪೂರ್ವಕ್ಕೆ –ಖಾಸಗಿ ಸ್ವತ್ತು, ಪಶ್ಚಿಮಕ್ಕೆ–ತಿಮ್ಮಯ್ಯಸ್ವತ್ತು, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ– ಕೃಷ್ಣಪ್ಪ ಸ್ವತ್ತು
5	ಎಂ.ನಾಗರಾಜ S/o ಮಹದೇವ ಅಕೌಂಟ್ ನಂ: 6321073	1400000	2700000	22–12–2023 ಬೆ. 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ಸಿಟಿ, ನಜರ್‌ಬಾದ ಮೊಹಲ್ಲಾ, ಇಟ್ಟಿಗೆ ಗೂಡು ಹೊಸಬೀದಿ, 3ನೇ ಕ್ರಾಸ್ ಮನೆ ನಂ.1202/1, ಅಳತೆ ಪೂ+ಪ 13.6ಅಡಿ, ದ+ಉ 27.6ಅಡಿ, ಪೂರ್ವಕ್ಕೆ –ರಂಗಪ್ಪ ಮನೆ, ಪಶ್ಚಿಮಕ್ಕೆ–ಗೋಪಾಲ ಮನೆ, ಉತ್ತರಕ್ಕೆ–ಹೊಸಬೀದಿ, ದಕ್ಷಿಣಕ್ಕೆ– ಸುಶೀಲರವರ ಮನೆ
6	ಖಾಸಿಂ ಷರೀಫ್ (Khasim Shariff) ರಿಜ್ವಾಯ ಅಮ್ರೀನ್ ಅಕೌಂಟ್ ನಂ: 6321094 637454	2500000	3700000	22.12.2023 ಮ. 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ಸಿಟಿ, ಲಷ್ಕರ ಮೊಹಲ್ಲಾ, ಅಶೋಕ ಪಶ್ಚಿಮದ 19ನೇ ಕ್ರಾಸ್ ಮನೆ ನಂ.2150, ಎಲ್–27, ಅಳತೆ ಪೂ+ಪ 12.6ಅಡಿ, ದ+ಉ 24.9ಅಡಿ, ಪೂರ್ವಕ್ಕೆ –ಮಹಬೂಬ ಖಾನ್, ಪಶ್ಚಿಮಕ್ಕೆ–ದಾವೂದ್ ಖಾನ್ ಮನೆ, ಉತ್ತರಕ್ಕೆ–ಮಹಬೂಬ ಖಾನ್ ಮನೆ, ದಕ್ಷಿಣಕ್ಕೆ– ರಸ್ತೆ

ಹರಾಜಿನ ನಿಯಮ ಮತ್ತು ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವವರು ರೂ. 25000 ಗಳನ್ನು ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ಇವರ ಪರವಾಗಿ ಪಡೆದ ಡಿ.ಡಿ. ಅಥವಾ ನಗದು ರೂಪದಲ್ಲಿ ಠೇವಣಿಯಾಗಿ ಇಡಬೇಕು. ಹರಾಜಿನ ನಂತರ ಈ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ಪಡೆಯಬಹುದು.
2. ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅದೇ ದಿನ ಬಿಡ್ ಮೊಬಲಗಿನ ಶೇ. 25 ರಷ್ಟು ಹಣವನ್ನು ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಮೂಲಕ ಪಾವತಿಸಬೇಕು ಮತ್ತು ಉಳಿದ ಶೇ. 25 ರಷ್ಟು ಹಣವನ್ನು 15 ದಿನಗಳೊಳಗೆ ಸಂದಾಯ ಮಾಡಬೇಕಾಗಿರುತ್ತದೆ.
3. ಯಶಸ್ವಿಯಾದ ಬಿಡ್‌ದಾರರು ಕಾನೂನು / ಪ್ರಸಂಗಿಕ ಖರ್ಚು – ವೆಚ್ಚಗಳಾದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ನೀರು, ವಿದ್ಯುತ್ ಇತ್ಯಾದಿ ಎಲ್ಲವನ್ನೂ ತಾವೇ ಭರಿಸಬೇಕಾಗಿರುತ್ತದೆ.
4. ಸದರಿ ಹರಾಜು ಸ್ವತ್ತು ಹೇಗಿದೆಯೋ ಹಾಗೆಯೇ ಹರಾಜು ಮಾಡಲಾಗುತ್ತದೆ.
5. ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಬಿಡ್‌ಅನ್ನು ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
6. ಸ್ವತ್ತಿನ ಪರಿಶೀಲನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್‌ದಾರರು ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಾಯಂಕಾಲ 4.30 ಗಂಟೆಯಿಂದ 6.30 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ದೂರವಾಣಿ : 2520026 / 2420829

ದಿನಾಂಕ: 05/12/2023, ಸ್ಥಳ : ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು

ಪ್ರಥಮ ವರ್ಷದ ಪುಣ್ಯಸ್ಮರಣೆ



ಎಸ್.ಮಹೇಶ್

06 ಡಿಸೆಂಬರ್ 2023

ದುಃಖತಪ್ತರು: ತಾಯಿ ಎಂ. ಜಯಮ್ಮನವರು

ಸಹೋದರರಾದ: ಎಸ್.ಶಂಕರ್, ಬಿಜೆಪಿ ಹಿರಿಯ ಮುಖಂಡರು, ಟಿ ನರಸೀಪುರ
ಎಸ್.ಅರುಣ್ ಕುಮಾರ್, ಹಿರಿಯ ವಕೀಲರು
ಕುಟುಂಬ ವರ್ಗದವರು

ನಮ್ಮನ್ನೆಲ್ಲ ಬಿಟ್ಟು ಅಗಲಿದ ಓ ಚೇತನವೇ
ನೀ ಎಂದೆಂದಿಗೂ ನಮ್ಮೊಂದಿಗಿರುವೆ.